ಸಂಪುಟ: 13 Volume | ಸಂಚಿಕೆ: 335 Issue | ಪುಟಗಳು 08 Pages | ಗುರುವಾರ 26 ಫೆಬ್ರವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಅನುಭವ ಎಂಬ ಗುರುವಿಗೆ ನಾವು ಸಲ್ಲಿಸಬೇಕಾಗಿರುವ ದಕ್ಷಿಣೆ ಅಪಾರವಾಗಿದೆ.

–ಫ್ರಾಂಕ್ಲಿನ್

ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಸಂಸ್ಕಾರ ಅವಶ್ಯ 6

ಉಪಚುನಾವಣೆಗೆ ಶಿವಸೇನಾ ಸ್ಪರ್ಧೆ 7

ಕಬ್ಬು ಬೆಳೆಗಾರರಿಗೆ ೩೦೦ ಕೋ. ಬಿಡುಗಡೆ 8

## ಒಲಿಂಪಿಕ್ಸ್ ಕ್ರೀಡಾಳು ರೂಪಿಸಲು ಬದ್ಧ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಅಂತಾರಾಷ್ಟ್ರೀಯ ಮಟ್ಟದ ಕಿಕ್‌ಬಾಕ್ಸಿಂಗ್ ಸ್ಪರ್ಧೆಯಲ್ಲಿ ಚಿನ್ನ, ಬೆಳ್ಳಿ ಪದಕ ಗೆದ್ದು ಬೀದರ್ ಜಿಲ್ಲೆಗೆ ಕೀರ್ತಿ ತಂದ ನಿಶಿಕಾಂತ್ ( ಚಿನ್ನದ ಪದಕ ), ಪರ್ವೇಜ್ (ಬೆಳ್ಳಿ ಪದಕ ) ಮತ್ತು ಇವರಿಗೆ ಯಶಸ್ವಿ ತರಬೇತಿ ನೀಡಿದ ತರಬೇತುದಾರ ಸುವಿತ್ ಮೊರೆ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮತ್ತು ಸಂಸದ ಸಾಗರ ಖಂಡ್ರೆ ಅವರು ಸನ್ಮಾನಿಸಿ, ಶುಭ ಹಾರೈಸಿದ್ದರೆ.

ಇಲ್ಲಿನ ಜಿಲ್ಲಾ ಉಸ್ತುವಾರಿ ಸಚಿವ ಖಂಡ್ರೆ ನಿವಾಸದಲ್ಲಿ ಕ್ರೀಡಾಪಟುಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸನ್ಮಾನಿಸಿ, ಯುವಜನತೆ ಕಿಕ್‌ಬಾಕ್ಸಿಂಗ್‌ನಲ್ಲಿ ಹೆಚ್ಚಿನ ಆಸಕ್ತಿ ವಹಿಸಿ, ಸಕ್ರಿಯವಾಗಿ ಪಾಲ್ಗೊಳ್ಳಲು ಪೂರಕವಾದ ವಾತಾವರಣವನ್ನು ನಿರ್ಮಿಸಲಾಗುವುದು



ಎಂದಿದ್ದಾರೆ. ಸಂಸದ ಸಾಗರ ಖಂಡ್ರೆ ಮಾತನಾಡಿ, ಕ್ರೀಡಾಪಟುಗಳಿಗೆ ಯಾವುದೇ ರೀತಿಯ ತಾಂತ್ರಿಕ ಅಥವಾ ಆರ್ಥಿಕ ಅಡೆತಡೆಗಳು ಎದುರಾಗದಂತೆ ನಮ್ಮ ಸರಕಾರ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಸದಾ ಬೆಂಬಲವಾಗಿ ನಿಲ್ಲಲಿದ್ದಾರೆ ಎಂದು ಅಭಯ ನೀಡಿದ್ದಾರೆ.

## ಇಸ್ರೇಲ್–ಭಾರತ ಚಾರಿತ್ರಿಕ ಮೈತ್ರಿ

• ಮಲ್ಲಮ್ಮ ನುಡಿ ವಾರ್ತೆ ಹೊಸದಿಲ್ಲಿ

ವೈರಿಗಳಿಂದಲೇ ಸುತ್ತುವರೆದಿರುವ ಮಧ್ಯಪ್ರಾಚ್ಯದ ಪುಟ್ಟ ರಾಷ್ಟ್ರ ಇಸ್ರೇಲ್, ತನ್ನ ಅಸ್ತಿತ್ವದ ಉಳಿವಿಗಾಗಿ ನಿರಂತರ ಸಂಘರ್ಷ ಮಾಡುತ್ತಲೇ ಬಂದಿದೆ. ತನಗಿರುವ ಜಾಗತಿಕ ಬೆಂಬಲವನ್ನು ವಿಸ್ತರಿಸಿಕೊಳ್ಳುವ ಪ್ರಯತ್ನದಲ್ಲಿರುವ ಇಸ್ರೇಲ್, ತನ್ನ ಗೆಳೆಯರ ಬಳಗದಲ್ಲಿ ಭಾರತಕ್ಕೆ ಪ್ರಾಮುಖ್ಯತೆ ನೀಡುತ್ತಿದೆ. 2014ರ ಬಳಿಕ ಭಾರತ–ಇಸ್ರೇಲ್ ದ್ವಿಪಕ್ಷೀಯ ರಾಜತಾಂತ್ರಿಕ ಸಂಬಂಧ ಕೂಡ ಪ್ರಮುಖ ಘಟ್ಟವನ್ನು ತಲುಪಿದೆ. ಈ ಮಧ್ಯೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಫೆ.25 ರಿಂದ ಎರಡು ದಿನಗಳ ಇಸ್ರೇಲ್ ಪ್ರವಾಸ ಕೈಗೊಂಡಿದ್ದಾರೆ. ಪ್ರಧಾನಿ ಮೋದಿ ಇಸ್ರೇಲ್ ಭೇಟಿ ಐತಿಹಾಸಿಕ ಮಹತ್ವ ಪಡೆದುಕೊಳ್ಳಲಿದೆ ಎಂದು ವಿಶ್ಲೇಷಿಸಲಾಗಿದೆ. ಇದಕ್ಕೆ ಪೂರಕವಾಗಿ ಇಸ್ರೇಲ್ ಪ್ರಧಾನಿ



ಬೆಂಜಮಿನ್ ನೆತನ್ಯಾಹು ಈ ಮೈತ್ರಿಯಲ್ಲಿ ಭಾರತದ ಪಾತ್ರವನ್ನು ಅತ್ಯಂತ ಪ್ರಮುಖ ಎಂದು ಬಣ್ಣಿಸಿದ್ದಾರೆ.


# ಕಾತರ ಹೆಚ್ಚಿಸಿದ ಕ್ಯಾಬಿನೆಟ್

### ಇಂದು ಸಚಿವ ಸಂಪುಟ ಸಭೆ | ಹಲವು ಜ್ವಲಂತ ವಿಚಾರಗಳ ಚರ್ಚೆ ಸಾಧ್ಯತೆ | ಸಿಎಂ, ಡಿಸಿಎಂ ಉಪಸ್ಥಿತಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಇಂದು ಸಂಜೆ (ಗುರುವಾರ) ಸಚಿವ ಸಂಪುಟ ಸಭೆ ನಡೆಯಲಿದೆ. ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಕ್ಯಾಬಿನೆಟ್ ಮೀಟಿಂಗ್ ಜರುಗಲಿದ್ದು, ಕ್ಯಾಬಿನೆಟ್ ಮೀಟಿಂಗ್ ನಲ್ಲಿ ನೇಮಕಾತಿ ವಿಚಾರಕ್ಕೆ ಚರ್ಚೆ ಆಗುವ ಸಾಧ್ಯತೆ ಇದೆ. ಜೊತೆಗೆ, ಸಂಪುಟ ಪುನಾರಚನೆ, ಹೊಸಬರಿಗೆ ಮಂತ್ರಿ ಪಟ್ಟ ಸೇರಿದಂತೆ ಅನೇಮಕ ಸಮಸ್ಯೆಗಳ ಬಗ್ಗೆ ಸುದೀರ್ಘ ಚರ್ಚೆ ನಡೆದು ನಿರ್ಧಾರ ಕೈಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎಂದು ಮೂಲಗಳು ಖಚಿತ ಪಡಿಸಿವೆ.

**ಸರ್ಕಾರಕ್ಕೆ ಬಿಸಿ:** ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಉದ್ಯೋಗಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದು ಆಗ್ರಹಿಸಿ ಧಾರವಾಡದಲ್ಲಿ ನಡೆಯುತ್ತಿರುವ ಯುವಕರ ಹೋರಾಟದ ಬಿಸಿ ಸರ್ಕಾರಕ್ಕೆ ತಟ್ಟುತ್ತಿದೆ. ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ (ಅಕ್ಸಾ) ನೇತೃತ್ವದಲ್ಲಿ ಹೋರಾಟ ನಡೆಯುತ್ತಿದ್ದು, ಸಹಸ್ರಾರು ಸಂಖ್ಯೆಯಲ್ಲಿ ಯುವಕರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಇದನ್ನು ಗಂಭೀರವಾಗಿ ಪರಿಗಣಿಸಿದೆ.



**ಶಾಸಕರು ಬರೆದ ಪತ್ರದಲ್ಲಿ?**

ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯ ನಾಯಕತ್ವ ಮತ್ತು ಕಾಂಗ್ರೆಸ್ ಹೈಕಮಾಂಡ್‌ಗೆ ಸಲ್ಲಿಸಿದ ಮನವಿಯಲ್ಲಿ, ಕನಿಷ್ಠ ಐದು ಮೊದಲ ಬಾರಿಗೆ ಆಯ್ಕೆಯಾದ ಶಾಸಕರನ್ನು ಸಚಿವರಾಗಿ ಸೇರಿಸಬೇಕು ಎಂದು ಮನವಿ ಮಾಡಿದ್ದಾರೆ. ನಾಡಿನ ಜನರು ಕಾಂಗ್ರೆಸ್ ಪಕ್ಷದಿಂದ 38 ಸದಸ್ಯರನ್ನು ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆ ಮಾಡಿದ್ದಾರೆ. ಅಂದರೆ ವಿಧಾನಸಭೆಯಲ್ಲಿ ಹೊಸ ಯುವ ಮುಖ ನೋಡಲು ಬಯಸುತ್ತಿದ್ದಾರೆ ಎಂದು ಶಾಸಕರು ವಿವರಿಸಿದ್ದಾರೆ.

**ಖಾಲಿ ಹುದ್ದೆ ಭರ್ತಿ ಶೀಘ್ರ**

ಉದ್ಯೋಗಕ್ಕಾಗಿ ಪ್ರತಿಭಟನೆ ವಿಚಾರವಾಗಿ ಪ್ರತಿಕ್ರಿಯಿಸಿರುವ ಸಚಿವ ಪ್ರಿಯಾಂಕ್ ಖರ್ಗೆ, ನಮ್ಮ ಸರ್ಕಾರ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಬದ್ಧ. ಯುವಕರ ತೊಂದರೆ ಬಗ್ಗೆ ಅರಿವಿದೆ. ಹಿಂದೆ ಕೂಡ ವಿರೋಧ ಪಕ್ಷದಲ್ಲಿದ್ದಾಗ ಅವರಿಗೆ ಸ್ಪಂದಿಸಿದ್ದೆವು. ಈಗ ಸರ್ಕಾರದ ಜವಾಬ್ದಾರಿ ಇದೆ. ಅದನ್ನು ನಿರ್ವಹಿಸುತ್ತೇವೆ. ಕೆಲವು ಕಾನೂನಿನ ತೊಡಕು ಇದೆ, ಹಿಂದೆ ಅವೆಲ್ಲ ಇರಲಿಲ್ಲ. ನಮ್ಮ ಇಲಾಖೆ ಸೇರಿದಂತೆ ಬೇರೆ ಬೇರೆ ಇಲಾಖೆಯಲ್ಲಿ 40,000 ಹುದ್ದೆ ತುಂಬಿದ್ದೇವೆ ಎಂದಿದ್ದಾರೆ.

**ಪ್ರತಿಪಕ್ಷಗಳ ವಾಗ್ದಾಳಿ**

ಯುವಜನರ ಹೋರಾಟದ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್ ಅಶೋಕ್ ವಾಗ್ದಾಳಿ ನಡೆಸಿದ್ದಾರೆ. ಕಾಂಗ್ರೆಸ್ ಸರ್ಕಾರದ ಆರನೇ ಗ್ಯಾರಂಟಿ ಅರಾಜಕತೆ ಗ್ಯಾರಂಟಿಯಾಗಿದೆ. ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳಿಂದ ನೇಮಕಾತಿಗೆ ಆಗ್ರಹಿಸಿ ಪ್ರತಿಭಟನೆ ನಡೆಯುತ್ತಿದೆ. ಖಾಲಿ ಹುದ್ದೆ ಭರ್ತಿ ಸೇರಿ ವಿವಿಧ ಬೇಡಿಕೆಗೆ ಆಗ್ರಹಿಸಿ ರಾಜ್ಯ ಸರ್ಕಾರಿ ವೈದ್ಯರಿಂದ ಮಾ.11 ರಿಂದ ಒಪಿಡಿ ಬಂದ್ ಮಾಡಲಾಗಿದೆ. 37,000 ಕೋಟಿ ಬಾಕಿಗೆ ಆಗ್ರಹಿಸಿ ಗುತ್ತಿಗೆದಾರರಿಂದ ಮಾ.6ರಂದು ಕಾಮಗಾರಿ ಸ್ಥಗಿತಗೊಳಿಸಿ ಪ್ರತಿಭಟನೆ ಎಂದು ಗಮನ ಸೆಳೆದಿದ್ದಾರೆ.

**ಪಕ್ಷಕ್ಕೆ ಹೊಸ ರಕ್ತ ಬೇಕು: ಡಿಸಿಎಂ**

ಸಚಿವ ಸಂಪುಟಕ್ಕೆ ಹೊಸಬರನ್ನು ಸೇರಿಸುವ ಅಗತ್ಯವಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಲವಾಗಿ ಸಮರ್ಥಿಸಿದ್ದಾರೆ. ಹಳೆಯ ನಾಯಕತ್ವವು ಸದಾಕಾಲ ಮುಂದುವರಿಯಲು ಸಾಧ್ಯವಿಲ್ಲ, ಪಕ್ಷದ ಭವಿಷ್ಯಕ್ಕಾಗಿ ಹೊಸ ಚಿಂತನೆ ಇರುವವರು, ಹೊಸ ಉತ್ಸಾಹ ಇರುವವರು ಹೊಸ ಪೀಳಿಗೆಯ ಹುರುಪಿನಿಂದ ಕೆಲಸ ಮಾಡುವ ನಾಯಕರು ಬರಬೇಕು. ಪಕ್ಷಕ್ಕೆ ಹೊಸ ರಕ್ತ ಮತ್ತು ಹೊಸ ಚಿಂತನೆ ಅಗತ್ಯ. ಹೊಸಬರನ್ನು ಒಳಗೊಳ್ಳುವುದನ್ನು ನಾನು ಬೆಂಬಲಿಸುತ್ತೇನೆ ಎಂದಿದ್ದಾರೆ.

## ಸಿಎಂ, ಉಪ ಮುಖ್ಯಮಂತ್ರಿ ಸುಳ್ಳಾಟ ಸಾಕು..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳು ಈ ಸುಳ್ಳಾಟ, ಕಳ್ಳಾಟವನ್ನು ನಿಲ್ಲಿಸಬೇಕು. 16 ಬಜೆಟ್ ಮಂಡಿಸಿ ದೇವರಾಜ ಅರಸು ಅವರ ದಾಖಲೆಯನ್ನು ಮುರಿದ ಅನುಭವಿ ಮುಖ್ಯಮಂತ್ರಿಗಳು ನಾಡಿನ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕೊಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಗ್ರಹಿಸಿದ್ದಾರೆ.



ಅವರು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಸುಳ್ಳು ಹೇಳುವುದು ಬಿಟ್ಟರೆ ಬೇರೇನನ್ನೂ ಮಾಡಲು ಇವರಿಗೆ ಸಾಧ್ಯವಾಗಿಲ್ಲ. ಕಾಂಗ್ರೆಸ್ ಸರಕಾರದ ಮನೆದೇವರೇ ಸುಳ್ಳು ಎಂದು ದೂರಿದ್ದಾರೆ.

ಏನೇ ಸಮಸ್ಯೆಗಳು ಬಂದರೂ ಹಿಂದಿನ ಬಿಜೆಪಿ ಸರಕಾರವನ್ನು ದೂರುತ್ತಾರೆ. ಕೇಂದ್ರ ಸರಕಾರದ ಮೇಲೆ ಜವಾಬ್ದಾರಿ ಹಾಕುವಂಥ ಕುತಂತ್ರವನ್ನು ಕಾಂಗ್ರೆಸ್ ಸರಕಾರ ಕಳೆದ 3 ವರ್ಷಗಳಿಂದ ನಿರಂತರವಾಗಿ ಮಾಡಿಕೊಂಡು ಬರುತ್ತಿದೆ ಎಂದಿದ್ದಾರೆ.

## ರಾಜ್ಯದಲ್ಲಿ ಎಐ ಡೇಟಾ ಹಬ್ ಅಭಿವೃದ್ಧಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಇಎಸ್‌ಡಿಎಂ ವಲಯದ ಬೆಳವಣಿಗೆಗೆ ಪೂರಕವಾಗಿ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದ ಹಲವು ಕಡೆ ವಿವಿಧ ಸಾಮರ್ಥ್ಯದ ಎಐ ಡಾಟಾ ಸೆಂಟರ್ ವಲಯಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆ.



ಕೈಗಾರಿಕಾ ಬೆಳವಣಿಗೆಯನ್ನು ಗಮನದಲ್ಲಿ ಇಟ್ಟುಕೊಂಡು ಖನಿಜ ಭವನದಲ್ಲಿ ಬುಧವಾರ ಆಯೋಜಿಸಿದ್ದ ಇ.ಎಸ್.ಡಿ.ಎಂ ಮತ್ತು ಕೋರ್ ಮ್ಯಾನಫ್ಯಾಕ್ಚರಿಂಗ್ ವಿಷನ್ ಗ್ರೂಪುಗಳ ಸಭೆಯಲ್ಲಿ ಅವರು ಮಾತನಾಡಿ, ಮೂರು ರೀತಿಯ ಡಾಟಾ ಸೆಂಟರ್‌ಗಳು ಇದ್ದು, 500 ಮೆಗಾವ್ಯಾಟ್ ಮತ್ತು ಅದಕ್ಕಿಂತ ದೊಡ್ಡ ಸಾಮರ್ಥ್ಯದ ಹೈಬರ್ಸ್ಕೇಲರ್ ಡಾಟಾ ಸೆಂಟರ್ ಸ್ಥಾಪಿಸಲು ಪೂರಕವಾದ ವಾತಾವರಣ ನಿರ್ಮಿಸಲಾಗುವುದು ಎಂದು ವಿವರಿಸಿದ್ದಾರೆ.

## ಮಲ್ಲಮ್ಮ ನುಡಿ

**ಯುಗಾದಿ ವಿಶೇಷಾಂಕ- 2026**

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮ ನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## 24 ಎಂಎಲ್ಸಿಗಳಿಂದಲೂ ಹೈಗೆ ಪತ್ರ

**ಬೆಂಗಳೂರು:** ಇತ್ತೀಚೆಗಷ್ಟೇ ಸಚಿವ ಸಂಪುಟ ಪುನಾರಚನೆಗೆ 31 ಶಾಸಕರು ಒತ್ತಾಯ ಮಾಡಿ ಹೈಕಮಾಂಡ್ ನಾಯಕರಿಗೆ ಪತ್ರ ಬರೆದ್ದರು. ಇದರ ಬೆನ್ನಲ್ಲೇ ಕಾಂಗ್ರೆಸ್‌ನ 24 ಮಂದಿ ವಿಧಾನ ಪರಿಷತ್ ಸದಸ್ಯರೂ ಪತ್ರ ಬರೆದಿರುವುದು ಕುತೂಹಲ ಮೂಡಿಸಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನ ಭೇಟಿಯಾದ ಪರಿಷತ್ ಸದಸ್ಯರು, ಸೂಕ್ತ ಪ್ರಾತಿನಿಧ್ಯ ನೀಡುವಂತೆ ಒತ್ತಾಯಿಸಿದ್ದಾರೆ. ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ನೀಡುವಂತೆ 24 ಎಂಎಲ್ಸಿಗಳು ಸಹಿ ಮಾಡಿದ ಪತ್ರವನ್ನ ಖರ್ಗೆ ಅವರಿಗೆ ಸಲ್ಲಿಸಿದ್ದಾರೆ.


## ಭಾಸ್ಕರ್‌ರಾವ್ ಸೋದರಳಿಯ ಪತ್ತೆ

**ಬೆಂಗಳೂರು:** 10 ದಿನಗಳಿಂದ ನಾಪತ್ತೆಯಾಗಿದ್ದ, ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಅವರ ಸೋದರಳಿಯ ಅನಿರುದ್ಧ್ ರಮೇಶ್ ಕೊನೆಗೂ ಪತ್ತೆ ಯಾಗಿದ್ದಾರೆ. ಅನಿರುದ್ಧ್ ದಕ್ಷಿಣ ಬೆಂಗಳೂರಿನ ಪ್ರತಿಷ್ಠಿತ ಕಾಲೇಜಿನಲ್ಲಿ ಮನೋವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದು, ಹನುಮಂತನಗರದಲ್ಲಿ ವಾಸವಿದ್ದರು. ಅನಿರುದ್ಧ್ ನಾಪತ್ತೆಯಾಗಿರುವ ಬಗ್ಗೆ ಫೆ.23 ರಂದು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದ ಭಾಸ್ಕರ್ ರಾವ್, ಅನಿರುದ್ಧ್ ರಮೇಶ್ ಅವರ ಪತ್ತೆಗೆ ಸಾಮಾಜಿಕ ಜಾಲತಾಣಗಳ ಬಳಕೆದಾರರಿಂದ ಸಹಾಯ ಕೋರಿದ್ದರು.

## ಅಂಬೇಡ್ಕರ್ ಸ್ಮಾರಕ ಪ್ರಗತಿಗೆ ಬೇಕು 25 ಕೋಟಿ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ತಾಲೂಕಿನ ವಾಡಿ ಪಟ್ಟಣದಲ್ಲಿ ನಿರ್ಮಾಣವಾಗಿತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ರಾಷ್ಟ್ರೀಯ ಸ್ಮಾರಕ ಅಭಿವೃದ್ಧಿಗೆ ಕರ್ನಾಟಕ ಸರ್ಕಾರದ 2026–27 ನೇ ಸಾಲಿನ ಬಜೆಟ್‌ನಲ್ಲಿ ಹೆಚ್ಚುವರಿಯಾಗಿ 25 ಕೋಟಿ ರೂಪಾಯಿಗಳ ಅನುದಾನ ಮಂಜೂರು ಮಾಡಬೇಕು ಎಂದು ಡಾ.ಅಂಬೇಡ್ಕರ್ ರಾಷ್ಟ್ರೀಯ ಸ್ಮಾರಕ ನಿರ್ಮಾಣ ಹೋರಾಟ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿಕ್ರಮ್ ತೇಜಸ್ ನೇತೃತ್ವದ ನಿಯೋಗ ಸಿಎಂ ಸಿದ್ದರಾಮಯ್ಯ, ಸಚಿವ ಡಾ.ಎಚ್.ಸಿ.ಮಹಾದೇವಪ್ಪ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮನವಿ ಸಲ್ಲಿಸಿದೆ. ಜಿಲ್ಲಾಧಿಕಾರಿಗಳ ಮೂಲಕ ಮನವಿ ಸಲ್ಲಿಸಿ, ರಾಜ್ಯ ಸರ್ಕಾರವು ಈಗಾಗಲೆ ಕಲಬುರಗಿ ಜಿಲ್ಲೆ



ಚಿತ್ತಾಪುರ ತಾಲೂಕಿನ ವಾಡಿ ಪಟ್ಟಣ್ಣದಲ್ಲಿ ಡಾ.ಅಂಬೇಡ್ಕರ್ ರಾಷ್ಟ್ರೀಯ ಸ್ಮಾರಕ ನಿರ್ಮಾಣ ಮಾಡಲು 10 ಎಕರೆ ಭೂಮಿ ಮಂಜೂರು ಮಾಡಿ 3 ಕೋಟಿ ಅನುದಾನ ನೀಡಿದ್ದಕ್ಕೆ ಕೃತಜ್ಞತೆ ಎಂದಿದ್ದಾರೆ. ಸ್ಮಾರಕದ ಭಾಗವಾಗಿ, ವಸ್ತು ಸಂಗ್ರಹಾಲಯ, ಪರಿಶಿಷ್ಟ ಸಮುದಾಯದ ವಿದ್ಯಾರ್ಥಿ ಯುವಜನರಿಗಾಗಿ ಕೌಶಲ ತರಬೇತಿ ಕೇಂದ್ರ, ಐಎಎಸ್, ಮತ್ತಿತರ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರಗಳ ನಿರ್ಮಾಣ ಮಾಡುವ ಯೋಜನೆಯಿದ್ದು, ಸರ್ಕಾರವು ಹಿಂದೆ ಮಂಜೂರು ಮಾಡಿರುವ ಅನುದಾನವು ಸಾಕಾಗುವುದಿಲ್ಲ ಎಂದು ವಿವರಿಸಿದ್ದಾರೆ. ಪಿಎಂಕೆ ಫ್ಯಾನ್ಸ್ ಕ್ಲಬ್‌ನ ಪ್ರಧಾನ ಕಾರ್ಯದರ್ಶಿ ರವಿ ಕೋಳಕೂರ, ಬೌದ್ಧ ಮಹಾ ಸಭಾದ ಜಿಲ್ಲಾ ಖಜಾಂಚಿ ಸಿದ್ದರಾಮ ನಡಗೇರಿ, ಸಾಮಾಜಿಕ ಕಾರ್ಯಕರ್ತೆ ರಮಾ ದೊಡ್ಡಮನಿ, ಭೀಮರಕ್ಷ ಸ್ವಾಭಿಮಾನಿ ಸೇನೆಯ ಅಧ್ಯಕ್ಷ ಮೈಲಾರಿ ದೊಡ್ಡಮನಿ ಇದ್ದರು.

## ಕೆಜಿಐಡಿ ವಿಮಾ ಸಂಸ್ಥೆ ಮಹತ್ವದ ತೀರ್ಪು

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲೆಯ ಗ್ರಾಹಕ ಆಯೋಗವು, ಸರ್ಕಾರಿ ನೌಕರರ ವಿಮಾ ಯೋಜನೆ ಬಗ್ಗೆ ದೂರುದಾರರ ಪರವಾಗಿ ಮಹತ್ವದ ತೀರ್ಪು ನೀಡಿದೆ. ಸರ್ಕಾರಿ ನೌಕರರ ವಿಮಾ ಯೋಜನೆ ಸಂಬಂಧಿತ ಮಹತ್ವದ ಗ್ರಾಹಕ ದೂರಿನಲ್ಲಿ, ಜಿಲ್ಲಾ ಗ್ರಾಹಕ ವ್ಯಾಜ್ಯಗಳ ಪರಿಹಾರ ಆಯೋಗವು ಸರ್ಕಾರ ಶಾಸನಬದ್ಧ ವಿಮಾ ಇಲಾಖೆಯ ವಿರುದ್ಧ ಕಾರಣಬದ್ಧ ತೀರ್ಪು ಕೊಟ್ಟಿದೆ.

ದೂರುದಾರರ ವಿವರ?: ಸಿದ್ದಮ್ಮಾ ಗಂಡ ಓಂಪ್ರಕಾಶ ಹಂಗರಗಿ ಇವರು ಸರಕಾರಿ ಸೇವೆಯಲ್ಲಿದ್ದು, ಸರ್ಕಾರದ ಕೆಜಿಐಡಿಯ ಕಡ್ಡಾಯ ವಿಮಾ ಯೋಜನೆಯ ಸದಸ್ಯರಾಗಿದ್ದಾರೆ. ಇವರು ತಮ್ಮ ಕೆಜಿಐಡಿ ಸಂಖ್ಯೆಯಡಿ 07 ಪಾಲಿಸಿ ಹೊಂದಿದ್ದು, ಈ 07 ಪಾಲಸಿಗಳ ಮೇಲೆ, 2008, 2012 ಹಾಗೂ 2015 ರಲ್ಲಿ ಒಟ್ಟು 3 ಸಾಲ ಪಡೆದಿದ್ದಾರೆ. 01.25 ರಂದು 55 ವರ್ಷ ವಯಸ್ಸು ಪೂರೈಸಿ ತಮ್ಮ 07 ವಿಮೆ ಪಾಲಿಸಿಗಳ ಮುಕ್ತಾಯದ ಬಳಿಕ ಪಾವತಿಯಾಗಬೇಕಾದ ಒಟ್ಟು ರೂ.10,99,260/– ಮೊತ್ತದಿಂದ ರೂ.21,016/– ಕೆ.ಜಿ.ಐ.ಡಿ. ಬೀದರ್ ಕಾರ್ಯಾಲಯದವರು ಬಾಕಿ ಸಾಲದ ಕಂತುಗಳು ಬಾಕಿ ವಿಮಾ ಹಣ ಕಂತು, ಈ ಕಂತುಗಳ ಮೇಲೆ ಬಾಕಿ ಇದ್ದ ದಿನಗಳಿಂದ ಬಡ್ಡಿ ರೂಪದಲ್ಲಿ ಯಾವುದೇ ಪೂರ್ವ ಸೂಚನೆ ಇಲ್ಲದೆ ಮುಕ್ತಾಯ ಮೊತ್ತದ ಪಾವತಿಯಲ್ಲಿ ತಡೆಹಿಡಿದಿತ್ತು. ದೂರುದಾರರು ಕೆ.ಜಿ.ಐ.ಡಿ ಯವರ ಈ ನಿರ್ಧಾರದ ಬಗ್ಗೆ ಪತ್ರ ಮೂಲಕ ಕಟಾವಣೆಯ ಬಗ್ಗೆ ವಿವರಣೆ ಕೇಳಲಾಗಿ, ಅವರು ಅಸಮರ್ಪಕ ಉತ್ತರ ನೀಡಲಾಗಿ ಮನನೊಂದು ಬೀದರ್ ಗ್ರಾಹಕ ಆಯೋಗದಲ್ಲಿ ದೂರು ದಾಖಲಿಸಿದ್ದರು. ಇದಕ್ಕೆ ಕೆ.ಜಿ.ಐ.ಡಿ ವಿಮಾ ಸಂಸ್ಥೆಯು ಆಡಳಿತಾತ್ಮಕ ಲೋಪ, ಗಣಕೀಕೃತ ವ್ಯವಸ್ಥೆಯ ತಾಂತ್ರಿಕ ದೋಷ ನೆಪವೊಡ್ಡಿ 21,016/– ಮೊತ್ತವನ್ನು ಕಡಿತಗೊಳಿಸಿದ್ದರು. ವಿಮಾದಾರರಿಗೆ ಮುಂಚಿತವಾಗಿ ನೋಟಿಸ್ ನೀಡದೆ ಯಾವುದೇ ಕಡಿತ ವಿಳಂಬ ಮಾಡುವುದು ನಿಯಮಗಳ ನೇರ ಉಲ್ಲಂಘನೆ, ಇದು ಸೇವಾ ನ್ಯೂನತೆ –ನಿರ್ಲಕ್ಷ್ಯ ಎಂದು ಪರಿಗಣಿಸಲಾಗಿದೆ ಎಂದು ಆಯೋಗವು ಸ್ಪಷ್ಟಪಡಿಸಿದೆ.

## ಇಂದು ಭಾವೈಕ್ಯತೆಯ ರಥೋತ್ಸವ




• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ತಾಲೂಕಿನ ಮಂಗಳೂರು ಗ್ರಾಮದ ಶ್ರೀ ಮಂಗಳೇಶ್ವರ ಮಹಾರಥೋತ್ಸವ ಫೆ. 26ರ ಗುರುವಾರ ಸಾಯಂಕಾಲ 5:00 ಗಂಟೆಗೆ ನಡೆಯುವುದಾಗಿ ಭಕ್ತ ಮಂಡಳಿ ತಿಳಿಸಿದೆ. ಗ್ರಾಮದ ಆರಾಧ್ಯ ದೈವ ಮಂಗಳೇಶ್ವರಸ್ವಾಮಿಯ ಜಾತ್ರಾ ಮಹೋತ್ಸವ ಯಾವುದೇ ಜಾತಿ, ಧರ್ಮ ಭೇದವಿಲ್ಲ. ಜಾತ್ರೆ ನಿಮಿತ್ತ 20.2.2026 ರಿಂದಲೇ ಅನೇಕ ಧಾರ್ಮಿಕ ಕಾರ್ಯಕ್ರಮಗಳು ನೆರವೇರಿವೆ. 26.2.26 ರಂದು ಮಂಗಳೇಶ್ವರನಿಗೆ ಅಭಿಷೇಕ, ಅನ್ನ ಸಂತರ್ಪಣೆ, 4:30ಕ್ಕೆ ಮಹಾ ರಥೋರ್ತ್ಸವ ನಡೆಯಲಿದೆ. . 27.2.26ರಂದು ಮನರಂಜನೆ ಕಾರ್ಯಕ್ರಮ, ಶಿವ ಭಜನೆ ಕೀರ್ತನೆ ನಾಟಕ ಸಿನಿಮಾ ಬಯಲಾಟ, 28.2.26 ರಂದು ಅಶ್ವ ರೂಢನಾಗಿ ಗೃಹಪ್ರವೇಶ ಕುಡುಬಿನ ಕಾಳಗ ರಾತ್ರಿ 10 ಗಂಟೆಗೆ ಪರಶಿವನ ವಿಸರ್ಜನೆ ಇದೆ ಎಂದು ವಿವರಿಸಿದೆ.

**ಚುನಾವಣೆ ನಡೆದರೆ ರಾಜ್ಯದ ಜನ ಕಾಂಗ್ರೆಸ್ ತಿರಸ್ಕರಿಸಲಿದ್ದಾರೆ. ಸ್ಥಳೀಯ ಚುನಾವಣೆಗಳಲ್ಲಿ ಕಾಂಗ್ರೆಸ್ ಬೀದಿಗೆ ಬರುತ್ತೆ: ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ**

# ಪಿಯುಸಿ ಪರೀಕ್ಷೆ ಪಾರದರ್ಶಕವಾಗಿರಲು ಸೂಚನೆ: ಶಿವಾನಂದ ಕರಾಳೆ



• ಮಲ್ಲಮ್ಮ ನುಡಿ ವಾರ್ತೆ, ಬೀದರ

ಜಿಲ್ಲೆಯಲ್ಲಿ 2026ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯನ್ನು ಪಾರದರ್ಶಕವಾಗಿ ಹಾಗೂ ಅತ್ಯಂತ ವ್ಯವಸ್ಥಿತವಾಗಿ ನಡೆಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ದ್ವಿತೀಯ ಪರೀಕ್ಷೆ ಕುರಿತು ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದ್ವಿತೀಯ ಪಿಯುಸಿ ಪರೀಕ್ಷೆಗಳು ಫೆಬ್ರವರಿ.28 ರಿಂದ ಮಾರ್ಚ.17 ರವರೆಗೆ ನಡೆಯುವ ಪರೀಕ್ಷೆಗಾಗಿ ಜಿಲ್ಲೆಯಲ್ಲಿ 199 ಕಾಲೇಜು, 36 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಬೀದರ (15), ಭಾಲ್ಕಿ (05), ಔರಾದ-ಬಿ (03), ಹುಮನಾಬಾದ (08), ಬಸವಕಲ್ಯಾಣ (05) ಸೇರಿ ಒಟ್ಟು 36 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 21856 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ. ಪ್ರವೇಶ ಪತ್ರಗಳನ್ನು ಅನ್‌ಲೈನ್ ಮೂಲಕ ಎಲ್ಲ ಕಾಲೇಜುಗಳಿಗೆ ವಿತರಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಪ್ರತಿ ಪರೀಕ್ಷಾ ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರು ಸಂಪೂರ್ಣ ಜವಾಬ್ದಾರಿ ಹೊಂದಿದ್ದು, ನಿಯಮಗಳಂತೆ ಯಾವುದೇ ಲೋಪವಾಗದಂತೆ ಪರೀಕ್ಷೆ ನಡೆಸಬೇಕು. ಜಿಲ್ಲೆಯಲ್ಲಿನ ಸುಕ್ಮ ಪರೀಕ್ಷೆ ಕೇಂದ್ರಗಳಲ್ಲಿ ಕಟ್ಟೆಚರವಹಿಸಬೇಕು. ಪರೀಕ್ಷಾ ಕೇಂದ್ರದ ಮುಖ್ಯಸ್ಥರು ವಿದ್ಯಾರ್ಥಿಗಳಿಗೆ ಆಸನದ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕು.ನಕಲು ಅಥವಾ ಸಾಮೂಹಿಕ ನಕಲು ಕಂಡಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು. ಪರೀಕ್ಷಾ ಕೇಂದ್ರಗಳ ಸಮೀಪದಲ್ಲಿರುವ ಝೆರಾಕ್ಸ್ ಮತ್ತು ಕಂಪ್ಯೂಟರ್, ಸೈಬರ್ ಅಂಗಡಿಗಳನ್ನು ಮುಚ್ಚಿಸುವಂತೆ ಆದೇಶಿಸಲಾಗುವುದು ಎಂದರು. ಮಾರ್ಗಸೂಚಿಯಂತೆ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿ ಕಣ್ಗಾವಲಿನಲ್ಲಿ ಹಾಗೂ ವೆಬ್ ಕೌನ್ಸಿಂಗ ನಿರ್ವಹಣೆ ಮಾಡಲಾಗಿದೆ. ಪರೀಕ್ಷೆ ಕೊಠಡಿಯೊಳಗೆ ಎಲೆಕ್ಟಾನಿಕ್ ವಸ್ತುಗಳು, ಮೊಬೈಲ್, ಪೆನ್ ಡ್ರೈವ್, ಏರಫೋನ್, ಮೈಕ್ರೋ ಫೋನಗಳು, ಬ್ಲೂಟೂತ, ಸಾಧನ ಕೈಗಡಿಯಾರ ಅನುಮತಿಸಲಾಗುವುದಿಲ್ಲ. ವಿದ್ಯಾರ್ಥಿಗಳಾಗಲಿ, ಸಿಬ್ಬಂದಿಗಳಾಗಲಿ ಮೊಬೈಲ್ ಬಳಕೆ ಫೋಟೋಗ್ರಾಫ ಸಂಪೂರ್ಣ ನಿಷೇಧಿಸಲಾಗಿದೆ. ಪರೀಕ್ಷಾ ಕೇಂದ್ರದ ಹೊರಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆಂದರು. ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಮುಖ್ಯ ಅಧೀಕ್ಷಕರು ಕೊಠಡಿ ಮೇಲ್ವಿಚಾರಕರೊಂದಿಗೆ ಮುಂಚಿತವಾಗಿ ಸಭೆ ನಡೆಸಿ ನಿಯಮಗಳಂತೆ ಪರೀಕ್ಷೆ ನಡೆಸಲು ಸೂಚಿಸಬೇಕು. ಸುಸೂತ್ರ ಪರೀಕ್ಷೆಗೆ ಪೊಲೀಸ್ ಇಲಾಖೆ, ಖಜಾನೇ ಇಲಾಖೆ ಸಂಬಂಧಿಸಿದಂತೆ ಇಲಾಖೆಗಳ ಸಹಕಾರಕ್ಕೆ ಸೂಚಿಸಲಾಗಿದೆ. ಪರೀಕ್ಷಾ ಕೇಂದ್ರದ ಹೊರಗೆ ಜನಸಂದಣಿ ಮೇಲೆ ನಿಗಾ ಇಡಬೇಕು. ಯಾವುದೇ ರೀತಿಯ ದೂರುಗಳಿಗೆ ಪೊಲೀಸ್ ಕಂಟ್ರೋಲ್ ರೂಮಗೆ ತಿಳಿಸಬೇಕು. ಅಧಿಕಾರಿಗಳು ಜವಾಬ್ದಾರಿಯುತವಾಗಿ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಪರೀಕ್ಷಾ ಕೇಂದ್ರಗಳ ಸುತ್ತಲು 200 ಮೀಟರ ಪ್ರದೇಶ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿ ಇರಲಿದೆ ಎಂದು ತಿಳಿಸಿದರು.

ಈ ಸಭೆಯಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಚಂದ್ರಕಾಂತ ಶಹಾಬಾದಕರ್, ಪೊಲೀಸ್ ಇಲಾಖೆಯ ಅಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು, ಪರೀಕ್ಷಾ ಕೇಂದ್ರದ ಮುಖ್ಯಸ್ಥರು, ಮಾರ್ಗಾಧಿಕಾರಿಗಳು ಉಪಸ್ಥಿತರಿದ್ದರು.

# ಅಲೆಮಾರಿ ಜನಾಂಗವನ್ನು ಸದ್ಯ ಒಕ್ಕಲೆಬ್ಬಿಸಬೇಡಿ ಸೂಚನೆ: ಮೂರ್ತಿ

• ಮಲ್ಲಮ್ಮ ನುಡಿ ವಾರ್ತೆ, ಬೀದರ



ಕಳೆದ ಹಲವಾರು ವರ್ಷಗಳಿಂದ ನೌಬಾದ್ ಸುತ್ತಲಿನ ವಿವಿಧ ಪ್ರದೇಶಗಳಲ್ಲಿ ತಾತ್ಕಾಲಿಕ ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿರುವ ಅಲೆಮಾರಿ ಜನಾಂಗದವರನ್ನು ಸದ್ಯಕ್ಕೆ ಒಕ್ಕಲೆಬ್ಬಿಸದಂತೆ ಜಿಲ್ಲಾಡಳಿತಕ್ಕೆ ಸೂಚಿಸುವುದಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಎಲ್. ತಿಳಿಸಿದರು.

ಇಂದು ಅವರು ನೌಬಾದ್ ಹತ್ತಿರ ಚೌಳಿ ಕಮಾನ್ ಹತ್ತಿರದ ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ಗುಡಿಸಲು ನಿರ್ಮಿಸಿಕೊಂಡು ವಾಸಿಸುತ್ತಿರುವ ಸಿಂಧೋಳ/ ಮಾಂಗರವಾಡಿ ಅಲೆಮಾರಿ ಜನಾಂಗದವರನ್ನು ಭೇಟಿ ಮಾಡಿ ಮಾತನಾಡಿದರು.

ತಾವು ಸಹ ಈ ಕೆಳಸಮುದಾಯದಿಂದ ಬೆಳೆದಿದ್ದು, ಈ ಜನಾಂಗದವರ ಸ್ಥಿತಿ ತೀರ ಚಿಂತಾಜನಕವಾಗಿದೆ. ವಸತಿ, ಶಿಕ್ಷಣ, ಉದ್ಯೋಗ ವಿದ್ಯುತ್ ಹಾಗೂ ಶೌಚಾಲಯ ವಂಚಿತರಾಗಿರುವ ಈ ಜನಾಂಗಕ್ಕೆ ಖಾಯಂ ವಸತಿ ದೊರಕಿಸುವ ನಿಟ್ಟಿನಲ್ಲಿ ಸರಕಾರದ ಹಾಗೂ ಸಮಾಜ ಕಲ್ಯಾಣ ಸಚಿವರಾದ ಡಾ.ಹೆಚ್.ಸಿ.ಮಹಾದೇವಪ್ಪ ಅವರ ಗಮನಕ್ಕೆ ವರದಿ ಸಲ್ಲಿಸುವುದಾಗಿ ತಿಳಿಸಿದರು. ಸದ್ಯ 80 ಕುಟುಂಬಗಳು ನೌಬಾದ್‌ನ ಕೆಐಡಿಬಿ ಸರಕಾರಿ ಸ್ಥಳದಲ್ಲಿ ತಾತ್ಕಾಲಿಕವಾಗಿ ಗುಡಿಸಲು ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಇವರಿಗೆ 2 ಎಕರೆ ಪ್ರದೇಶದಲ್ಲಿ ಖಾಯಂ ವಸತಿ ನಿರ್ಮಿಸಲು ಬೇಡಿಕೆಯಿದ್ದು, ಬೀದರ ಜಿಲ್ಲಾಡಳಿತ ಹಾಗೂ ಸರಕಾರದ ಗಮನಕ್ಕೆ ತರಲಾಗುವುದೆಂದು ತಿಳಿಸಿದರು.

ಡಾ.ಮೂರ್ತಿ ಅವರು ಇಂದು ನಗರದ ವಿವಿಧ ವಸತಿ ನಿಲಯಗಳಿಗೆ ಭೇಟಿನೀಡಿ ವ್ಯವಸ್ಥೆಯನ್ನು ಪರಿಶೀಲಿಸಿ ಯಾವುದೇ ಸಮಸ್ಯೆಯಾಗದಂತೆ ಜವಾಬ್ದಾರಿ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಇದೇ ವೇಳೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಆಯೋಗದ ಅಧ್ಯಕ್ಷ ಡಾ.ಮೂರ್ತಿ ಎಲ್. ಅವರು ರಾಜಗೊಂಡ ಕಾಲೋನಿಗೆ ಭೇಟಿ ನೀಡಿ ಸಮಸ್ಯೆ ಆಲಿಸಿದರು.

ಈ ಸಂದರ್ಭದಲ್ಲಿ ಮಾಜಿ ಎಂ.ಎಲ್.ಸಿ.ಅರವಿಂದ ಕುಮಾರ ಅರಳಿ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಯೋಗೇಶ ಸೇರಿದಂತೆ ಅಲೆಮಾರಿ ಸಮಾಜದ ಮುಖಂಡರು, ಇನ್ನಿತರರು ಉಪಸ್ಥಿತರಿದ್ದರು.

## ನಿಧನ ವಾರ್ತೆ



ಕೆಂಭಾವಿ:

ಪಟ್ಟಣದ ಹಿರಿಯ ಜೀವಿ ನಿವೃತ್ತ ಶಿಕ್ಷಕ ಬಸವಂತ್ರಾಯಗೌಡ ಪಾಟೀಲ (96) ಬುಧವಾರ ನಿಧನರಾದರು. ಓರ್ವ ಪುತ್ರಿ, ಸೊಸೆ ಸೇರಿದಂತೆ ಸ್ಥಳಿಯ ಪತ್ರಕರ್ತ ಡಿ.ಸಿ ಪಾಟೀಲ ಸೇರಿ ಮೂವರು ಮೊಮ್ಮಕ್ಕಳು ಹಾಗೂ ಅಪಾರ ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಇಂದು (ಗುರುವಾರ) ಮದ್ಯಾಹ್ನ 12 ಗಂ, ಗೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಕಿಶೋರ ಕಾರ್ಮಿಕ ಮಗು ಪತ್ತೆ

ಬೀದರ ಕಾರ್ಮಿಕ ಆಯುಕ್ತರು ಬೆಂಗಳೂರು ಹಾಗೂ ಜಿಲ್ಲಾಧಿಕಾರಿಗಳು ಬೀದರ, ಕಾರ್ಮಿಕ ಅಧಿಕಾರಿಗಳು ಬೀದರ ಆದೇಶದಂತೆ ದಿನಾಂಕ 24-02-2026 ರಂದು ಮಕ್ಕಳ ಹಕ್ಕುಗಳ ಆಯೋಗ ನವದೆಹಲಿ ಹಾಗೂ ಮಾನ್ಯ ಕಾರ್ಮಿಕ ಆಯುಕ್ತರ ಆದೇಶದಂತೆ ಪ್ಯಾನ್ ಇಂಡಿಯಾ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕರ ರಕ್ಷಣೆ ಮತ್ತು ಪುನರ್ ವಸತಿ ಅಂಗವಾಗಿ ವಿವಿಧ ಇಲಾಖೆಯ ಜೊತೆ ಭಾಲ್ಕಿ ತಾಲೂಕಿನ ತಹಶೀಲ್ ಕಚೇರಿಯ ಸಭಾಂಗಣದಲ್ಲಿ ತಾಲೂಕು ಟಾಸ್ಕ್ ಫೋರ್ಸ್ ಸಭೆಯನ್ನು ತಹಶೀಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ನಂತರ ಭಾಲ್ಕಿ ತಾಲೂಕಿನ ವಿವಿಧ ಅಂಗಡಿ, ಬೇಕರಿ, ಗ್ಯಾರೇಜುಗಳಲ್ಲಿ ಪರಿಶೀಲನೆ ಮಾಡಿ ಕರಪತ್ರಗಳು ಸ್ಟಿಕರ್‌ಗಳನ್ನು ನೀಡುವುದರ ಮೂಲಕ ಜನಜಾಗೃತಿ ಮೂಡಿಸಲಾಯಿತು.

# ಸೇವಲಾಲ್ ಮಹರಾಜರ 287 ನೇ ಜಯಂತಿ ಉತ್ಸವದ ಭವ್ಯ ಮೆರವಣಿಗೆ



• ಮಲ್ಲಮ್ಮ ನುಡಿ ವಾರ್ತೆ, ಯಲಬುರ್ಗಾ

ಪಟ್ಟಣದಲ್ಲಿ ಬಂಜಾರ ಸಮಾಜದ ಧರ್ಮ ಗುರುಗಳಾದ ಹೇಮಗೀರಿ ಗೋಸಾವಿ ಬುವಾನವರ ಸಾನಿದ್ಯದಲ್ಲಿ ಶ್ರೀ ಸಂತ ಸೇವಾಲಾಲ್, ಮಹಾರಾಜರ 287ನೇ ಜಯಂತ್ಯೋತ್ಸವ ಪಟ್ಟಣದ ಪ್ರಮುಖ ರಾಜಬೀದಿಯಲ್ಲಿ ಭವ್ಯ ಮೇರವಣಿಗೆಯು ಬಂಜಾರ ಸಮಾಜದ ಪುರುಷರು ಹಾಗು ಮಹಿಳೆಯರು, ಯುವಸಮುದಾಯದವರು, ಸಕಲ ಕಲಾವಿದರು ತಮ್ಮ ನೃತ್ಯದೊಂದಿಗೆ ಹಾಗು ಸಾಂಸ್ಕೃತಿಕ ಮೇರವಣಿಗೆಯ ಮೂಲಕ ಮೇರವಣಿಗೆಯಲ್ಲಿ ಉಲ್ಲಾಸದಿಂದ ಕುಣಿದು ಕಾರ್ಯಕ್ರಮ ಯಶಸ್ವಿಗೆ ಮೇರಗು ತಂದರು. ಈ ಕಾರ್ಯಕ್ರಮದಲ್ಲಿ ಸರ್ವಧರ್ಮದವರು ಹಾಗು ಮುಖಂಡರು, ಅಧಿಕಾರಿಗಳು ಭಾಗವಹಿಸಿದ್ದರು.

# ಲಿಂಗೈಕ್ಯ ಅಯ್ಯಪ್ಪ ಶಿವಾಚಾರ್ಯರ ವೈಭವದ ಪುಣ್ಯಸ್ಮರಣೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಲಿಂಗೈಕ್ಯ ಅಯ್ಯಪ್ಪ ಶಿವಾಚಾರ್ಯರರು ಬ್ರಹನ್ಮಠ ಚಿಟಗುಪ್ಪ ಮತ್ತು ಚಾಂಗಲೇರಾ ಇವರ 56ನೇ ಪುಣ್ಯಸ್ಮರಣೋತ್ಸವದ ಅಂಗವಾಗಿ ಆತ್ಮ ಜ್ಯೋತಿ ಕಾರ್ಯಕ್ರಮವು ಫೆಬ್ರವರಿ 23ರಂದು ಸೋಮವಾರ ಬೆಳಗಿನ ಜಾವ 6 ಗಂಟೆಗೆ ಹಿರೇಮಠದ ಪೂಜ್ಯ ಗುರುಲಿಂಗ ಶಿವಾಚಾರ್ಯರ ಹಾಗೂ ಮರುಳಾರಾಧ್ಯ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ಕತೃಣಟಿಜಜ-ಜಿಟಿಜರ್ಜ ಗದ್ದುಗೆಗೆ ರುದ್ರಾಭಿಷೇಕ ಮತ್ತು ದೀಪ ಪ್ರಜ್ವಲಿಸಿ ನಂತರ ಶ್ರೀ ಸಂತ ಶಿರೋಮಣಿ ಮಡಿವಾಳೇಶ್ವರ ಗವಿಯಿಂದ ವಾದ್ಯ, ವೈಭವಗಳೊಂದಿಗೆ ಹೊರಟು ಊರಿನ ವಿವಿಧ ಮಾರ್ಗಗಳ ಮೂಲಕ ಶ್ರೀ ಗುರು ಅಯ್ಯಪ್ಪಾ ಸ್ವಾಮಿ ಹಿರೇಮಠಕ್ಕೆ ತಲುಪಿತು. ನಂತರ ಶ್ರೀ ಅಯ್ಯಪ್ಪ ಶಿವಾಚಾರ್ಯರ ಕತೃಣಟಿಜಜಜಿಟಿಜರ್ಜ ಗದ್ದುಗೆಗೆ ಮಹಾ ಮಂಗಳಾರತಿ ನೆರವೇರಿಸಿ, ಧರ್ಮಸಭೆ ಜರುಗಿತ್ತು. ನಂತರ ಮಹಾ ಪ್ರಸಾದ ಸೇವೆ ಜರುಗಿ-ತ್ತು. ಸಾಯಂಕಾಲ ವಿವಿಧ ಕಲಾ ತಂಡಗಳಿಂದ ಸಂಗೀತ ದರ್ಬಾರ, ಭಜನಾ ಕಾರ್ಯಕ್ರಮ ಜರುಗಿದವು. ಈ ಸಂದರ್ಭದಲ್ಲಿ ಅಪಾರ ಭಕ್ತಾಧಿಗಳು ಉಪಸ್ಥಿತರಿದ್ದರು.

# ಆಹಾರ ವಾಹಿನಿ: ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಕರ್ನಾಟಕ ಮರಾಠಾ ಸಮುದಾಯಗಳ ಅಭಿವೃದ್ಧಿ ನಿಗಮದಿಂದ 2025-26ನೇ ಸಾಲಿಗೆ ಆಹಾರ ವಾಹಿನಿ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಹಾರ ವಾಹಿನಿ ಯೋಜನೆಯಡಿ ಸ್ಥಳಾಂತರಿಸಬಹುದಾದ ತಿಂಡಿ ಮಳಿಗೆಗಳನ್ನು ನಾಲ್ಕು ಚಕ್ರಗಳ ಇವಿ ಗೂಡ್ಸ್ ವಾಹನಗಳನ್ನು ಅಗತ್ಯಕ್ಕೆ ತಕ್ಕಂತೆ ನವೀಕರಿಸಿ, ಫಲಾನುಭವಿಗಳಿಗೆ ವಿತರಿಸುವ ಯೋಜನೆಯಾಗಿದ್ದು, ನಿಗಮದಿಂದ ವಾಹನ ಖರೀದಿಗೆ 3 ಲಕ್ಷ ರೂ.ಗಳ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಉಳಿಕೆ ಮೊತ್ತವನ್ನು ಬ್ಯಾಂಕ್, ಹಣಕಾಸು ಸಂಸ್ಥೆಗಳ ಮೂಲಕ ಸಾಲ ಪಡೆಯಬಹುದಾಗಿದೆ.

ವಿಧಾನಸಭಾ ಕ್ಷೇತ್ರಗಳಾದ ಮುಧೋಳ, ಜಮಖಂಡಿ, ಬಾಗಲಕೋಟೆ, ಕ್ಷೇತ್ರದ ಮರಾಠ ಜನಾಂಗದ ಹಿಂದುಳಿದ ವರ್ಗಗಳ ಪ್ರವರ್ಗ-3ಬಿ ಅಡಿಯಲ್ಲಿ 2(ಎ) ರಿಂದ 2ಎ(ಎಫ್) ವರೆಗೆ ಸೇರಿದವರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ 3 ಲಕ್ಷ ಒಳಗಿರಬೇಕು. ವಯಸ್ಸು 21 ರಿಂದ 45 ವರ್ಷದೊಳಗಿರಬೇಕು. ಸೌಲಭ್ಯವನ್ನು ಪಡೆಯಲು ಸೇವಾಸಿಂಧು ತಂತ್ರಾಂಶದ ಮೂಲಕ ಮಾರ್ಚ 5ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕ ಎಂ.ಜಿ.ಬಿರಾದಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುರಿ,ಮೇಕೆ: ಫಲಾನುಭವಿಗಳ ಆಯ್ಕೆಗಾಗಿ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ಬೀದರದಿಂದ ಅನುಷ್ಠಾನವಾಗಬೇಕಾಗಿರುವ 2025-26ನೇ ಸಾಲಿನ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ (10+1) ಕುರಿ/ಮೇಕೆ ಘಟಕ ಸ್ಥಾಪನೆ ಯೋಜನೆಯಡಿ ಫಲಾನುಭವಿಗಳ ಆಯ್ಕೆಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಗೆ 24 ಪರಿಶಿಷ್ಟ ಜಾತಿ (ಎಸಿಪಿ), 14 ಪರಿಶಿಷ್ಟ ಪಂಗಡ (ಟಿಎಪಿ) ಗುರಿಯನ್ನು ನಿಗದಿಪಡಿಸಲಾಗಿದೆ. ಜಿಲ್ಲೆಯ ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ 2025-26ನೇ ಸಾಲಿನಲ್ಲಿ ಮಂಜೂರಾದ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆ ಅಡಿಯಲ್ಲಿ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೂಲಿ ಕಾರ್ಮಿಕರು, ಕೃಷಿ ಕಾರ್ಮಿಕರು ಮತ್ತು ಪಶುಸಂಗೋಪನೆಯಲ್ಲಿ ತೊಡಗಿಸಿಕೊಂಡ ಆಸಕ್ತರನ್ನು ಆಯ್ಕೆ ಮಾಡಲಾಗುವುದು. ಅರ್ಜಿದಾರರು 18 ರಿಂದ 60 ವರ್ಷ ವಯೋಮಿತಿ ಒಳಗಿನ, ಆಡಿ. ನಂಬರ ಇರುವ ಜಾತಿ ಪ್ರಮಾಣ ಪತ್ರ ಕಡ್ಡಾಯವಾಗಿ ಹೊಂದಿರಬೇಕು. ಮತ್ತು ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಂಡಿರಬೇಕು.

ಅರ್ಜಿಗಳನ್ನು ತಮ್ಮ ತಮ್ಮ ತಾಲ್ಲೂಕಿನ ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) ಪಶು ಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಕಛೇರಿಯಲ್ಲಿ ಪಡೆದು ದಿನಾಂಕ: 12-03-2026 ರ ಸಾಯಂಕಾಲ 5 ಗಂಟೆಯೊಳಗೆ ಸಲ್ಲಿಸಬೇಕು.

ಬೀದರ ತಾಲ್ಲೂಕಿನ ಅರ್ಜಿಗಳನ್ನು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಬೀದರ ಕಛೇರಿಯಿಂದ ಪಡೆದು ದಿನಾಂಕ: 12-03-2026 ರ ಸಾಯಂಕಾಲ 5 ಗಂಟೆಯೊಳಗೆ ಸಲ್ಲಿಸಬಹುದಾಗಿದೆ.


**LOST**

IMANORAMMA S/o MADEPPA R/o Shankar Mangalgi PinCode585329 Have Lost my Original Karnataka State Women's University, Vijapur, Document Name Provisional Passing Certificate, Document ID:12831814 If Found Please

**Contact 6360408053**



**IN THE COURT OF THE ADDL CIVIL JUDGE & J.M.F.C.. AT BASAVAKALYAN**
**Crl. Misc. No. 08/2026**

**Petitioner**
Namdev S/o Manika & others

**//Versus//**

**Respondent**
The Tahasildar, Basavakalyan.

**Sub: For issue of Death Certificate.**
**PETITION U/SEC 13(3) OF BIRTH AND DEATH REGISTRATION ACT 1969 PAPER PUBLICATION**

Whereas the above named petitioner has filed petition under section 13(3) of Birth & Death Registration Act 1969 for issue the direction to respondent to give death certificate of petitioner mother by name "Gujamma W/o Manikappa who was died on 26/08/2021 in his house at Village Hiranagaon, Tq: Basavakalyan, Dist; Bidar.

Hence this paper publication is issued to all concerned person to file necessary objection if any on 28/03/2026 at 11:00 A.M.

Given under my hand seal of the court on this 21/02/2026

**// By order of the court//**
**Chief Ministerial Officer**
**Civil judge & JMFC Court**
**Basavakalyan**


# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಸರಕಾರಿ ಅಧಿಕಾರಿಗಳ ಮೇಲೆ ಸರ್ಕಾರದ 'ಮೂರನೇ ಕಣ್ಣು' ಇರಲಿ

ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಸಾರ್ವಜನಿಕ ಹಣವೇ ಆಧಾರ. ಜನರು ತೆರಿಗೆ ರೂಪದಲ್ಲಿ ಕೊಡುವ ಹಣದಿಂದಲೇ ಸರ್ಕಾರದ ವ್ಯವಸ್ಥೆ ಸಾಗುತ್ತದೆ. ಆ ಹಣವನ್ನು ಸಮರ್ಪಕವಾಗಿ ಬಳಕೆ ಮಾಡುವುದು ಅಧಿಕಾರಿಗಳ ಕರ್ತವ್ಯ. ಆದರೆ ಇತ್ತೀಚಿನ ವರ್ಷಗಳಲ್ಲಿ ಕೆಲ ಸರಕಾರಿ ಅಧಿಕಾರಿಗಳು ತಮ್ಮ ಹುದ್ದೆಯ ದುರುಪಯೋಗ ಮಾಡಿಕೊಂಡು ಕೋಟಿ ಕೋಟಿ ರೂಪಾಯಿ ಸಂಪಾದಿಸುತ್ತಿರುವ ಪ್ರಕರಣಗಳು ಬಹಿರಂಗವಾಗುತ್ತಿವೆ. ಇದು ಪ್ರಜಾಪ್ರಭುತ್ವಕ್ಕೆ ದೊಡ್ಡ ಸವಾಲಾಗಿದೆ.

ಸರ್ಕಾರ ಸಂಬಳ, ಸೌಲಭ್ಯ, ನಿವೃತ್ತಿ ವೇತನ ಎಲ್ಲವನ್ನೂ ನೀಡಿದರೂ ಕೆಲವರು ಅಕ್ರಮ ಮಾರ್ಗದಲ್ಲಿ ಆಸ್ತಿ ಕಟ್ಟಿ ಕೊಳ್ಳುತ್ತಿರುವುದು ಜನರಲ್ಲಿ ನಂಬಿಕೆ ಕುಂದಿಸುತ್ತದೆ. ಜನಸೇವೆಯ ಹುದ್ದೆ ಲಾಭದಾಯಕ ಉದ್ಯಮವಾಗಿಬಿಟ್ಟರೆ, ಸತ್ಯನಿಷ್ಠ ಅಧಿಕಾರಿಗಳಿಗೆ ಸಹ ಕಳಂಕ ಬೀಳುತ್ತದೆ. ಆದ್ದರಿಂದ ಸರ್ಕಾರ "ಮೂರನೇ ಕಣ್ಣು" ಇಟ್ಟು ಕಟ್ಟುನಿಟ್ಟಿನ ನಿಗಾ ವಹಿಸಲೇಬೇಕು.

- **ನಿಗಾ ಯಾಕೆ ಅಗತ್ಯ?**
- **ಹುದ್ದೆ ದುರುಪಯೋಗ ತಡೆಯಲು**
- **ಸಾರ್ವಜನಿಕ ಹಣದ ದುರ್ಬಳಕೆ ನಿಲ್ಲಿಸಲು**
- **ಭ್ರಷ್ಟಾಚಾರಕ್ಕೆ ಭಯ ಹುಟ್ಟಿಸಲು**
- **ಸತ್ಯನಿಷ್ಠ ಅಧಿಕಾರಿಗಳಿಗೆ ರಕ್ಷಣೆ ಒದಗಿಸಲು**

ಕೇವಲ ವರ್ಗಾವಣೆ ಅಥವಾ ಎಚ್ಚರಿಕೆ ಸಾಕಾಗುವುದಿಲ್ಲ. ಅಕ್ರಮ ಆಸ್ತಿ ಪತ್ತೆಯಾದರೆ ತಕ್ಷಣ ಅಮಾನತು, ಸೇವೆಯಿಂದ ವಜಾ, ಮತ್ತು ಕಾನೂನು ಕ್ರಮ ಕೈಗೊಳ್ಳಬೇಕು. ಆಸ್ತಿ ಜಪ್ತಿ ಮಾಡುವಂತಹ ಕಠಿಣ ಕ್ರಮಗಳು ನಡೆದರೆ ಮಾತ್ರ ಇತರರಿಗೆ ಪಾಠವಾಗುತ್ತದೆ.

### ತಂತ್ರಜ್ಞಾನ ಆಧಾರಿತ ನಿಗಾ

ಇಂದಿನ ಡಿಜಿಟಲ್ ಯುಗದಲ್ಲಿ ಆಸ್ತಿ ವಿವರಗಳ ಆನ್‌ಲೈನ್ ಘೋಷಣೆ ಕಡ್ಡಾಯಗೊಳಿಸಬೇಕು. ಅಧಿಕಾರಿಗಳ ಆದಾಯ ಮತ್ತು ಆಸ್ತಿಗಳ ವಾರ್ಷಿಕ ಪರಿಶೀಲನೆ ನಡೆಯಬೇಕು. ದೂರುಗಳ ಪರಿಶೀಲನೆಗೆ ಸ್ವತಂತ್ರ ತನಿಖಾ ಸಂಸ್ಥೆಗಳು ಬಲಪಡಿಸಬೇಕು. ಜನರಿಂದ ಬಂದ ದೂರುಗಳಿಗೆ ರಕ್ಷಣೆಯ ವ್ಯವಸ್ಥೆ ಇರಬೇಕು.

### ಶಿಕ್ಷೆ ಖಚಿತವಾಗಲಿ

ಕಾನೂನು ಇದೆ, ಆದರೆ ಜಾರಿಯಲ್ಲಿ ಶಿಥಿಲತೆ ಇದ್ದರೆ ಪ್ರಯೋಜನವಿಲ್ಲ. ಭ್ರಷ್ಟಾಚಾರ ಸಾಬೀತಾದಲ್ಲಿ ವೇಗದ ನ್ಯಾಯಾಂಗ ಪ್ರಕ್ರಿಯೆ ನಡೆಯಬೇಕು. ವರ್ಷಗಳ ಕಾಲ ಪ್ರಕರಣಗಳು ಬಾಕಿ ಉಳಿಯುವುದು ತಪ್ಪು. ಶಿಕ್ಷೆ ಖಚಿತವಾದಾಗ ಮಾತ್ರ ಭ್ರಷ್ಟಾಚಾರ ಕಡಿಮೆಯಾಗುತ್ತದೆ.

### ಸಮಾರೋಪ

ಸರ್ಕಾರಿ ಹುದ್ದೆ ಗೌರವದ ಸ್ಥಾನ. ಅದು ಜನಸೇವೆಯ ಸಂಕಲ್ಪವಾಗಿರಬೇಕು, ಸಂಪಾದನೆಯ ಸಾಧನವಲ್ಲ. ಸರಕಾರ ಸಂಬಳ ಪಡೆಯುವ ಅಧಿಕಾರಿಗಳು ಅಕ್ರಮವಾಗಿ ಕೋಟಿ ಕೋಟಿ ಹಣ ಗಳಿಸುತ್ತಿದ್ದರೆ, ಅದಕ್ಕೆ ಹೊಣೆಗಾರಿಕೆ ನಿಗದಿ ಮಾಡಲೇಬೇಕು. ಸರ್ಕಾರ ಮೂರನೇ ಕಣ್ಣು ಇಟ್ಟು ನಿಗಾ ವಹಿಸಿ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ನೀಡಿದರೆ ಮಾತ್ರ ವ್ಯವಸ್ಥೆಯಲ್ಲಿ ಶುದ್ಧತೆ ಸಾಧ್ಯ. ಜನರ ವಿಶ್ವಾಸ ಉಳಿಸಲು ಇದು ಅವಶ್ಯಕ.


**CITATION**

**IN THE COURT OF THE ADDL. CIVIL JUDGE AND JMFC., AT HUMNABAD**
**CRL. MISC. No.29/2026.**

**Petitioners**

1. **Mallikarjun S/o Baswanappa**, Age: 71-year, Occu: Agricultur. R/o Village Nirna, Tq. Chitguppa.
2. **Kamlabai W/o Somlingappa.** Age: 68-year, Occu : House hold, R/o Village Chimmanchod, Tq. Chincholi. Dist. Kalaburagi.
3. **Chitralekha W/o Baburao.** Age: 57-year, Occu: House hold, R/o JP Nagar Bidar.

**Respondent:**

***The Registrar of Birth and Death through The Tahasildar Chitguppa. Sub:-Petition U/Sec. 13(3) of Birth and Death Registration Act-1969***

Whereas, the above mentioned petitioners have filed the petition under section 13(3) of Birth and Death Registration Act-1969 praying this Honorable Court to issue Death Certificate of Father of Petitioner No.1 to 3 by namely LATE. BASAVANAPPA S/O SIDDAPPA, who was died on 04.11.2025 at Village Nirna. Tq. Chitguppa. Dist. Bidar. The petitioners claiming the Death Certificate of said for transfer of property and other official purpose and home record.

Therefore, it is hereby proclaimed that if any persons have got any objection in this regard, may approach to this Court on 26.03.2026 at 11.00 AM in person or any authorized pleader to answer such claim otherwise the matter will be heard and determined in your absence as per law.

Given under my hand and seal of he court, this the 21-02-2026

**//By order of the court//**
**Chief Ministerial Officer,**
**Prl. Civil Judge &**
**JMFC Court, Humdabad**

# ಸೌಲಭ್ಯ ಪಡೆಯುವಲ್ಲಿ ಜನತೆಗೆ ವ್ಯಥೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣವನ್ನು ತಾಲ್ಲೂಕ ಕೇಂದ್ರವನ್ನಾಗಿ ಮಾಡಬೇಕು, ಶಾಶ್ವತ ಕುಡಿಯುವ ನೀರು, ಕೋಟೆ ಉತ್ಸವ ಮಾಡುವ ಸಲುವಾಗಿ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸ ಕಾವೇರಿಯಲ್ಲಿ ಬುಧುವಾರ ಭೇಟಿಯಾದ ಬಳಿಕ ನಾಗರಿಕರಲ್ಲಿ ವ್ಯಥೆ ಉಂಟಾಗಿದೆ.

ಮುದಗಲ್ ಪಟ್ಟಣದಲ್ಲಿ ಪ್ರತಿಭಟನೆ ಮಾಡಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಸಭೆ ಮಾಡಿ ಬುಧುವಾರ ಸಿ.ಎಂ ಬಳಿ ನಿಯೋಗ ತೆರಳಾಗಿತ್ತು. ಮುದಗಲ್ ಜನರಿಗೆ ತಾಲೂಕು ಮಾಡುವ ಬಗ್ಗೆ ಭರವಸೆ ನೀಡಿರುವ ಮಾತು ಸಿ.ಎಂ ತಪ್ಪಿದರಾ ಮುದಗಲ್ ಪಟ್ಟಣವನ್ನು ತಾಲೂಕ ಮಾಡಲು ಆಗುವದಿಲ್ಲ ಎಂದು ಹೇಳಿರುವದರ ಜೊತೆಗೆ–ಮುಂದಿನ ದಿನಮನಗಳಲ್ಲಿ ಗಮನಿಸುವೆ ಎಂದು ತಿಳಿಸಿರುವ ಮಾತಿನಿಂದ ಸಾರ್ವಜನಿಕರಿಗೆ ಬಹು ದಿನಗಳ ಬೇಡಿಕೆ ಮತ್ತೆ ಕನಸಾಗಿ ಹೋಗಿರುವ ಜನತೆ ವ್ಯಥೆಪಟ್ಟರು.

ವಿಧಾನಪರಿಷತ್ ಸದಸ್ಯ ಸಲೀಂ ಅಹಮದ್, ಸಚಿವ ಎಸ್ ಬೋಸರಾಜ್, ಮಾಜಿ ಸಚಿವ ಆರ್. ವಿ ದೇಶಪಾಂಡೆ, ಲಿಂಗಸುಗೂರು ಶಾಸಕ ಮಾನಪ್ಪ ಡಿ. ವಜ್ಜಲ್, ಗುರುಬಸಪ್ಪ ಸಜ್ಜನ್, ರಘುವೀರ ಮೇಗಳಮನಿ, ಸಂಜೀವ್ ಚಲವಾದಿ, ಮಂಜುನಾಥ್ ಕೊಳ್ಳಿ, ಪಂಚಾಯತ್ ರಾಜ್ ಇಲಾಖೆ ಮುಖ್ಯ ಕಾರ್ಯದರ್ಶಿ ಚಂದ್ರಶೇಖರ್ ಎಂ.ಗಂಗಣ್ಣ, ಹೊರಟ ಸಮಿತಿ ಮುಖಂಡ ಮಂಜುನಾಥ ಬನ್ನಿಗೋಳ್ಕರ, ಪತ್ರಕರ್ತರಾದ ಶರಣಯ್ಯ ಒಡೆ–ಯರ, ಸುರೇಶ ಕೆ.ವಿ. ವಾಹಿದ್ ಖುರೇಷಿ, ದೇವಪ್ಪ ರಾಥೋಡ್, ದೇವಣ್ಣ ಲೆಕ್ಕಿಹಾಳ, ಶಿವಶಂಕರಯ್ಯ ಒಡೆಯರ್, ಕರವೇ ಅಧ್ಯಕ್ಷ ಎಸ್.ಎ ನಯಿಮ್, ದ.ಸಂ.ಸ ಅಧ್ಯಕ್ಷ ಶರಣಪ್ಪ ಕಟ್ಟಿಮನಿ, ಅಬ್ಬು, ಜಮಾಲಿ ಸಾಬ, ಅನಿಫ್ಖಾನ್, ಮಹಾಂತೇಶ ಚಟ್ಟರ, ಗಂಗಾಧರ, ಮಜೀದ್, ಇಸ್ಮಾಯಿಲ್ ಕೊಳ್ಳಿ ಸೇರಿದಂತೆ ಇತರರಿದ್ದರು.

# ಸಮಾನಸ್ಕಂದರ ಶಿಕ್ಷಣ ತಜ್ಞರ ತರಬೇತಿ

• ಮಲ್ಲಮ್ಮ ನುಡಿ ವಾರ್ತೆ ಮುದಗಲ್



ಅರೋಗ್ಯ ಮತ್ತು ಕುಟುಂಬ ಇಲಾಖೆಯ ಆರ್, ಕೆ, ಎಸ್, ಕೆ, ಕಾರ್ಯಕ್ರಮದಡಿಯಲ್ಲಿ ಪಟ್ಟಣ ಸಮೀಪದ ಮಾಕಾಪೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಂದು ದಿನದ ಸಮಾನಸ್ಕಂದರ ಶಿಕ್ಷಣ ತಜ್ಞರ ತರಬೇತಿ ಕಾರ್ಯಗಾರ ಮಂಗಳವಾರ ನಡೆಯಿತು, ವೈದ್ಯಾಧಿಕಾರಿ ಡಾ: ಲಕ್ಷ್ಮಿಕಾಂತ ಜ್ಯೋತಿ ಬೆಳಗುವ ಮೂಲಕ ತರಬೇತಿ ಕಾರ್ಯಗಾರಕ್ಕೆ ಚಾಲನೆ ನೀಡಿದರು

ಗ್ರಾಮಮಟ್ಟದಲ್ಲಿ ಶಾಲೆಯಲ್ಲಿ ಓದುವ ಎರಡು ಮಕ್ಕಳು ಶಾಲೆಯಿಂದ ಹೊರಗುಳಿದ ಎರಡು ಹದಿಹರೆಯದ ಮಕ್ಕಳು ಒಂದು ಗಂಡು ಒಂದು ಹೆಣ್ಣು ಒಂದು ಆಶಾ ನಾಲ್ಕು ಮಕ್ಕಳನ್ನು ಈ ತರಬೇತಿಗೆ ಆಯ್ಕೆ ಮಾಡಲಾಗಿರುತ್ತದೆ , ಈ ತರಬೇತಿಯಲ್ಲಿ,

ರಕ್ತ ಹೀನತೆ, ಪೌಷ್ಟಿಕ ಆಹಾರ , ಬಾಲ್ಯ ವಿವಾಹ, ಮಾನಸಿಕ ಖಿನ್ನತೆ , ದುಶ್ಚಟಗಳ ವ್ಯಸನಗಳ ಕುರಿತು ಚರ್ಚಿಸಿ ಈ ತರಬೇತಿಯ ಮೂಲಕ ಹದಿಹರೆಯದ ಮಕ್ಕಳ ಸಮಸ್ಯೆಗಳನ್ನು ಗುರುತಿಸಿ ಸಲಹೆ ಮಾರ್ಗದರ್ಶನಗಳನ್ನು ತರಬೇತಿಯಲ್ಲಿ ನೀಡಿದರು

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ಲಿಂಗರಾಜ ವಿಶ್ವಕರ್ಮ, ಮಹೇಶ್ವರಿ ಮಾಕಾಪೂರು , ಅಂಜನಮ್ಮ ಬನ್ನಿಗೋಳ, ಶಾಂತಾ, ದೇಸಾಯಿಭೋಗಾಪೂರು ಮಾಕಾಪೂರು ಶೈಲಾಶ್ರೀ ನಾಗಲಾಪೂರು ,ಗೌರಮ್ಮ ಆಶಾಕಾರ್ಯಕರ್ತೆಯಾರಾದ, ಶಾಂತಮ್ಮ ರಾಮತ್ನಾಳ, ಪಂಪಮ್ಮ ಮಾಕಾಪೂರು, ಸೇರಿದಂತೆ ಮುಂತಾದವರು ಇದ್ದರು

# ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಶಾಲಾ ವಾರ್ಷಿಕೋತ್ಸವ ಉತ್ತಮ ವೇದಿಕೆ




• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:



ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ಶಾಲಾ ವಾರ್ಷಿಕೋತ್ಸವಗಳು ಉತ್ತಮ ವೇದಿಕೆಯಾಗಿವೆ ಎಂದು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಡಾ. ರವಿ ಸ್ವಾಮಿ ನಿರ್ಣಾ ಹೇಳಿದರು. ತಾಲೂಕಿನ ಚಾಂಗಲೇರಾ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಹತ್ತಿರದ ಜ್ಞಾನ ಬಿಂದು ಶಿಕ್ಷಣ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶ್ರೀ ವೀರಭದ್ರೇಶ್ವರ ಕಿರಿಯ ಪ್ರಾಥಮಿಕ ಶಾಲೆಯ 12ನೇ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳು ಚೆನ್ನಾಗಿ ಓದಿ ಹೆಚ್ಚು ಅಂಕಗಳಿಸಿದರೆ ಮಾತ್ರ ಬದುಕು ಸಾರ್ಥಕವಾಗದು, ಶಿಕ್ಷಣದ ಜೊತೆಗೆ, ಸಂಸ್ಕಾರ, ಆರೋಗ್ಯವೂ ಮುಖ್ಯವಾಗುತ್ತದೆ. ಆದ್ದರಿಂದ ಪೋಷಕರು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಮಾರ್ಗದರ್ಶನ, ಸಹಕಾರ, ಸಲಹೆ, ನೀಡಬೇಕು. ನಮ್ಮಲ್ಲಿ ಆಧುನಿಕತೆ ಬೆಳೆದಂತೆ ಮಾನವೀಯ ಮೌಲ್ಯಗಳು ಮರೆಯಾಗುತ್ತಿದ್ದು, ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ಮಕ್ಕಳು ಊಟ ಮಾಡಲು ಹಠ ಮಾಡಿದರೆ ಮೊಬೈಲ್ ಕೊಡುತ್ತಾರೆ. 10ನೇ ತರಗತಿ ಕಳೆಯುವವರೆಗೂ ಮಕ್ಕಳಿಗೆ ಮೊಬೈಲ್ ನೀಡಲೇಬಾರದು. ಮೊಬೈಲ್ ನೀಡುವುದರಿಂದ ಮಕ್ಕಳ ಕಣ್ಣು ಮತ್ತು ಮಿದುಳಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ' ಎಂದರು.

ರವೀಂದ್ರ ಫಾರೇಲ್ ಮಾತನಾಡಿ, ಮಕ್ಕಳಿಗಾಗಿ ಆಸ್ತಿ ಮಾಡಿಡದೆ, ಮಕ್ಕಳನ್ನೇ ಅಸ್ತಿಯನಾಗಿ ಮಾಡಿ, ಅವರಿಗೆ ಗುಣಮಟ್ಟದ ಶಿಕ್ಷಣ ಕೊಡಿಸಬೇಕು ಎಂದು ಪೋಷಕರಿಗೆ ಸಲಹೆ ನೀಡಿದರು. ಸಾಹಿತಿ ಎನ್. ಆರ್. ರಗಟೆ ಮಾತನಾಡಿ, ಮಕ್ಕಳಿಗೆ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದಲ್ಲಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು. ಇತ್ತೀಚೆಗೆ ಮಕ್ಕಳು ಮೊಬೈಲ್ ಗಳಿಗೆ ತುತ್ತಾಗುತ್ತಿದ್ದಾರೆ. ಮೊಬೈಲ್ ಮೋಹದಿಂದ ಮುಕ್ತಿಗೊಳಿಸುವಲ್ಲಿ ಶಿಕ್ಷಕರ ಹಾಗೂ ಪೋಷಕರ ಪಾತ್ರ ಮಹತ್ವದಾಗಿರುತ್ತದೆ ಎಂದರು. ಮಕ್ಕಳು ಒಳ್ಳೆಯ ಶಿಕ್ಷಣ ಪಡೆದುಕೊಂಡು ಉನ್ನತ ಹುದ್ದೆಗಳನ್ನು ಪಡೆದು–ಕೊಂಡು ಸಮಾಜದಲ್ಲಿ ಒಳ್ಳೆಯ ನಾಗರಿಕನಾಗಿ ಬದುಕಬೇಕು ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷೆ ರಂಗಮ್ಮ ಅರ್ಜುನ್ ಶರ್ಮಾ, ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಾಲಕರು ಮಕ್ಕಳ ಭವಿಷ್ಯದ ಕುರಿತು ರಾಜಿ ಮಾಡಿಕೊಳ್ಳದೆ ಶಿಕ್ಷಣ ನೀಡುತ್ತಿರುವುದು ಒಳ್ಳೆಯ ಬೆಳವಣಿಗೆ. ಪಾಲಕರ ನಿರೀಕ್ಷೆಗೆ ತಕ್ಕ ಮೌಲ್ಯಯುತ ಶಿಕ್ಷಣವನ್ನು ನಮ್ಮ ಶಿಕ್ಷಣ ಸಂಸ್ಥೆ ನೀಡಲಿದೆ ಎಂದರು. ಈ ಸಂದರ್ಭದಲ್ಲಿ ಸೋಮಶೇಖರ್ ಪಾಟೀಲ್, ವಿರೂಪಕ್ಷ ಸೇಡಂ, ಸಂಜುರಾವ ದೇಸಾಯಿ, ಬಲವಂತರೆಡ್ಡಿ ಮಾಚರೆಡ್ಡಿ, ವಿಠಲರೆಡ್ಡಿ, ಪಂಡರಿ ಯಲ್ ಮೂಲ, ಅರ್ಜುನ್ ಶರ್ಮಾ, ಸಿದ್ಧಾರ್ಥ ಎಂ.ಶರ್ಮಾ ಸೇರಿದಂತೆ ಸಿಬ್ಬಂದಿ ವರ್ಗದವರು, ಪೋಷಕರು ಮತ್ತು ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಸಹ ಶಿಕ್ಷಕ ಸಂಜೀವಕುಮಾರ್ ಆರ್. ಮೇತ್ರೆ ನಿರೂಪಿಸಿದರು. ಶಾಲಾ ಮಕ್ಕಳಿಂದ ನೃತ್ಯ, ಭರತ ನಾಟ್ಯ, ಸಂಗೀತ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ಕೋರ್ಟ್ ಮಾರ್ಶಲ್ ನಾಟಕ ಪ್ರದರ್ಶನ: ಅಧಿಕಾರದ ಹಪಾಹಪಿ, ಜಾತಿ ವ್ಯವಸ್ಥೆ ಅನಾವರಣ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಸ್ವಾತಂತ್ರ್ಯ ಪಡೆದು ಅಮೃತ ಮಹೋತ್ಸವ ಆಚರಿಸುವಂತಹ ಸಂದರ್ಭದಲ್ಲಿ ಇನ್ನು ಅಧಿಕಾರದ ಹಪಾಹಪಿ, ಜಾತಿ ವ್ಯವಸ್ಥೆ ಆಡಳಿತ ವ್ಯವಸ್ಥೆಯಲ್ಲಿ ಇನ್ನು ಬೇರೂರಿರುವ ಕುರಿತು "ಕೋರ್ಟ್ ಮಾರ್ಶಲ್" ನಾಟಕ ಅನಾವರಣಗೊಳಿಸಿತು.

ಕಲಬುರಗಿ ನಾಟಕೋತ್ಸವ ಅಂಗವಾಗಿ ಇಲ್ಲಿನ ಡಾ.ಎಸ್. ಎಂ.ಪಂಡಿತ್ ರಂಗಮಂದಿರದಲ್ಲಿ ಬುಧವಾರ ಸಂಜೆ ಜರುಗಿದ ದೀಪ್ ಸ್ವದೇಶಿ ಅವರು ರಚಿಸಿದ ಅಶಿಷ್ ರಾಣಾ ನಿರ್ದೇಶನದ ಕೋರ್ಟ್ ಮಾರ್ಶಲ್ ನಾಟಕ ಬೆಂಗಳೂರಿನ ಥಿಯೇಟರ್ನಾಮಾ ತಂಡ ತುಂಬಾ ಶಿಸ್ತುಬದ್ದವಾಗಿ ಪ್ರದರ್ಶನ ನೀಡಿತ್ತು.

ಅತ್ಯಂತ ವಿಧೇಯನಾಗಿದ್ದ ಸೈನಿಕನೊಬ್ಬ ಅಪರಾಧವೊಂದನ್ನು ಮಾಡಿ ಸಿಕ್ಕಿಬಿದ್ದಾಗ ಇದರ ತನಿಖೆಗಾಗಿ ಸೇನೆಯು 'ಕೋರ್ಟ್ ಮಾರ್ಷಲ್'ಗೆ ಆದೇಶಿಸಿರುತ್ತದೆ. ಇದರ ಸುತ್ತವೆ ಸಂಪೂರ್ಣ ನಾಟಕ ಆವರಿಸಿದೆ.

ಜಾತಿ ವ್ಯವಸ್ಥೆ ಆಳವಾಗಿ ಬೇರೂರಿರುವ ಸರ್ಕಾರಿ ಆಡಳಿತ ಕಚೇರಿಯೊಂದರ ಹಿನ್ನೆಲೆಯಲ್ಲಿ ಈ ನಾಟಕ ರಚಿಸಲಾಗಿದೆ. ಭಾರತೀಯ ಸಂವಿಧಾನದ ಅತಿದೊಡ್ಡ ವಿರೋಧಾಭಾಸಗಳಲ್ಲಿ ಒಂದನ್ನು ಇದು ಬಿಚ್ಚಿಡುತ್ತದೆ–ಅಸ್ಪೃಶ್ಯತೆಯನ್ನು ನಿಷೇಧಿಸಿ ಅಪರಾಧವೆಂದು ಪರಿಗಣಿಸಲಾಗಿದ್ದರೂ, ಜಾತಿ ಪದ್ಧತಿಯು ಇಂದಿಗೂ ಸಮಾಜದಲ್ಲಿ ಜೀವಂತವಿರುವುದನ್ನು ನಾಟಕ ಎಳೆ–ಎಳೆಯಾಗಿ ಬಿಚ್ಚಿಟ್ಟಿತ್ತು.

ಡಾ. ಅಂಬೇಡ್ಕರ್ ಅವರ ತತ್ತ್ವ ಶಾಸ್ತ್ರವನ್ನು ಅನುಸರಿಸುವ ನಮ್ಮ ಪ್ರಯತ್ನಗಳ ನಡುವೆಯೂ, ವಾಸ್ತವವು ಬೇರೆಯದೇ ಕಥೆಯನ್ನು ಹೇಳುತ್ತದೆ. ಕಾಲಾಂತರದಲ್ಲಿ ತಾರತಮ್ಯದ ರಚನೆಗಳು ಕೇವಲ ಹೊಸ ರೂಪಗಳನ್ನು ಪಡೆದುಕೊಳ್ಳುತ್ತವೆಯೇ ಹೊರತು, ಮೂಲಭೂತವಾಗಿ ಏನೂ ಬದಲಾಗುವುದಿಲ್ಲ ಎಂಬುದನ್ನು ನಾಟಕ ನೆನಪಿಸಿತ್ತು.

# ಮಡಿವಾಳ ಮಾಚಿದೇವರ ತತ್ವಾದರ್ಶ ಪಾಲಿಸಿ: ಬಸವರಾಜ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಮಡಿವಾಳ ಮಾಚಿದೇವರು 12ನೇ ಶತಮಾನದ ಪ್ರಸಿದ್ಧ ವಚನಕಾರರು. ತಮ್ಮ ಕಾಯಕ ನಿಷ್ಠೆಯಿಂದ ಹಾಗೂ ವಚನಗಳ ಮೂಲಕ ಸಮಾಜದಲ್ಲಿ ತಾರತಮ್ಯ, ಅಂಕುಡೊಂಕುಗಳನ್ನು ತಿದ್ದಿ ಸಮಾಜ ಸುಧಾರಣೆಗಾಗಿ ಶ್ರಮಿಸಿದರು. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಬಸವರಾಜ ಮಡಿವಾಳ ನುಡಿದರು. ಮಾರುತಿ ಪರೀಟ್ ಅವರ ಮನೆಯಲ್ಲಿ ಆಯೋಜಿಸಿದ್ದ ಮಡಿವಾಳ ಮಚಿದೇವರ ಜಯಂತಿ ಅಂಗವಾಗಿ ಮಚಿದೇವರ ಭಾವಚಿತ್ರ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಮಡಿವಾಳ ಮಾಚಿದೇವರು ಬಸವಣ್ಣನವರ ತತ್ವಗಳಿಂದ ಪ್ರೇರಿತರಾದರು. ಸಮಾಜದಲ್ಲಿ ಸಮಾನತೆಗಾಗಿ ತಮ್ಮ ವಚನಗಳ ಮೂಲಕ ಹೋರಾಡಿದರು. ಶರಣರ ಬಟ್ಟೆಗಳನ್ನು ಮಡಿ ಮಾಡುವುದು ಅವರ ಕಾಯಕವಾಗಿತ್ತು. ಕಾಯಕನಿಷ್ಠುರ, ಸದಾಚಾರವುಳ್ಳವರ ಶಿವಶರಣರ ಬಟ್ಟೆಗಳನ್ನು ಮಾತ್ರ ಮಡಿ ಮಾಡುವ ನಿಷ್ಠುರ ವಚನಕಾರರಾಗಿದ್ದರು. ಇವರ ವಚನಗಳಲ್ಲಿನ ಸಂದೇಶಗಳು ಸಾರ್ವಕಾಲಿಕವಾಗಿವೆ ಎಂದರು. ಈ ಸಂದರ್ಭದಲ್ಲಿ ಪ್ರಮುಖರಾದ ಮಾರುತಿ ಪರೀಟ್, ದೇವಿದಾಸ್ ಮಡಿವಾಳ, ರಾಜಕುಮಾರ್ ಪರಿಟ್, ದತ್ತಾತ್ರಿ ಮಡಿವಾಳ, ಮಾರುತಿ ಪರಿಟ್, ರಾಮ್ ಥೋರೆ, ಚಂದ್ರಕಾಂತ್ ಥೋರೆ, ನಾಗೇಶ್ ಪರಿಟ್, ಸತೀಶ್ ಜಗತಾಪ, ಹಾಗೂ ಮಹಿಳೆಯರು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಭಿವೃದ್ಧಿಗೆ ಭರಪೂರ ಅನುದಾನ: ಖಂಡ್ರೆ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣ ಸೇರಿ ತಾಲೂಕಿನ ಅಭಿವೃದ್ಧಿಗೆ ಭರಪೂರ ಅನುದಾನ ಒದಗಿಸಲಾಗುತ್ತಿದೆ. 16 ಕೋಟಿ ರೂ ವೆಚ್ಚದಲ್ಲಿ ಸುಸಜ್ಜಿತ ಸಾರ್ವಜನಿಕ ಆಸ್ಪತ್ರೆ ಕಟ್ಟಡ, 16 ಕೋಟಿ ರೂ ಅನುದಾನದಲ್ಲಿ ಹೈಟೆಕ್ ಕ್ರೀಡಾಂಗಣ ನಿರ್ಮಾಣ ಸೇರಿ ಮುಂತಾದ ಅಭಿವೃದ್ಧಿ ಕಾಮಗಾರಿಗಳು ಪ್ರಗತಿಯಲ್ಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು.

ಪಟ್ಟಣದ ಮಹಾತ್ಮ ಗಾಂಧಿ ವೃತ್ತದಲ್ಲಿ ಮಂಗಳವಾರ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆಯಡಿ ವಿವಿಧೆಡೆ 3.20 ಕೋಟಿ ರೂ ಅನುದಾನದ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪಟ್ಟಣ ನಗರೀಕರಣವಾಗಿ ರೂಪಗೊಳ್ಳುತ್ತಿದೆ. ಶಿಕ್ಷಣ, ಉದ್ಯೋಗ, ವ್ಯಾಪಾರಕ್ಕಾಗಿ ಗ್ರಾಮೀಣ ಭಾಗದ ಜನರು ಪಟ್ಟಣಕ್ಕೆ ವಲಸೆ ಬರುತ್ತಿದ್ದಾರೆ. ಹಾಗಾಗಿ ಎಲ್ಲರಿಗೂ ಮೂಲ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

ನಾನು ಶಾಸಕನಾಗಿ ಆಯ್ಕೆಯಾಗುವ ಪೂರ್ವದಲ್ಲಿ ಪಟ್ಟಣದಲ್ಲಿ ಹೇಳಿಕೊಳ್ಳುವಂತಹ ಅಭಿವೃದ್ಧಿ ಕಂಡಿರಲಿಲ್ಲ. ನಾನು ಶಾಸಕನಾದ ಮೇಲೆ ಪಟ್ಟಣದ ಅಭಿವೃದ್ಧಿ ದಿಕ್ಕು ಬದಲಾಗಿದೆ ಎಂದರು.

16 ಕೋಟಿ ರೂ ಅನುದಾನದಲ್ಲಿ ಸಾರ್ವಜನಿಕ ಆಸ್ಪತ್ರೆ ಕಟ್ಟಡದ ಮೊದಲ ಹಂತದ ಕಾಮಗಾರಿ ನಡೆಯುತ್ತಿದೆ. ಇನ್ನೂ ಹೆಚ್ಚುವರಿಯಾಗಿ 16 ಕೋಟಿ ರೂ ಅನುದಾನ ಒದಗಿಸಿದ್ದು ಶೀಘ್ರವೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳಲಿದೆ.

ಒಟ್ಟು 32 ಕೋಟಿ ರೂ ಅನುದಾನದಲ್ಲಿ ಸುಂದರವಾಗಿ ಆಸ್ಪತ್ರೆ ಕಟ್ಟಡ ನಿರ್ಮಾಣವಾಗಲಿದೆ. 9 ಕೋಟಿ ರೂ ಅನುದಾನದಲ್ಲಿ ವಿವಿಧ ಸಮುದಾಯ ಭವನ ನಿರ್ಮಾಣವಾಗುತ್ತಿವೆ. ಕೆರೆ ಅಭಿವೃದ್ಧಿಗೆ ಮತ್ತೆ 15 ಕೋಟಿ ರೂ ಅನುದಾನ ಒದಗಿಸಲಾಗಿದೆ. ಜೂನ್ ಅಂತ್ಯದ ವೇಳೆಗೆ ಕ್ರೀಡಾಂಗಣ ಕಾಮಗಾರಿ ಪೂರ್ಣಗೊಳ್ಳಲಿದೆ. ಮುಂದಿನ ವರ್ಷ ಪಟ್ಟಣದಲ್ಲಿ ಪ್ರಜಾಸೌಧ ಕಟ್ಟಡ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

ಲೋಕೋಪಯೋಗಿ ಇಲಾಖೆಯ ಇಇ ಶಿವಶಂಕರ ಕಾಮಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಅರಣ್ಯ ಅಭಿವೃದ್ಧಿ ನಿಗದಮ ಉಪಾಧ್ಯಕ್ಷ ಹಣಮಂತರಾವ ಚವ್ಹಾಣ, ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ವಂಕೆ, ಪ್ರಮುಖರಾದ ಶಿವಕುಮಾರ ಕಲ್ಯಾಣೆ, ದಿಲೀಪ ಸುಂಟೆ, ಅನಿಲ ಸುಂಟೆ, ಶಶಿಕಲಾ ಅಶೋಕ, ಓಂಕಾರ ಮೋರೆ ಸೇರಿದಂತೆ ಹಲವರು ಇದ್ದರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.

ಸನ್ಮಾನ ರಸ್ತೆ ಕಾಮಗಾರಿಗೆ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರನ್ನು ಕಪಡಾ ಅಸೋಸಿಯೇಶನ್, ಪರ್ಟಿಲೈಸರ್ ಅಸೋಸಿಯೇಶನ್, ತರಕಾರಿ ಮಾರುಕಟ್ಟೆ ಸೇರಿ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಸನ್ಮಾನಿಸಿ, ಅಭಿನಂದಿಸಿದರು.

### 3.20,ಕೋ, ಕಾಮಗಾರಿಗೆ ಚಾಲನೆ

"1.20 ಕೋಟಿ ರೂ ಅನುದಾನದಲ್ಲಿ ಮಹಾತ್ಮ ಗಾಂಧಿ ವೃತ್ತದಿಂದ ಅಂಬೇಡ್ಕರ್ ವೃತ್ತವರೆಗಿನ ರಸ್ತೆ ಡಾಂಬರೀಕರಣ ಮತ್ತು 2 ಕೋಟಿ ರೂ ಅನುದಾನದಲ್ಲಿ ವಿವೇಕಾನಂದ ವೃತ್ತ ಸಮೀಪದ ದಾದರ ನಿಂದ ಅಂಬೇಸಾಂಗವಿ ಕ್ರಾಸ್ ವರೆಗಿನ ರಸ್ತೆ ಅಗಲೀಕರಣ ಮತ್ತು ತಡೆಗೋಡೆ ನಿರ್ಮಾಣ ಕಾಮಗಾರಿಗೆ ಸಚಿವ ಖಂಡ್ರೆ ಚಾಲನೆ ನೀಡಿ ನಿಗದಿತ ಅವಧಿಯಲ್ಲಿ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರ, ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಅಗ್ನಿಪಥ ನೇಮಕಾತಿ: ನೋಂದಣಿ ಆರಂಭ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಆರ್ಮಿ ರಿಕ್ರೂಟಿಂಗ್ ಆಫೀಸ್ ಬೆಳಗಾವಿ ಹಾಗೂ ಬೆಂಗಳೂರು ಹೆಡ್‌ಕ್ವಾಟರ್ಸ್ ರಿಕ್ರೂಟಿಂಗ್ ಜೋನ್ ಬೆಂಗಳೂರು ಇವರ ಸಹಯೋಗದಲ್ಲಿ “ಅಗ್ನಿಪಥ” ನೇಮಕಾತಿಗಾಗಿ 2026ರ ಫೆಬ್ರವರಿ 13 ರಿಂದ ಏಪ್ರಿಲ್ 01 ರವರೆಗೆ ಆನ್‌ಲೈನ್ ಮೂಲಕ ನೋಂದಣಿ ಪ್ರಕ್ರಿಯೆ ನಡೆಯಲಿದೆ ಎಂದು ಬೆಳಗಾವಿ ಆರ್ಮಿ ರಿಕ್ರೂಟಿಂಗ್ ಕಚೇರಿಯ ಡೈರೆಕ್ಟರ್ ರಿಕ್ರೂಟಿಂಗ್ ಕರ್ನಲ್ ಎ.ಕೆ. ಉಪಾಧ್ಯಾಯ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೆಳಗಾವಿ, ಬೀದರ, ಕಲಬುರಗಿ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಪುರುಷ ಅಭ್ಯರ್ಥಿಗಳು ಭಾರತೀಯ ಸೇನೆಯ ತಿತಿತಿ.ರಿಠುಟುಟಜುಚಿಟಚಿಡಿಟಥಿ.ಟುಥಿ.ಟಿ ವೆಬ್‌ಸೈಟ್‌ನಲ್ಲಿ 2026ರ ಏಪ್ರಿಲ್ 1 ರೊಳಗಾಗಿ ನೋಂದಣಿ ಮಾಡಿಕೊಳ್ಳಬೇಕು.

ಸೇನೆಯಲ್ಲಿ ಅಗ್ನಿವೀರ್ ಜನರಲ್ ಡ್ಯೂಟಿ, ಅಗ್ನಿವೀರ್ ಟೆಕ್ನಿಕಲ್, ಅಗ್ನಿವೀರ್ ಟ್ರೇಡ್ಸ್‌ಮೆನ್ ಹುದ್ದೆಗಳಿಗೆ 10ನೇ ತರಗತಿ ಉತ್ತೀರ್ಣರಾಗಿರಬೇಕು. ಅಗ್ನಿವೀರ್ ಟ್ರೇಡ್ಸ್‌ಮೆನ್ ಹುದ್ದೆಗೆ 8ನೇ ತರಗತಿ ಪಾಸ್ ಆಗಿರಬೇಕು. ಅಗ್ನಿವೀರ್ ಕ್ಲರ್ಕ್ / ಸ್ಟೋರ್ ಕೀಪರ್ ಟೆಕ್ನಿಕಲ್ ಹುದ್ದೆಗಳ ವಿಭಾಗಗಳಿಗೆ ನೇಮಕಾತಿ ನಡೆಯಲಿದೆ.

ವಯೋಮಿತಿ, ಶೈಕ್ಷಣಿಕ ಅರ್ಹತೆ ಮತ್ತು ಇತರ ಮಾನದಂಡಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ 2026ರ ಫೆಬ್ರವರಿ 13ರಂದು ಬೆಳಗಾವಿ ಆರ್ಮಿ ರಿಕ್ರೂಟಿಂಗ್ ಆಫೀಸ್‌ದಿಂದ ಹೊರಡಿಸಿದ ಅಧಿಸೂಚನೆಯನ್ನು ವೀಕ್ಷಿಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರ್ನಾಟಕ ಒನ್ ಫ್ರಾಂಚೈಸಿ ಕೇಂದ್ರ ಸ್ಥಾಪಿಸಲು ಅರ್ಹರ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳನ್ನು ಒಂದೇ ಸೂರಿನಡಿ ಜನರಿಗೆ ಒದಗಿಸುವ ಉದ್ದೇಶದಿಂದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕರ್ನಾಟಕ ಒನ್ ಫ್ರಾಂಚೈಸಿ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿ ಇರುವ ಕರ್ನಾಟಕ ಒನ್ ಫ್ರಾಂಚೈಸಿ ಕೇಂದ್ರಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಮಸ್ಕಿ ತಾಲೂಕಿನ ಬಳಗಾನೂರು ಪಟ್ಟಣ ಪಂಚಾಯತ್, ಮಸ್ಕಿ ಟಿಎಮ್‌ಸಿ, ಹಟ್ಟಿ ಪಟ್ಟಣ ಪಂಚಾಯತ್, ಲಿಂಗಸುಗೂರು ಟಿಎಮ್‌ಸಿಯಲ್ಲಿ ತಲಾ 1 ಕೇಂದ್ರ ಹಾಗೂ ರಾಯಚೂರು ನಗರ ಪಾಲಿಕೆ 2 ಕೇಂದ್ರಗಳು ಸೇರಿದಂತೆ ಒಟ್ಟು 7 ಕೇಂದ್ರಗಳನ್ನು ಸ್ಥಾಪಿಸಲು ಅರ್ಜಿ ಆಹ್ವಾನಿಸಲಾಗಿದ್ದು, ಆಸಕ್ತರು ಆನ್‌ಲೈನ್‌ನಲಿε: https://www.karnatakaone.gov.in/Public/FranchiseeTerms ನಲ್ಲಿ ಮಾಚ್ 2ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪತ್ರಕರ್ತ ಗಿರೀಶ್ ಕುಮಾರ್‌ಗೆ ಡಾಕ್ಟರೇಟ್ ಪದವಿ ಪ್ರಧಾನ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಜಿಲ್ಲೆಯ ಕಂಪ್ಲಿ ತಾಲೂಕಿನ ನಂಬರ್ 1. ಇಟಗಿ ಗ್ರಾಮದ ನಿವಾಸಿ, ಪತ್ರಕರ್ತ ಗಿರೀಶ್ ಕುಮಾರ್.ಜಿ ಅವರಿಗೆ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಿಎಚ್.ಡಿ ಪದವಿಯನ್ನು ನೀಡಲಾಯಿತು.

ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರ ತುಮಕೂರಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ನಾಗೇಂದ್ರ ಅವರು ಮಾರ್ಗದರ್ಶನದಲ್ಲಿ, ಕನ್ನಡ ಮುದ್ರಣ ಮಾಧ್ಯಮಗಳಲ್ಲಿ ಸೈಬರ್ ಅಪರಾಧಗಳ ಪ್ರತಿನೀಧಿಕರಣ* ( ಬಳ್ಳಾರಿ ಜಿಲ್ಲೆಯ ಅನುಲಕ್ಷಿಸಿ) ಎಂಬ ವಿಷಯದ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ನೀಡಲಾಗಿದೆ. ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಯ ಹಿರಿಯ ಪತ್ರಕರ್ತರು, ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಕುಟುಂಬದ ಸದಸ್ಯರು, ಸ್ನೇಹಿತರು ಶುಭ ಕೋರಿದ್ದಾರೆ.

# ಭೀಮಾ ನದಿ ನೀರಿನಲ್ಲಿ ಮುಳುಗಿ ಬಾಲಕಿ ಸಾವು



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ದೇವರ ಜಾತ್ರೆಗೆಂದು ಹೋದ ಬಾಲಕಿ ನದಿ ನೀರಿನಲ್ಲಿ ಮುಳುಗಿ ಸಾವು ತಾಲೂಕಿನ ಬೆನಕನಹಳ್ಳಿ ಗ್ರಾಮದ ಭೀಮಾನದಿಯಲ್ಲಿ ಘಟನೆ ವಡಗೇರಾ ತಾಲೂಕಿನ ಬೆನಕನಹಳ್ಳಿ ಗ್ರಾಮದ ಜೋಳದಡಗಿ ಗ್ರಾಮದ ಮರೇಮ್ಮ (7) ನದಿ ನೀರಿನಲ್ಲಿ ಮುಳುಗಿ ಸಾವು ಮೀನುಗಾರ ಕೊಂಡಪ್ಪ ಹಾಗೂ ತಾಯಮ್ಮ ದಂಪತಿ ಪುತ್ರಿ ಮರೇಮ್ಮ ತಾಲೂಕಿನ ಬೆನಕನಹಳ್ಳಿ ಗ್ರಾಮದ ಮಾರೇಮ್ಮ ಜಾತ್ರೆ ಹಿನ್ನಲೆ ಪೋಷಕರ ಜೊತೆ ಬೆನಕನಹಳ್ಳಿ ಗ್ರಾಮಕ್ಕೆ ಹೋಗಿದ್ದ ಬಾಲಕಿ

ಈ ವೇಳೆ ತಾಯಿ ತಾಯಮ್ಮ ಬಟ್ಟೆ ತೊಳೆಯಲು ನದಿ ತೀರಕ್ಕೆ ಹೋಗಿದ್ದಳು ತಾಯಿ ಜೊತೆ ತೆರಳಿದ ಪುತ್ರಿ ಮರೇಮ್ಮ ಮಗಳ ಕೈಯಲ್ಲಿ ಮೊಬೈಲ್ ಕೊಟ್ಟು ಬಟ್ಟೆ ತೊಳೆಯುತ್ತಿದ್ದ ತಾಯಿ ಮೊಬೈಲ್ ನೋಡುತ್ತಾ ನಂತರ ನದಿಗೆ ಇಳಿದ ಬಾಲಕಿ ನೀರು ಪಾಲು ಬಾಲಕಿ ಬಿದ್ದ ಕ್ಷಣದಲ್ಲಿ ಸ್ಥಳೀಯರಿಂದ ಬಾಲಕಿಯ ರಕ್ಷಣೆ ಹೆಚ್ಚಿನ ಚಿಕಿತ್ಸೆಗಾಗಿ ಬೆಂಡಬೆಂಬಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತರುವಾಗ ಸಾವು ವಡಗೇರಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ಜರುಗಿದೆ.

# ವಿಶ್ವದ 34 ಅಗ್ರಗಣ್ಯ ವಿಜ್ಞಾನಿಗಳಿಂದ ಪತ್ರ: ಕ್ಯೂ-ಮಿಂಟ್ ಯೋಜನೆಗೆ ಬೆಂಬಲ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಕರ್ನಾಟಕದ ತಂತ್ರಜ್ಞಾನ ದೂರದೃಷ್ಟಿಗೆ ಜಾಗತಿಕ ಮಟ್ಟದಲ್ಲಿ ಭಾರಿ ಮನ್ನಣೆ ದೊರೆತಿದೆ. ವಿಶ್ವದ ಅತ್ಯಂತ ಪ್ರತಿಷ್ಠಿತ ಸಂಶೋಧನಾ ಸಂಸ್ಥೆಗಳ 34 ಖ್ಯಾತ ವಿಜ್ಞಾನಿಗಳು, ರಾಜ್ಯದ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್. ಭೋಸರಾಜು ಅವರಿಗೆ ಅಧಿಕೃತವಾಗಿ ಪತ್ರ ಬರೆದಿದ್ದು, ರಾಜ್ಯದ ಕ್ವಾಂಟಮ್ ಮೆಟೀರಿಯಲ್ ಇನ್ನೋವೇಶನ್ ನೆಟ್‌ವರ್ಕ್' (ಕ್ಯೂ-ಮಿಂಟ್) ಯೋಜನೆಗೆ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ.

ಇತ್ತೀಚೆಗೆ ಐಸಿಟಿಎಸ್-ಟಿಐಎಫ್‌ಆರ್‌ನಲ್ಲಿ ನಡೆದ 'ಫ್ರಾಂಟಿಯರ್ಸ್ ಇನ್ ಕ್ವಾಂಟಮ್ ಕಂಡೆನ್ಸ್ಡ್ ಮ್ಯಾಟರ್ ಫಿಸಿಕ್ಸ್' (ಎಫ್‌ಕ್ಯೂಸಿಎಮ್‌ಪಿ) ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ, ಜಾಗತಿಕ ವಿಜ್ಞಾನಿಗಳ ಸಮುದಾಯವು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಕ್ವಾಂಟಮ್ ಸಿಟಿ ಕಾರ್ಯಕ್ರಮದ ಪ್ರಮುಖ ಭಾಗವಾಗಿ ಕ್ಯೂ-ಮಿಂಟ್ ಸ್ಥಾಪಿಸುವ ದೂರದೃಷ್ಟಿಯ ಕ್ರಮವನ್ನು ಶ್ಲಾಘಿಸಿದೆ. ಕಂಪ್ಯೂಟಿಂಗ್, ಸಂವಹನ ಮತ್ತು ಸೆನ್ಸಿಂಗ್ ಕ್ಷೇತ್ರಗಳಲ್ಲಿ ಮುಂದಿನ ಪೀಳಿಗೆಯ ತಂತ್ರಜ್ಞಾನಗಳ ಆವಿಷ್ಕಾರಕ್ಕೆ ನವೀನ ಕ್ವಾಂಟಮ್ ವಸ್ತುಗಳು ಅತ್ಯಂತ ನಿರ್ಣಾಯಕ ಅಡಿಪಾಯವಾಗಿವೆ ಎಂದು ವಿಜ್ಞಾನಿಗಳು ತಮ್ಮ ಜಂಟಿ ಪತ್ರದಲ್ಲಿ ಹೇಳಿದ್ದಾರೆ.

ವಿಶ್ವದ ಪ್ರಮುಖ ವಿಜ್ಞಾನಿಗಳ ಬೆಂಬಲವನ್ನು ಸಚಿವರಾದ ಎನ್.ಎಸ್.ಭೋಸರಾಜು ಅವರು ಸ್ವಾಗತಿಸಿದ್ದಾರೆ. ಕರ್ನಾಟಕ ರಾಜ್ಯವು ಮೊದಲಿನಿಂದಲೂ ನಾವೀನ್ಯತೆಗೆ ಹೆಸರುವಾಸಿಯಾಗಿದೆ. ವಿಶ್ವದ ಅಗ್ರಗಣ್ಯ 34 ಕ್ವಾಂಟಮ್ ವಿಜ್ಞಾನಿಗಳಿಂದ ಇಂತಹ ಬೆಂಬಲ ದೊರೆತಿರುವುದು ನಮ್ಮ ಗುರಿಯ ಉತ್ತಮ ದಾರಿಯಲ್ಲಿ ನಡೆಯುತ್ತಿರುವುದನ್ನು ತೋರಿಸುತ್ತದೆ.ಕ್ವಾಂಟಮ್ ಮೆಟೀರಿಯಲ್ ಇನ್ನೋವೇಶನ್ ನೆಟ್‌ವರ್ಕ್ ಅನ್ನು ಅನುಷ್ಠಾನಗೊಳಿಸಲು ನಾವು ಉತ್ಸುಕರಾಗಿದ್ದೇವೆ. ಸುಧಾರಿತ ಸಂಶೋಧನೆ ಮತ್ತು ಉತ್ಪಾದನೆಗಾಗಿ ಉತ್ತಮ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಮೂಲಕ 2035ರ ವೇಳೆಗೆ 20 ಬಿಲಿಯನ್ ಡಾಲರ್ ಮೌಲ್ಯದ ಕ್ವಾಂಟಮ್ ಆರ್ಥಿಕತೆಯ ಗುರಿಯನ್ನು ತಲುಪಲು ನಾವು ಅಡಿಪಾಯ ಹಾಕುತ್ತಿದ್ದೇವೆ. ಜೊತೆಗೆ ಈ ಕ್ಷೇತ್ರದಲ್ಲಿ ಸ್ವಾವಲಂಬನೆಯನ್ನು ಸಾಧಿಸಿ, ನಮ್ಮ ಯುವಜನತೆಗೆ ಉದ್ಯೋಗಗಳನ್ನು ಸೃಷ್ಟಿಸಲಿದ್ದೇವೆ ಎಂದು ತಿಳಿಸಿದರು.ಕ್ಯೂ-ಮಿಂಟ್ ಅನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲು, ವಿಜ್ಞಾನಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಐಟಿ/ಬಿಟಿ ಇಲಾಖೆಗೆ, ವಿಶ್ವದರ್ಜೆಯ ತಜ್ಞರನ್ನು ಒಳಗೊಂಡ ಕೇಂದ್ರೀಕೃತ ಕ್ವಾಂಟಮ್ ಮೆಟೀರಿಯಲ್ಸ್ ಫೌಂಡ್ರಿಯನ್ನು ಸ್ಥಾಪಿಸುವುದು, ಸಮಗ್ರ ಕಂಪ್ಯೂಟೇಶನಲ್ ಮತ್ತು ಡೇಟಾ ಸೈನ್ಸ್ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವುದು ಹಾಗೂ ಬಹು-ಸಂಸ್ಥೆಗಳ ಸಹಯೋಗವನ್ನು ಉತ್ತೇಜಿಸುವಂತಹ ಪ್ರಮುಖ ಸಲಹೆಗಳನ್ನು ನೀಡಿದ್ದಾರೆ. ಅಲ್ಲದೆ, ವಿಶ್ವಾಸ-ವರ್ಧಿಸುವ ಯೋಜನೆಗಳ ಮೂಲಕ ಹಂತ ಹಂತದ ಅನುಷ್ಠಾನದ ಅಗತ್ಯವನ್ನು ಅವರು ಎತ್ತಿ ತೋರಿಸಿದ್ದಾರೆ.

ಈ ಪತ್ರಕ್ಕೆ ಸಹಿ ಹಾಕಿರುವ ಗಣ್ಯ ವಿಜ್ಞಾನಿಗಳು ಐಐಎಸ್‌ಸಿ, ಟಿಐಎಫ್‌ಆರ್, ಎಂಐಟಿ, ಆಕ್ಸ್‌ಫರ್ಡ್, ಪ್ರಿನ್ಸ್‌ಟನ್ ಮತ್ತು ಕೊಲಂಬಿಯಾ ವಿಶ್ವವಿದ್ಯಾಲಯಗಳಂತಹ ಪ್ರಮುಖ ಜಾಗತಿಕ ಸಂಸ್ಥೆಗಳನ್ನು ಪ್ರತಿನಿಧಿಸುತ್ತಾರೆ.

# ಶ್ರೀ ರೇಣುಕಾಚಾರ್ಯ ಜಯಂತಿ: ಯಶಸ್ವಿಗಾಗಿ ಭಾಗವಹಿಸಲು ಕರೆ



• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಸರ್ಕಾರದ ಆದೇಶದಂತೆ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಅವಳಿ ತಾಲೂಕಿನಲ್ಲಿ, ಶಾಲಾ ಕಾಲೇಜು ಸೇರಿದಂತೆ ವಿವಿಧ ಇಲಾಖೆಯಲ್ಲಿ ಮಾ.1 ರಂದು ಜಗದ್ಗುರು ಶ್ರೀ ರೇಣುಕಾಚಾರ್ಯ ಅವರ ಜಯಂತಿಯನ್ನು ಆಚರಿಸಲಾಗುತ್ತದೆ ಸರ್ವ ಧರ್ಮದವರು ಭಾಗವಹಿಸಬೇಕು ಎಂದು ಯಲಬುರ್ಗಾ ತಾಲೂಕು ಜಂಗಮ ಸಮಾಜದ ಅಧ್ಯಕ್ಷ ಹಂಪಯ್ಯಸ್ವಾಮಿ ಅವರು ತಹಶೀಲ್ದಾರ ಕಚೇರಿಯಲ್ಲಿ ರೇಣುಕಾಚಾರ್ಯ ಜಯಂತಿಯ ಪೂರ್ವ ಭಾವಿ ಸಭೆಯಲ್ಲಿ ಮಾತನಾಡಿ ಮಾ.15 ರಂದು ಶ್ರೀ ವೀರಮಹೇಶ್ವರ ಜಂಗಮ ಕ್ಷೇಮಾಭಿವೃದ್ಧಿ ಸಂಘ ಕಲ್ಲೂರಿನಲ್ಲಿ ಜಯೋಂತ್ಸವ ಅದ್ದೂರಿಯಾಗಿ ಜರುಗುವದು ಸರ್ವ ಧರ್ಮದವರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು.. ತಹಶಿಲ್ದಾರ ಪ್ರಕಾಶ ನಾಶಿ ಅವರು ಮಾತನಾಡಿ ವಿವಿಧ ಇಲಾಖೆಯವರಿಗೆ ಮಾಹಿತಿ ನೀಡಿ ಪ್ರತಿ ವರ್ಷದ ಪದ್ಧತಿಯಂತೆ ಸರ್ವರು ಭಾಗವಹಿಸಿ ಯಶಸ್ವಿಗೊಳಿಸಬೇಕು ಎಂದರು. ಮುಖ್ಯಾಧಿಕಾರಿ ನಾಗೇಶ , ಎಫ್.ಡಿ ಎ ಸಚಿನಕುಮಾರ ಅರಹುಂಚಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು,ವಿವಿಧ ಸಮಾಜದ ಮುಖಂಡರು ಭಾಗವಹಿಸಿದ್ದರು.

# ಬಾಲ ಭವನ ನಿರ್ಮಾಣ ಮಾಡಲು ನಿವೇಶನವನ್ನು ಗುರುತಿಸಿ: ಅನಿಲ್ ಕುಮಾರ




• ಮಲ್ಲಮ್ಮ ನುಡಿ ವಾರ್ತೆ, ಯಾದಗಿರಿ

ಯಾದಗಿರಿ ತಾಲ್ಲೂಕುಗಳಲ್ಲಿ ಬಾಲ ಭವನ ನಿರ್ಮಾಣ ಮಾಡಲು ನಿವೇಶನವನ್ನು ಗುರುತಿಸಿ, ಜಿಲ್ಲೆಯ ಮಕ್ಕಳ ಕಲಾತ್ಮಕ ಕ್ರಿಯಾಶೀಲತೆಯ ಕುರಿತು, 5 ರಿಂದ 16 ವರ್ಷ ಒಳಗಿನ ಮಕ್ಕಳಿಗೆ ಶಿಕ್ಷಣ ಜೊತೆಗೆ ಉತ್ತಮವಾದ ಪಠ್ಯೇತರ ಚಟುವಟಿಕೆಗಳನ್ನು ಮಕ್ಕಳಿಗೆ ನೀಡಬೇಕು ಎಂದು ಬೆಂಗಳೂರು ಬಾಲ ಭವನ ಸೊಸೈಟಿ ರಾಜ್ಯ ಉಪಾಧ್ಯಕ್ಷರು ಅನಿಲಕುಮಾರ ಜಮಾದಾರ ಅವರು ಹೇಳಿದರು. ಯಾದಗಿರಿ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಬಾಲ ಭವನಳ ಪ್ರಗತಿ ಪರೀಶಿಲನಾ ಸಭೆ ಹಾಗೂ ಯಾದಗಿರಿ ಜಿಲ್ಲೆಯಲ್ಲಿ ಬಾಲ ಭವನಗಳಿಗೆ ಭೇಟಿ ನೀಡಿ ಅವರು ಮಾತನಾಡಿದರು.

ಯಾದಗಿರಿ ಜಿಲ್ಲೆಯಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಬಾಲ ಭವನ ನಿರ್ಮಾಣ ಮಾಡಲು ನಿವೇಶನವನ್ನು ಗುರುತಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಚಿಸಿದರು. ಮಕ್ಕಳ ಬೆಳವಣಿಗೆ ರಚನಾತ್ಮಕ ಚಟುವಟಿಕೆಗಳಿಗೆ ಮುಕ್ತ ಮೈದಾನ ನೀಡಲು ಮತ್ತು ಮಕ್ಕಳ ಸೃಜನಶೀಲತೆಯನ್ನು ಉತ್ತೇಜಿಸುವುದು ಬಹಳ ಅವಶ್ಯವಿದ್ದು, ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳು ತಾಲ್ಲೂಕುಗಳಲ್ಲಿ ಮಕ್ಕಳ ಉದ್ಯಾನವನ ನಿರ್ಮಿಸಲು ರಾಜ್ಯ ಬಾಲ ಭವನಕ್ಕ ಪ್ರಸ್ತಾವನೆಯನ್ನು ಸಲ್ಲಿಸಲು ಅಧಿಕಾರಿಗಳಿಗೆ ಕ್ರಮವಹಿಸಿಬೇಕು. ಈ ಸಂದರ್ಭದಲ್ಲಿ ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕರು ತಿಪ್ಪಣ್ಣ.ಪಿ ಸಿರಸಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಉತ್ತರದೇವಿ ಮಠಪತಿ, ಸುರಪುರ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಸಜ್ಜನ, ಶಹಾಪೂರ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ,

ಗುರುಮಠಕಲ್ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ ಪಾಟೀಲ, ವಡಗೇರಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಿಕಾರ್ಜುನ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಲಾಲಸಾಬ್,ದೀಪಿಕಾ,ಶರಣಬಸಪ್ಪ, ಸಿದ್ದಣ್ಣಗೌಡ ಬಿರಾದಾರ, ಜಿಲ್ಲಾ ಕಾರ್ಯಕ್ರಮ ಸಂಯೋಜಕರು ಅನಿಲಕುಮಾರ,ಪ್ರಶಾಂತಕುಮಾರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಸಿರಿಧಾನ್ಯ ಬಗ್ಗೆ ಹೆಚ್ಚು ಅರಿವು: ತುನ್ನೂರ್

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ




ಸಿರಿಧಾನ್ಯಗಳನ್ನು ಬಳಕೆ ಮಾಡುವುದರಿಂದ ಆರೋಗ್ಯಕ್ಕೆ ಆಗುವ ಲಾಭಗಳ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಬೇಕೆಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಹೇಳಿದರು. ಜಿಲ್ಲಾಡಳಿತ,ಜಿಪಂ,ಕೃಷಿ ಇಲಾಖೆ ಮತ್ತು ಜಿಲ್ಲಾ ಕೃಷಿಕ ಸಮಾಜ ಸಂಯುಕ್ತವಾಗಿ ಬುಧವಾರ ಬೆಳಗ್ಗೆ ನಗರದ ಹೊಸ ಬಸ್ ನಿಲ್ದಾಣದ ಆವರಣದಲ್ಲಿ ಆಯೋಜಿಸಿದ್ದ ಸಿರಿಧಾನ್ಯ ನಡಿಗೆಗೆ ಚಾಲನೆ ನೀಡಿ ಮಾತನಾಡಿದರು. ಬಿಳಿ ಜೋಳ, ಸಜ್ಜೆ ನವಣೆ, ಕಣವಿ ಸೇರಿದಂತೆಯೇ ಸಿರಿಧಾನ್ಯದ ಸಕಲ ಪದಾರ್ಥಗಳು ಆರೋಗ್ಯಕ್ಕೆ ಉತ್ತಮ ಔಷಧಿಗಳಾಗಿವೆ. ಹಿಂದಿನ ಕಾಲದಲ್ಲಿ ಹಿರಿಯರು ಇವುಗಳನ್ನೇ ಬಳಸಿ ಗಟ್ಟಿಮುಟ್ಟಾದ ಆರೋಗ್ಯ ಹೊಂದಿದ್ದರು. ಆದರೇ ಬಾಯಿರುಚಿಯ ಚಟ ಅಂಟಿಸಿಕೊಂಡ ಇಂದಿನ ಬಹುತೇಕರು ಜಂಕ್ ಫುಡ್ ಸೇವಿಸಿ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆಂದು ವಿಷಾಧಿಸಿದರು. ಜಿಲ್ಲೆಯಲ್ಲಿ ಸಿರಿಧಾನ್ಯ ಉತ್ಪಾದನೆ, ಬಳಕೆಗೆ ಕೃಷಿ ಇಲಾಖೆ ಅಧಿಕಾರಿಗಳು ಸಾಕಷ್ಟು ಒತ್ತು ನೀಡುತ್ತಿರುವ ಪರಿಣಾಮ 25 ಸಾವಿರ ಎಕರೆ ಭೂಮಿಯಲ್ಲಿ ಸಿರಿಧಾನ್ಯಗಳು ಬೆಳೆಯಲಾಗುತ್ತಿದೆ ಎಂಬ ಮಾಹಿತಿ ಸಂತಸ ತಂದಿದೆ. ಇದು ಹೆಚ್ಚಾಗಬೇಕೆಂದರು. ಪ್ರತಿ ಊರಿನ ಎಲ್ಲ ಮನೆಗಳಿಗೆ, ಶಾಲಾ,ಕಾಲೇಜುಗಳಿಗೆ ಈ ಬಗ್ಗೆ ಸೂಕ್ತ ಮಾಹಿತಿ ರವಾನಿಸುವ ಕೆಲಸ ಆಗಬೇಕೆಂದು ಶಾಸಕರು ಹೇಳಿ, ಹಲವು ರೋಗಗಳಿಗೆ ಈ ಧಾನ್ಯಗಳು ವರವಾಗಿವೆ. ಉತ್ಪಾದಕರಿಗೆ ಉತ್ತಮ ಧಾರಣಿಯೂ ಸಿಗುತ್ತದೆ. ಹೀಗಾಗಿ ಇದನ್ನು ಹೆಚ್ಚು,ಹೆಚ್ಚಾಗಿ ಬೆಳೆಯಬೇಕೆಂದು ಶಾಸಕ ಪಾಟೀಲ್ ಹೇಳಿದರು. ನಮ್ಮ ಫಲವತ್ತಾದ ಭೂಮಿಯನ್ನು ಆಂದ್ರದವರು ಲೀಜ್ ಗೆ ಪಡೆದು, ಇಲ್ಲವೇ ಖರೀದಿಸಿ ಅತಿ ಹೆಚ್ಚಿನ ಮಸಾಲೆ ಪದಾರ್ಥ, ಹೆಚ್ಚಿನ ಭತ್ತದ ಇಳುವರಿ ಪಡೆದು ಲಾಭ ಮಾಡಿಕೊಂಡು ಭೂಮಿತಾಯಿಯನ್ನು ಬರಡು ಮಾಡಿ ಹೋಗುವಾಗ ನಮಗೆ ಮಾರುತ್ತಾರೆ. ನಂತರ

ನಮ್ಮ ಸಂಪ್ರದಾಯಕ ಬೆಳೆಗಳು ಬೆಳೆಯಲಾಗದೇ ನಷ್ಟ ಅನುಭವಿಸಿ ಬೀದಿಪಾಲಾಗುವ ಸ್ಥಿತಿ ನಮ್ಮ ರೈತರದ್ದಾಗಿದೆ ಎಂದು ಶಾಸಕ ತುನ್ನೂರ್ ಹೇಳಿದರು. ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಮಾತನಾಡಿ, ಈ ಹಿಂದೆ ನಮ್ಮ ನೆಲದ ಕೃಷಿಕರು ಸಿರಿಧಾನ್ಯಗಳನ್ನೇ ಬೆಳೆಯುತ್ತಿದ್ದರು. ಈಗ ಬೆಳೆಯುವುದು ಕಷ್ಟಕರವಾಗಿದೆ. ಕಾರಣ, ಕಡಿಮೆ ಖರ್ಚಿನಲ್ಲಿ ಹೆಚ್ಚು ಬೆಳೆ ಪಡೆಯಬೇಕೆಂಬ ಇಚ್ಛೆ ಹೆಚ್ಚಾಗಿದೆ ಎಂದರು. ಕಲುಷಿತ ಮತ್ತು ವಿಷಪೂರಿತ ಆಹಾರ ಧಾನ್ಯಗಳ ಬದಲಿಗೆ ಸಿರಿಧ್ಯಾನಗಳನ್ನೆ ಬಳಸಿ.ಇದಕ್ಕೆ ಸರ್ಕಾರಗಳು ಸಾಕಷ್ಟು ಪ್ರೊತ್ಸಾಹ ನೀಡುತ್ತಿದೆ ಎಂದರು. ಎಸ್ ಪಿ ಪೃಥ್ವಿಕ ಶಂಕರ ಮಾತನಾಡಿ, ಆರೋಗ್ಯ ಸಂಪತ್ತಿನ ಮುಂದೆ ಬೇರೆ ಯಾವ ಸಂಪತ್ತು ದೊಡ್ಡದಲ್ಲ. ಮೊದಲು ನಮ್ಮಲ್ಲೆರ ಹುಟ್ಟು,ಸಾವು ಮನೆಗಳಲ್ಲಿಯೇ ಆಗುತ್ತಿದ್ದವು. ಆದರೇ ಇಂದು ಈ ಎರಡು ಆಸ್ಪತ್ರೆಗಳಲ್ಲಿಯೇ ಆಗುತ್ತಿವೆ. ಅಂದರೇ ಜೀವನ,ಆಹಾರ ಶೈಲಿ ಬದಲಾಗಿದೆ. ಇದು ಅನೇಕ ಬದಲಾವಣೆಗಳಿಗೆ ಕಾರಣವಾಗಿದೆ. ಅದಕ್ಕಾಗಿ ಸಿರಿಧಾನ್ಯ ಬಳಸಿ ಗಟ್ಟಿಮುಟ್ಟಾಗಿ ಬದುಕೋಣ ಎಂದು ಸ್ವಾರಸ್ಯಕರವಾಗಿ ವಿವರಿಸಿದರು. ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ್ ಮಾತನಾಡಿ, ಜೋಳ, ತೊಗರಿ, ಸಜ್ಜೆ,ನವಣೆಯಂತಹ ಆಹಾರಗಳಲ್ಲಿ ಪವಿತ್ರತೆ ಇದೆ. ಗಟ್ಟಿತನವಿದೆ. ರೋಗ ನಿರೋಧಕ ಶಕ್ತಿ ಇದೆ. ಆದರೇ ಇವುಗಳ ಉತ್ಪಾದನೆಗೆ ರೈತ ಮುಂದಾದರೇ ನಿರೀಕ್ಷೆ ಮಾಡಿದಷ್ಟು ಲಾಭ ಆಗುತ್ತಿಲ್ಲ.

ಇದಕ್ಕೆ ಸರ್ಕಾರವೇ ಹೆಚ್ಚಿನ ಅನುಕೂಲ ಮಾಡಿಕೊಡಬೇಕೆಂದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ರತೇಂದ್ರನಾಥ ಸೂಗುರ ಪ್ರಾಸ್ತಾವಿಕವಾಗಿ ಮಾತನಾಡಿ,ನಮ್ಮ ನಡೆ ಸಿರಿಧಾನ್ಯ, ರೈತರ ಸಬಲಿಕರಣ ಮತ್ತು ಈ ಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸರ್ಕಾರ ಈ ಕಾರ್ಯಕ್ರಮ ಹಮ್ಮಿಕೊಂಡಿದೆ.

ಸಿರಿಧಾನ್ಯ ಬಳಸಿ ಆರೋಗ್ಯ ಕಾಪಾಡಿಕೊಳ್ಳಿ ಎಂದರು.

**ಜಾಥಾದಲ್ಲಿ ಸಾವಿರಾರು ಜನ ಭಾಗಿ**

ಹೊಸ ಬಸ್ ನಿಲ್ದಾಣದಿಂದ ಆರಂಭಗೊಂಡ ಸಿರಿಧಾನ್ಯ ಜಾಥಾ ಶಾಸ್ತ್ರಿ ಚೌಕ್, ಸುಭಾಷಚಂದ್ರಬೋಸ್ ವೃತ್ತದ ಮೂಲಕ ಸರ್ಕಾರಿ ಪದವಿ ಕಾಲೇಜಿಗೆ ಬಂದು ಸಮಾಪ್ತಿಯಾಯಿತು. ಅಲ್ಲಿ ಎಲ್ಲರಿಗೂ ಸಿರಿಧಾನ್ಯದ ಜೂಸ್ ನೀಡಲಾಯಿತು.

ಹೆಚ್ಚುವರಿ ಎಸ್ ಪಿ ಧರಣೇಶ, ಡಿವೈಎಸ್ ಪಿ ಭರತಕುಮಾರ ತಳವಾರ, ಉಪ ಕೃಷಿ ನಿರ್ದೇಶಕ ಹಂಪಣ್ಣ ವೈ.ಎಲ್., ವಿವಿಧ ತಾಲೂಕು ಕೃಷಿ ಅಧಿಕಾರಿಗಳಾದ ರಾಜಕುಮಾರ, ಸುರೇಶ ಬಿ., ರಾಮಣ್ಣಗೌಡ, ಸುನೀಲಕುಮಾರ, ರವಿಕುಮಾರ, ವಿಶ್ವಾರಾಧ್ಯ,ಎಬಿಎಆರ್ ಡಿ ಅಧಿಕಾರಿ ಯಮುನಾ, ಡಿಎಚ್ ಒ ಡಾ.ಮಹೇಶ ಬಿರಾದಾರ, ಕೃಷಿ ಇಲಾಖೆ ತಾಂತ್ರಿಕ ಅಧಿಕಾರಿ ಯಾಮರೆಡ್ಡಿ, ಕಛೇರಿ ಅಧಿಕ್ಷಕಾರದ ವೆಂಕಟೇಶ ಹಿರೆನೂರ್, ಮುಖಂಡರಾದ ಶರಣಗೌಡ ಮಾಲಿಪಾಟೀಲ್ , ಬಸವರಾಜ ಮೊಟನಳ್ಳಿ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ವೆಂಕಟರೆಡ್ಡಿ ತಂಗಡಗಿ ಶರಣಗೌಡ ಬಲಕಲ್, ಕೃಷಿ ಇಲಾಖೆ ಸಿಬ್ಬಂದಿ ಸೇರಿದಂತೆ ಇತರರಿದ್ದರು.

# ಕನ್ನಡ ಶಾಲೆ ಉಳಿಸಿ ಬೆಳೆಸಿ: ಭೀಮು ಪೂಜಾರಿ ನೇಮಕ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕನ್ನಡ ಭಾಷೆ ಮತ್ತು ಸರ್ಕಾರಿ ಕನ್ನಡ ಶಾಲೆಗಳ ಉಳಿಸಿ ಬೆಳೆಸಿ ಬೆಳವಣಿಗೆಗಾಗಿ ಕಾರ್ಯನಿರ್ವಹಿಸುತ್ತಿರುವ ಕನ್ನಡ ಶಾಲೆ ಉಳಿಸಿ ಬೆಳೆಸಿ ಸಂಘಟನೆಯ ರಾಜ್ಯಾಧ್ಯಕ್ಷ ಉನೆಸ್ ಪೈರಾಜ್ ಯಾದಗಿರಿ ಜಿಲ್ಲಾ ಯುವ ಘಟಕದ ಅಧ್ಯಕ್ಷರಾಗಿ ಭೀಮು ಪೂಜಾರಿ ನೇಮಕ ಮಾಡಿ ಆದೇಶ ಪತ್ರವನ್ನು ನೀಡಿದರು.

ಜಿಲ್ಲೆಯ ಯುವಕರಲ್ಲಿ ಭಾಷಾ ಅಭಿಮಾನ, ಸರ್ಕಾರಿ ಶಾಲೆಗಳ ಬಗ್ಗೆ ವಿಶ್ವಾಸ ಹಾಗೂ ದಾಖಲಾತಿ ಹೆಚ್ಚಿಸುವ ಉದ್ದೇಶದಿಂದ ಸಂಘಟನೆ ಕೈಗೊಂಡಿರುವ ಚಟುವಟಿಕೆಗಳಿಗೆ ಚೈತನ್ಯ ತುಂಬುವ ನಾಯಕತ್ವ ಅಗತ್ಯವಿದೆ ಎಂದು ಪದಾಧಿಕಾರಿಗಳು ತಿಳಿಸಿದ್ದಾರೆ. ಭೀಮು ಪೂಜಾರಿ ಅವರು ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದು,

ಶಿಕ್ಷಣ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿ ಪರಿಹಾರ ಕಂಡುಕೊಳ್ಳಲು ಹೋರಾಟ ನಡೆಸಿರುವುದು ಗಮನಾರ್ಹ. ಜಿಲ್ಲೆಯಾದ್ಯಂತ ಕನ್ನಡ ಮಾಧ್ಯಮ ಶಾಲೆಗಳ ಮೂಲಸೌಕರ್ಯ ಬಲಪಡಿಸುವುದು, ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸುವ ಅಭಿಯಾನ, ಶಾಲಾ ಅಭಿವೃದ್ಧಿ ಸಮಿತಿಗಳ ಜೊತೆ ಸಮನ್ವಯ ಸಾಧಿಸುವುದು ಹಾಗೂ ಪೋಷಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಯೋಜನೆ ರೂಪಿಸಲಾಗಿದೆ ಎಂದು ಕನ್ನಡ ಶಾಲೆ ಉಳಿಸಿ ಬೆಳೆಸಿ ಸಂಘಟನೆಯ ರಾಜ್ಯಾಧ್ಯಕ್ಷ ಉನೆಸ್ ಪೈರಾಜ್ ಹೇಳಿದರು. ಭೀಮು ಪೂಜಾರಿ ಮಾತನಾಡಿ ಕನ್ನಡ ಶಾಲೆಗಳು ನಮ್ಮ ಸಂಸ್ಕೃತಿ ಮತ್ತು ಗುರುತಿನ ನೆಲೆ. ಅವುಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ಹೇಳಿದರು. ಯುವಕರ ಶಕ್ತಿ ಮತ್ತು ಜನಸಹಕಾರದೊಂದಿಗೆ ಜಿಲ್ಲೆಯಲ್ಲಿ ಕನ್ನಡ ಶಿಕ್ಷಣಕ್ಕೆ ಹೊಸ ಚೈತನ್ಯ ತರಲು ಸಂಕಲ್ಪ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕನ್ನಡ ಶಾಲೆ ಉಳಿಸಿ ಬೆಳೆಸಿ ಸಂಘಟನೆಯ ಜಿಲ್ಲಾಧ್ಯಕ್ಷ ಡಾ. ಸಿದ್ದಲಿಂಗ ರೆಡ್ಡಿ ಕಂದಕೂರ, ಕಲಬುರಗಿ ಜಿಲ್ಲಾಧ್ಯಕ್ಷ, ಯಾದಗಿರಿ ಮಹಿಳಾ ಘಟಕದ ಅಧ್ಯಕ್ಷ ರುದ್ರಾಂಬಿಕ ಪಾಟೀಲ್ ಮುಂತಾದವರಿದ್ದರು.

# ರಾಜ್ಯಪಾಲರಿಂದ ರೋಹಿತ್ ವಿಜಯಗೆ ಚಿನ್ನದ ಪದಕ



ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ್ ಜಿಲ್ಲೆಯ ರೋಹಿತ್ ವಿಜಯ ಜಿರೋಬೆ ಅವರು 24-02-2026 ರಂದು ನಡೆದ ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿಯ 43ನೇ ವಾರ್ಷಿಕ ಘಟಿಕೋತ್ಸವದಲ್ಲಿ ಎಂ.ಎಸ್.ಸಿ. ಸಸ್ಯಶಾಸ್ತ್ರ ವಿಭಾಗದ "ಸಸ್ಯ ರೋಗಶಾಸ್ತ್ರ ಮತ್ತು ಸಸ್ಯ ಸಂರಕ್ಷಣೆ" ವಿಷಯದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿ ರಾಜ್ಯಪಾಲರಾದ (ಗವರ್ನರ್) ಥಾವರ್ ಚಂದ್ ಗೆಹ್ಲೋಟ್ ರವರಿಂದ ಚಿನ್ನದ ಪದಕ ಪಡೆದು ಬೀದರ ಜಿಲ್ಲೆಗೆ ಕೀರ್ತಿ ತಂದಿದ್ದಾರೆ.

ಪ್ರಸ್ತುತ ಅವರು ಬೀದರ್‌ನ ಕರ್ನಾಟಕ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಬೀದರ್ ನಲ್ಲಿ ಸಸ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಸಾಧನೆಗೆ ಅವರ ಕುಟುಂಬಸ್ಥರು, ಸ್ನೇಹಿತರು ಹಾಗೂ ಹಿತೈಷಿಗಳು ಅಭಿನಂದನೆಗಳು ತಿಳಿಸಿದ್ದಾರೆ.

# ಹಣಮಂತ ನಿರಾಣಿ ವಿಜಯ ಸಹಕಾರಿ ಬ್ಯಾಂಕ್ 70ನೇ ಶಾಖೆ ಉದ್ಘಾಟನೆ

## ಆರ್ಥಿಕ ಶಕ್ತಿ ತುಂಬಲು ಎಂಆರ್‌ಎನ್ ಬದ್ಧತೆಯಿಂದ ಕಾರ್ಯನಿರ್ವಹಣೆ: ನಿರಾಣಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್



ರೈತರು,ಬಡವರು,ಹಿಂದುಳಿದವರು,ಸಣ್ಣ ಉದ್ಯಮಿದಾರರಿಗೆ ಆರ್ಥಿಕ ಶಕ್ತಿ ತುಂಬಲು ಮುಧೋಳ ಮೂಲದ ಮುರುಗೇಶ ರುದ್ರಪ್ಪ ನಿರಾಣಿ (ಎಂಆರ್‌ಎನ್) ಉದ್ಯೋಗ ಸಮೂಹ ಸಂಸ್ಥೆಯ ವಿಜಯ ಸೌಹಾರ್ದ ಕ್ರೆಡಿಟ್ ಸಹಕಾರಿ ಸಂಘ ಬದ್ಧತೆಯಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಸಂಸ್ಥೆ ನಿರ್ದೇಶಕರೂ ಆದ ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ ಹೇಳಿದರು.

ಇಲ್ಲಿನ ಪಾಪನಾಶ ಗೇಟ್ ಹತ್ತಿರದ ಸಾಯಿ ಕ್ಲಾಥ್ ಪಕ್ಕ ಸುಸಜ್ಜಿತ ಕಚೇರಿಯಲ್ಲಿ ಬುಧವಾರ ವಿಜಯ ಸೌಹಾರ್ದ ಸಹಕಾರಿ ಸಂಘದ 70ನೇ ಶಾಖೆ ಲೋಕಾರ್ಪಣೆ ಸಮಾರಂಭದಲ್ಲಿ ಮಾತನಾಡಿದ ಅವರು, ಹಿಂದುಳಿದ ಬೀದರ್ ಜಿಲ್ಲೆಯ ಜನರಿಗೆ ವಿಶೇಷವಾಗಿ ಕೃಷಿಕರ ಆರ್ಥಿಕ ಸ್ಥಿತಿ ಸುಧಾರಣೆಗೆ ಪೂರಕವಾಗಿ ವಿಜಯ ಸೌಹಾರ್ದ ಕೆಲಸ ಮಾಡಲಿದೆ. ಈ ವರ್ಷಾಂತ್ಯಕ್ಕೆ ಬ್ಯಾಂಕ್ ಶಾಖೆ 100ಕ್ಕೇರಿಸುವ ಉದ್ದೇಶವಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಇನ್ನಷ್ಟು ಶಾಖೆ ತಾಲೂಕು ಕೇಂದ್ರಗಳಲ್ಲೂ ಸ್ಥಾಪಿಸಲಾಗುತ್ತದೆ ಎಂದರು.

32 ವರ್ಷ ಹಿಂದೆ ಸ್ಥಾಪಿತ ನಿರಾಣಿ ಗ್ರೂಪ್ 21ಕ್ಕೂ ಹೆಚ್ಚು ಕಂಪನಿ ಹೊಂದಿದ್ದು, 8 ಸಾವಿರ ಜನರಿಗೆ ಉದ್ಯೋಗ ಕೊಟ್ಟಿದೆ.

2007ರಲ್ಲಿ ಸ್ಥಾಪಿತ ವಿಜಯ ಸೌಹಾರ್ದ 45 ಸಾವಿರ ಕೋಟಿ ವ್ಯವಹಾರ ನಡೆಸುತ್ತಿದೆ. 3200 ಕೋಟಿ ಡೆಪಾಸಿಟ್ ಹೊಂದಿ ಠೇವಣಿದಾರರ ವಿಶ್ವಾಸವನ್ನು ಗಳಿಸಿದೆ. 2600 ಕೋಟಿ ಸಾಲ ವಿತರಿಸಿದೆ. 500 ಕೋಟಿ ಹಣ ವಿವಿಧ ಬ್ಯಾಂಕ್‌ಗಳಲ್ಲಿ ಠೇವಣಿ ಇಟ್ಟಿದೆ. ಸದಸ್ಯರಿಗೆ ಶೇ.23-25 ರಷ್ಟು ಲಾಭಾಂಶ ಹಂಚುವ ರಾಜ್ಯದ ಏಕೈಕ ಸಹಕಾರಿಯಾಗಿದೆ. 500ಕ್ಕೂ ಹೆಚ್ಚು ಸಿಬ್ಬಂದಿ ಬ್ಯಾಂಕ್‌ನಲ್ಲಿದ್ದಾರೆ. ಪ್ರತಿ ವರ್ಷ 7 ಕೋಟಿಯಷ್ಟು ಲಾಭ ಗಳಿಸುತ್ತಿದೆ. ಜನಪರ, ರೈತಪರ ಕಾಳಜಿಯುಳ್ಳ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ನೇತೃತ್ವದಲ್ಲಿ ಇಲ್ಲಿನ ಬ್ಯಾಂಕ್ ಶಾಖೆ ಗ್ರಾಹಕ ಸ್ನೇಹಿ, ರಾಜ್ಯದಲ್ಲೇ ಮಾದರಿಯಾಗಿ ಬೆಳೆಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು ಶಾಖೆ ಉದ್ಘಾಟಿಸಿ ಆಶೀರ್ವಚನ ನೀಡಿ, ನಿರಾಣಿ ಗ್ರೂಪ್ ಉದ್ಯಮ ಕ್ಷೇತ್ರದಲ್ಲಿ ಕ್ರಾಂತಿ ಮಾಡಿದೆ. ಲಕ್ಷಾಂತರ ಜನರ ಬಾಳಿಗೆ ಬೆಳಕಾಗಿದೆ. ಹಿಂದುಳಿದ ಜಿಲ್ಲೆ ಆರ್ಥಿಕ ಪ್ರಗತಿಗೆ ವಿಜಯ ಶಾಖೆ ಕೊಡುಗೆ ನೀಡಲಿ. ಭಾಲ್ಕಿ, ಬಸವಕಲ್ಯಾಣ ಸೇರಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಶಾಖೆ ಆರಂಭವಾಗಲಿ ಎಂದರು.

ಬೀದರ್ ಶಾಖೆ ಸಲಹಾ ಸಮಿತಿ ನಿರ್ದೇಶಕ ಮಂಡಳಿ ಮುಖ್ಯಸ್ಥರಾದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಷ್ಟ್ರೀಕೃತ ಬ್ಯಾಂಕ್ ಮಾದರಿಯಲ್ಲಿ ಗಣಕೀಕೃತ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯಡಿ ಎಲ್ಲ ಸೇವೆ ನೀಡಲಾಗುತ್ತಿದೆ. ಎಸ್‌ಎಂಎಸ್, ಠೇವಣಿ ಮೇಲೆ ಶೇ.12.5ರವರೆಗೆ ಆಕರ್ಷಕ ಬಡ್ಡಿ ದರ, ಆರ್‌ಟಿಜಿಎಸ್, ನೆಫ್ಟ್, ಪೇ ಪ್ ಆನ್‌ಲೈನ್ ವ್ಯವಸ್ಥೆ ಕಲ್ಪಿಸಲಾಗಿದೆ. ಬಹುಕೋಟಿ ವ್ಯವಹಾರದ ಶಾಖೆ ಇಲ್ಲಿ ಆರಂಭವಾಗಿದ್ದರಿಂದ ಗಡಿ ಜಿಲ್ಲೆಗೆ ನಿರಾಣಿ ಗ್ರೂಪ್ ಯುಗಾದಿ ಮುನ್ನ ಗಿಫ್ಟ್ ಕೊಟ್ಟಿದೆ. ಜಿಲ್ಲೆಯ ಜನರು ಇದರ ಲಾಭ ಪಡೆಯಲು ಕೋರಿದರು.

ವಿಧಾನ ಪರಿಷತ್ ಮಾಜಿ ಸಭಾಪತಿ ರಘುನಾಥರಾವ ಮಲ್ಕಾಪುರೆ, ಹುಮನಾಬಾದ್ ಶಾಸಕ ಡಾ.ಸಿದ್ದಲಿಂಗಪ್ಪ ಪಾಟೀಲ್, ಮಾತನಾಡಿದರು, ಮಾಜಿ ಶಾಸಕ ಪ್ರಕಾಶ ಖಂಡ್ರೆ ಮಾತನಾಡಿದರು. ರಾಜ್ಯ ಮಹಿಳಾ ಸಹಕಾರ ಮಹಾಮಂಡಳ ಅಧ್ಯಕ್ಷೆ ಶಕುಂತಲಾ ಬೆಲ್ದಾಳೆ, ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್, ಬಿಡಿಎ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಪ್ರಮುಖರಾದ ಬಿ.ಜಿ.ಶೆಟಕಾರ್, ಬಾಬು ವಾಲಿ, ಬಸವರಾಜ ಧನ್ನೂರ, ನಂದಕಿಶೋರ ವರ್ಮಾ, ಸಲಹಾ ಸಮಿತಿ ನಿರ್ದೇಶಕರಾದ ಬಾಬುರಾವ ಕಾರಬಾರಿ, ಹಾವಶೆಟ್ಟಿ ಪಾಟೀಲ್, ಶಂಕರರಾವ ಕೊಟ್ಟರಕಿ, ಸದಾನಂದ ಜೋಶಿ, ರಾಜರಡ್ಡಿ ಶಹಾಬಾದ, ಬಾಬುರಾವ ಮಲ್ಕಾಪುರ, ಜಗನ್ನಾಥ ಜಮಾದಾರ, ಮಾಣಿಕಪ್ಪ ಖಾಶೆಂಪುರ, ಅನೀಲ ಪನ್ನಾಳೆ, ಸಂತೋಷ ರಾಸೂರ, ಮಂಜುನಾಥ ಸುಣಗಾರ, ಅಣವೀರ ಕೊಡಂಬಲ್, ಬ್ಯಾಂಕ್ ಎಚ್‌ಆರ್ ಆನಂದ ಕುಲಕರ್ಣಿ ಇತರರಿದ್ದರು. ನವಲಿಂಗ ಪಾಟೀಲ್ ನಿರೂಪಿಸಿದರು. ಗಾಯಕಿ ಮಹೇಶ್ವರಿ ಪಾಂಚಾಳ ವಚನ ಸಂಗೀತ, ಭಕ್ತಿ ಸುಧೆ ಹರಿಸಿದರು.

### ಬೀದರ್‌ನಲ್ಲಿ ಉದ್ಯಮ ಸ್ಥಾಪಿಸಿ

"ನಿರಾಣಿ ಗ್ರೂಪ್‌ನಿಂದ ಸಕ್ಕರೆ ಅಥವಾ ಬಯ್ಯಾವುದಾದರೂ ದೊಡ್ಡ ಕಾರ್ಖಾನೆ ಬೀದರ್‌ನಲ್ಲಿ ಸ್ಥಾಪಿಸಬೇಕೆಂದು ಶ್ರೀ ರಾಜೇಶ್ವರ ಶಿವಾಚಾರ್ಯ, ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ, ಡಾ.ಸಿದ್ದಲಿಂಗಪ್ಪ ಪಾಟೀಲ್, ಮಾಜಿ ಸಭಾಪತಿ ರಘುನಾಥರಾವ ಮಲ್ಕಾಪುರೆ, ಮಾಜಿ ಶಾಸಕ ಪ್ರಕಾಶ ಖಂಡ್ರೆ ಆಗ್ರಹಿಸಿದರು. ಬೀದರ್‌ನಲ್ಲಿ ಕಬ್ಬು ಹೆಚ್ಚು ಬೆಳೆಯುತ್ತಿದೆ. ನಿತ್ಯ 20-25ಸಾವಿರ ಟನ್ ಕೃಷಿಂಗ್ ಸಾಮರ್ಥ್ಯದ ಸಕ್ಕರೆ ಕಾರ್ಖಾನೆ ಸ್ಥಾಪನೆ ಅಗತ್ಯವಿದೆ. ಇಲ್ಲಿ ದೊಡ್ಡ ಉದ್ಯಮ ಸ್ಥಾಪನೆಗೆ ಪೂರಕ ವಾತಾವರಣವಿದೆ. ಎಲ್ಲರ ಸಹಕಾರವೂ ಸಿಗಲಿದೆ ಎಂದರು. ಬೇಡಿಕೆಗೆ ಸ್ಪಂದಿಸಿದ ಎಂಎಲ್‌ಸಿ ಹಣಮಂತ ನಿರಾಣಿ, ಈ ಬಗ್ಗೆ ಸಂಸ್ಥೆ ಮುಖ್ಯಸ್ಥ ಮುರುಗೇಶ ನಿರಾಣಿ ಜೊತೆಗೆ ಚರ್ಚಿಸಿ ಮುಂದಿನ ಹೆಜ್ಜೆ ಇಡುವುದಾಗಿ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು.

"ಬೀದರ್ ಸಹಕಾರ ಸಕ್ಕರೆ ಕಾರ್ಖಾನೆ ಬಂದ್ ಆಗಿದೆ. ನಾರಂಜಾ ಸಕ್ಕರೆ ಕಾರ್ಖಾನೆ ಯಾವಾಗ ಬಂದ್ ಆಗುತ್ತದೆಯೋ ಗೊತ್ತಿಲ್ಲ. ಮಹಾತ್ಮಗಾಂಧಿ ಸಕ್ಕರೆ ಕಾರ್ಖಾನೆ, ಡಿಸಿಸಿ ಬ್ಯಾಂಕ್ ಸಹ ಅವನತಿ ಅಂಚಿನಲ್ಲಿದ್ದಂತೆ ಕಾಣುತ್ತಿದೆ. ಹೀಗಾಗಿ ನಿರಾಣಿ ಗ್ರೂಪ್ ಬೀದರ್ ಜಿಲ್ಲೆಯ ರೈತರಿಗೆ, ದುಡಿಯುವ ಕೈಗಳಿಗೆ ಕೆಲಸ ಕೊಡಲು ದೊಡ್ಡ ಉದ್ಯಮ ಸ್ಥಾಪಿಸುವ ಜರೂರಿಯಿದೆ.

ರಘುನಾಥರಾವ ಮಲ್ಕಾಪುರೆ, ಪರಿಷತ್ ಮಾಜಿ ಸಭಾಪತಿ

# ವಿಜ್ಞಾನ ವಸ್ತು ಪ್ರದರ್ಶನ



• ಮಲ್ಲಮ್ಮ ನುಡಿ ವಾರ್ತೆ
ಕಮಲನಗರ

> "ಗ್ರಾಮೀಣ ಭಾಗದ ವಿದ್ಯಾರ್ಥಿಗಳಲ್ಲಿ ಇಂತಹ ಕಾರ್ಯಕ್ರಮಗಳು ಆತ್ಮವಿಶ್ವಾಸವನ್ನು ತುಂಬುತ್ತವೆ. ವಿದ್ಯಾರ್ಥಿ ಹಂತದಲ್ಲಿಯೇ ಇಂತಹ ವಿಜ್ಞಾನ ಪ್ರದರ್ಶನಗಳಲ್ಲಿ ಭಾಗವಹಿಸುವುದರಿಂದ ಮಕ್ಕಳಲ್ಲಿ ಸಂಶೋಧನಾ ಪ್ರವೃತ್ತಿ ಬೆಳೆಯುತ್ತದೆ.
> **ಜ್ಞಾನೇಶ್ವರ ಚಂಡೇಶ್ವರೆ**
> **ಮುಖ್ಯಗುರುಗಳ,**
> **ಚ.ಹಿ.ಪ್ರಾ. ಶಾಲೆ ಕಮಲನಗರ.**

ಪಟ್ಟಣದ ಚನ್ನಬಸವ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಅದ್ದೂರಿ ವಿಜ್ಞಾನ ವಸ್ತು ಪ್ರದರ್ಶನವನ್ನು ನಡೆಯಿತು. ವಿದ್ಯಾರ್ಥಿಗಳು ಸ್ವತಃ ತಯಾರಿಸಿದ ವಿವಿಧ ವೈಜ್ಞಾನಿಕ ಮಾದರಿಗಳು ನೋಡುಗರ ಗಮನ ಸೆಳೆದವು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶಾಂತಿವರ್ಧಕ

ಪ್ರೌಢಶಾಲೆಯ ಮುಖ್ಯಗುರುಗಳಾದ ರಾಮೇಶ್ವರ ಬಿರಾದಾರ

ಮತ್ತು ಚನ್ನಬಸವ ಶಾಲೆಯ ಮುಖ್ಯಗುರುಗಳಾದ ಜ್ಞಾನೇಶ್ವರ ಚಂಡೇಶ್ವರೆ ಅವರು ಜ್ಯೋತಿ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಿದ್ಯಾರ್ಥಿಗಳಿಂದ ವಿಜ್ಞಾನ ಮಾದರಿಗಳ ಪ್ರದರ್ಶನ: ಸೌರಶಕ್ತಿ, ಪರಿಸರ ಸಂರಕ್ಷಣೆ ಮತ್ತು ತಂತ್ರಜ್ಞಾನದ ಕುರಿತಾದ ಪ್ರಾಜೆಕ್ಟ್‌ಗಳು ಗಮನ ಸೆಳೆದವು. ಮಕ್ಕಳಲ್ಲಿನ ವೈಜ್ಞಾನಿಕ ಮನೋಭಾವನೆ ಮತ್ತು ಕುತೂಹಲವನ್ನು ವೀಕ್ಷಕರು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರಾದ ಸೀದಾಮ್ಮಾ ದಾನಾ, ಸವಿತಾ ಪಾಟೀಲ, ಮಾಲಾಶ್ರೀ ಶಿಂದೆ, ಅಜಯ ರಾಂಪುರೆ, ರಾಜಮತಿ ಶಿಂದೆ

ಡಿ.ಎಂ. ಭೂರೇ, ಪುಂಡಲೀಕ್ ಮಸೀಮೇಡ್, ಬಸವರಾಜ ಬಿರಾದಾರ, ಭುಜಂಗ ಕದಂ ಹಾಗೂ ಸತೀಶ ಮಟಕೆ ಸೇರಿದಂತೆ ಇನ್ನಿತರ ಉಪಸ್ಥಿತರಿದ್ದರು.

# ಹೊಸ ಪೀಳಿಗೆಗೆ ಪರಿಸರದ ಅರಿವು ಭೀಮಾಶಂಕರ ಬಿರಾದಾರ ಅಭಿಮತ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ಹೊಸ ಪೀಳಿಗೆಗೆ ಪರಿಸರವಾದದ ಅರಿವು ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ. ಪರಿಸರವಾದಿ ಚಿಂತನೆ ಸಮಸ್ತ ಜೀವಜಾಲದ ಕುರಿತು ಆಲೋಚಿಸುವ ಸಿದ್ಧಾಂತವಾಗಿದೆ ಎಂದು ಶ್ರೀ ಬಸವೇಶ್ವರ ಪದವಿ ಕಾಲೇಜು ಪ್ರಾಚಾರ್ಯರಾದ ಡಾ. ಭೀಮಾಶಂಕರ ಬಿರಾದಾರ ಹೇಳಿದರು.

ನಗರದ ದೊಡ್ಡಪ್ಪ ಅಪ್ಪ ಬಿಸಿಎ ಕಾಲೇಜಿನಲ್ಲಿ ಬೀದರ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರದಲ್ಲಿ ಪರಿಸರವಾದಿ ಚಿಂತನೆ ಕುರಿತು ಮಾತನಾಡಿದ ಅವರು, ನಮ್ಮ ಆಸೆ, ಆಮಿಷಗಳಿಗೆ ಕಡಿವಾಣ ಹಾಕಿ , ಸರಳ ಬದುಕು ನಡೆಸುವ ಮೂಲಕ ಪರಿಸರಕ್ಕೆ ಋಣಿಯಾಗಿರಬೇಕು ಎಂದರು.

ನಿಸರ್ಗದ ವೈವಿಧ್ಯಮಯತೆ, ಭೂಮಿಯಲ್ಲಿ ಇರುವ ವೈವಿಧ್ಯತೆಯನ್ನು ಹಲವು ಸಂಶೋಧನೆಗಳಿಂದ ಕಂಡುಕೊಂಡಿದ್ದೇವೆ. ನೈಸರ್ಗಿಕ ಸಂಪತ್ತನ್ನು ಉಳಿಸುವ, ನಿಸರ್ಗದ ನಿಯಮ ಕಾಪಾಡುವ ಹೊಣೆ ಎಲ್ಲರ ಮೇಲಿದೆ. ಈ ಕಾಲಘಟ್ಟದಲ್ಲಿ ಭೂಮಿ ಸರಕಾಗಿ ಬಿಟ್ಟಿದೆ. ಗಣಿಗಾರಿಕೆಯಿಂದ ಕಾಡು, ಮೃಗ, ಪಕ್ಷಿ ಸಂಕುಲ ನಾಶವಾಗುತ್ತಿವೆ. ರಿಯಲ್ ಎಸ್ಟೇಟ್ ಗಳಿಂದ ಫಲವತ್ತಾದ ನೆಲ ಕಳೆದುಕೊಳ್ಳುತ್ತಿದ್ದೇವೆ ಎಂದು ಆತಂಕ ವ್ಯಕ್ತಪಡಿಸಿದರು.

ಪರಿಸರವಾದಿ ಚಿಂತನೆ ಜನ ಒಂದು ಚಳುವಳಿಯ ಸ್ವರೂಪ ಪಡೆದಿದೆ. ನಿಸರ್ಗದ ಸ್ವರೂಪವನ್ನು ಊನವಾಗದಂತೆ ನಡೆದುಕೊಳ್ಳುವ ಬಗೆಯನ್ನು ತಿಳಿಸುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ದೊಡ್ಡಪ್ಪ ಅಪ್ಪ ಬಿಸಿಎ ಕಾಲೇಜು ಪ್ರಾಚಾರ್ಯರಾದ ಡಾ. ಲೋಕೇಶ ಮನ್ನಳ್ಳಿ ಮಾತನಾಡಿ ನಿಸರ್ಗಕ್ಕೆ ವಿರುದ್ಧವಾಗಿ ಬದುಕುವುದರಿಂದ ಹಲವು ಆರೋಗ್ಯ ಸಮಸ್ಯೆಗಳು ಎದುರಾಗುತ್ತಿವೆ. ಹೆಚ್ಚು ವಾಹನಗಳ ಬಳಕೆ, ಜಂಕ್, ಎಣ್ಣೆ ಪದಾರ್ಥಗಳ ವಿಪರೀತ ಸೇವನೆ ಮನುಷ್ಯನ ಆರೋಗ್ಯ ವ್ಯವಸ್ಥೆಯನ್ನು ಹಾಳು ಕೆಡವಿದೆ. ಮನುಷ್ಯ ಆರೋಗ್ಯವಾಗಿರಲು ನಿಸರ್ಗದ ಆರೋಗ್ಯ ಚೆನ್ನಾಗಿರಬೇಕು. ಆ ಕರ್ತವ್ಯ ಎಲ್ಲರದ್ದಾಗಿದೆ ಎಂದರು.

ಎನ್. ಎಸ್. ಎಸ್. ಅಧಿಕಾರಿ ಶಾಂತಕುಮಾರ ಭೂರೆ, ಉಪನ್ಯಾಸಕರಾದ ಕೈಲಾಸ ಪಾಟೀಲ, ಶಿಲ್ಪಾ ಕಿಂಡಿಮಠ, ವಾಣಿಶ್ರೀ ಪಾಟೀಲ, ಮಿಥಿಲಾ ಬಿರಾದಾರ, ಸುಪ್ರಿಯಾ ಶೆಟ್ಟಿಗಾರ್, ಮಹೇಶ್ವರಿ ಅಷ್ಟೂರೆ, ಭಾಗ್ಯಲಕ್ಷ್ಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ರವಿ ಬಡಿಗೇರ, ಮಹೇಶ್ವರಿ, ಸಂತೋಷಿ ಭಾವಗೀತೆ ಹಾಡಿದರು. ಸಾಕ್ಷಿ ಬಡದಾಳೆ ಶಿಬಿರದ ವರದಿ ವಾಚಿಸಿದರು.

ಸ್ನೇಹಾ ಬಿರಾದಾರ ಸ್ವಾಗತಿಸಿದರು. ಕಾವ್ಯಾಂಜಲಿ ಕಾಡಾದಿ ನಿರೂಪಿಸಿದರು. ಯೋಗಿತಾ ಮುಳೆ ವಂದಿಸಿದರು.

# ಆಟೊ ಚಾಲಕರಿಗೆ ಸಿಪಿಐ ಶ್ರೀಕಾಂತ ಎಚ್ಚರಿಕೆ: ಮಹಿಳೆಯರ ಸುರಕ್ಷತೆಗೆ ಆದ್ಯತೆ

• ಮಲ್ಲಮ್ಮ ನುಡಿ ವಾರ್ತೆ
ಕಮಲನಗರ



ಪಟ್ಟಣದ ಪೊಲೀಸ್ ಠಾಣೆಯಲ್ಲಿ ಇತ್ತೀಚೆಗೆ ಆಟೋ ಚಾಲಕರ ಪ್ರಮುಖ ಸಭೆ ನಡೆಸಿದ ಸಿಪಿಐ ಶ್ರೀಕಾಂತ ಅಲ್ಲಾಪುರೆ ಅವರು, ರಸ್ತೆ ನಿಯಮಗಳ ಪಾಲನೆ ಹಾಗೂ ಮಹಿಳಾ ಪ್ರಯಾಣಿಕರ ಸುರಕ್ಷತೆಯ ಬಗ್ಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಮಹಿಳಾ ಪ್ರಯಾಣಿಕರೊಂದಿಗೆ ಯಾವುದೇ ಕಾರಣಕ್ಕೂ ಅನುಚಿತವಾಗಿ ವರ್ತಿಸಬಾರದು. ಅಂತಹ ದೂರುಗಳು ಕೇಳಿಬಂದಲ್ಲಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು. ಸಂಚಾರ ನಿಯಮ ಕಡ್ಡಾಯವಾಗಿ ಸಮವಸ್ತ್ರ ಧರಿಸಬೇಕು. ಚಾಲನಾ ಪರವಾನಗಿ ಇಲ್ಲದೆ ಅಥವಾ ಮದ್ಯಪಾನ ಮಾಡಿ ವಾಹನ ಚಲಾಯಿಸುವುದು ಶಿಕ್ಷಾರ್ಹ ಅಪರಾಧ. ಸುರಕ್ಷತಾ ಕ್ರಮಗಳು, ವೇಗದ ಮಿತಿ ಕಾಯ್ದುಕೊಳ್ಳುವುದು, ಟ್ರಾಫಿಕ್ ಸಿಗ್ನಲ್‌ಗಳನ್ನು ಪಾಲಿಸುವುದು ಮತ್ತು ಸುರಕ್ಷಿತ ಅಂತರ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಚಾಲಕ ತಪ್ಪದೇ ಪಾಲಿಸಬೇಕು ಎಂದು ಹೇಳಿದರು.

ಪಿಎಸ್‌ಐ ಆಶಾ ರಾಠೋಡ ಮಾತನಾಡಿ, ರಸ್ತೆ ನಿಯಮಗಳು ನಮ್ಮ ಜೀವ ರಕ್ಷಣೆಗಾಗಿ ಇವೆ, ಅವುಗಳನ್ನು ಪಾಲಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಪ್ರಯಾಣಿಕರಿಂದ ದೂರು ಬಂದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಹೇಳಿದರು.

ಸಭೆಯಲ್ಲಿ ಪಟ್ಟಣದ ಆಟೋ ಚಾಲಕರಾದ ಜ್ಞಾನೋಬಾ ಕಾಂಬಳೆ, ಹಣಮಂತ, ಅಮಜದ್, ಫರದೀನ್, ನಾಗನಾಥ, ಇಮ್ರಾನ್, ಮಹೇಶ, ರಾಮ, ಸುರಜ, ಪ್ರದೀಪ, ಫೀರೋಜ್, ಪ್ರಶಾಂತ, ಗೋವಿಂದ, ಸಾಗರ, ಸಂದೀಪ ಸೇರಿದಂತೆ ಪೊಲೀಸ್ ಸಿಬ್ಬಂದಿ ಉಪಸ್ಥಿತರಿದ್ದರು.



**ಬಸವಕಲ್ಯಾಣ: ತಾಲ್ಲೂಕು ನರೇಗಾ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಟಿಐಎಂಎಸ್ ವರದಾ ಶಂಕರ ಅವರಿಗೆ ಪಂಚಾಯತ ಅಭಿವೃದ್ಧಿ ಅಧಿಕಾರಿಗಳ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ತಾ.ಪಂ.ಸ.ನಿ.ಮಹ್ಮದ್ ಸಲೀಂ , ಪಿಡಿಓ ಸಂಘದ ಅಧ್ಯಕ್ಷರಾದ ರಮೇಶ ರಾಠೋಡ, ನರೇಗಾ ಸಂಘದ ರಾಜ್ಯ ಪ್ರತಿನಿಧಿಯಾದ ಶಿವರಾಜ ಪಾಟೀಲ್, ಐಇಸಿ ಸಂಯೋಜಕ ವೀರಾರೆಡ್ಡಿ ಸೇರಿದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ನರೇಗಾ ಸಿಬ್ಬಂದಿಗಳು ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ)**

# ಸಹಕಾರ ಎಂದಿಗೂ ಮರೆಯುವುದಿಲ್ಲ: ಭದ್ರಪ್ಪ ಹುಡಗೆ



• ಮಲ್ಲಮ್ಮ ನುಡಿ ವಾರ್ತೆ
ಭಾಲ್ಕಿ

ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಸಾರಿಗೆ ಇಲಾಖೆಯಲ್ಲಿ ನೌಕರರು ತೋರಿದ ಸಹಕಾರ, ಪ್ರೀತಿ, ವಿಶ್ವಾಸ ಎಂದಿಗೂ ಮರೆಯುವುದಿಲ್ಲ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗಕ್ಕೆ ನಿಯೋಜನೆಗೊಂಡ ವಿಭಾಗೀಯ ಸಂಚಾರಿ ಅಧಿಕಾರಿ ಭದ್ರಪ್ಪ ಹುಡಗೆ ಹೇಳಿದರು.

ಪಟ್ಟಣದ ಬಸ್ ಡಿಪೋದಲ್ಲಿ ಆಯೋಜಿಸಿದ್ದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಭಾಲ್ಕಿ ಘಟಕದ ವತಿಯಿಂದ ಆಯೋಜಿಸಿದ್ದ ಅಭಿನಂದನಾ ಮತ್ತು ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಈ ಘಟಕದಲ್ಲಿ ಕಾರ್ಯನಿರ್ವಹಿಸುವ ಚಾಲಕರು, ನಿರ್ವಾಹಕರು ಮತ್ತು ಮೆಕಾನಿಕ್‌ಗಳ ಸಮಯ, ಕರ್ತವ್ಯ ಪ್ರಜ್ಞೆ ಮೆಚ್ಚುವಂತಾಗಿದೆ. ಎಲ್ಲರೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಗಾಗಿ ಎಲ್ಲರ ಸಹಕಾರದಿಂದ ವ್ಯವಸ್ಥಾಪಕರಾಗಿ ಇರುವಷ್ಟು ದಿವಸ ಉತ್ತಮ ಸೇವೆ ಸಲ್ಲಿಸಲು ಸಾಧ್ಯವಾಯಿತು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಕೆಕೆಆರ್‌ಟಿಸಿ ನೌಕರ ಪತ್ತಿನ ಸಹಕಾರ ಸಂಘದ ಬೀದರ ವಿಭಾಗದ ಉಪಾಧ್ಯಕ್ಷ ಶಾಂತಕುಮಾರ ದೇವಸೊಳ್ಳೆ, ನೌಕರ ಪತ್ತಿನ ಸಹಕಾರ ಸಂಘದ ಭಾಲ್ಕಿ ಘಟಕದ ನಿರ್ದೇಶಕ ಸಂಜು ಚೀದ್ರೆ, ಭಾಲ್ಕಿ ಘಟಕ ಎಸ್‌ಟಿ ಯೂನಿಯನ್ ಅಧ್ಯಕ್ಷ ಲೋಕೇಶ ಬಿರಾದಾರ್, ರಾಜಕುಮಾರ್ ಧೂಳೆ, ಹರೀಫ್, ಸಂತೋಷ ದಾಬಲೆ, ಪ್ರದೀಪ ಪವಾರ, ಕಿಶೋರ್ ಬಿರಾದಾರ್ ಸೇರಿದಂತೆ ಹಲವರು ಹಾಜರಿದ್ದರು.

# ಲೈಂಗಿಕತೆ ಬಗ್ಗೆ ಜಾಗೃತಿ ಮೂಡಿಸಲು ಮನವಿ



• ಮಲ್ಲಮ್ಮ ನುಡಿ ವಾರ್ತೆ
ಬಳ್ಳಾರಿ

ಜಿಲ್ಲೆ ಕಂಪ್ಲಿ ತಾಲೂಕಿನ ತಾಲೂಕು ದಂಡಾಧಿಕಾರಿಗಳ ಕಚೇರಿ ಆವರಣದಲ್ಲಿ ಸಮಾಜ ಸೇವ ಕಾರ್ಯಕರ್ತ ವೇದಿಕೆ (ರಿ) ವತಿಯಿಂದ ದಿನಾಂಕ 01–12–2025 ರಂದು ಮಡಿಕೇರಿ ಜಿಲ್ಲೆಯಲ್ಲಿ ನಡೆದಂತೆ ಲೈಂಗಿಕ ಕಿರುಕುಳ ತಡೆ ಕಾಯ್ದೆ ಬಗ್ಗೆ ಅರಿವು ಕಾರ್ಯಗಾರದ ಬಗ್ಗೆ ಮನವಿ ಸಲ್ಲಿಸಿದ್ದರು, ಆದರೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಆದ್ದರಿಂದ ಈ ಕಾರ್ಯಕ್ರಮವನ್ನು ತಕ್ಷಣವೇ ಆಯೋಜಿಸಲು ಕಂಪ್ಲಿಯ ಸಂಬಂಧಪಟ್ಟ ಇಲಾಖೆಗೆ ನಿರ್ದೇಶಿಸಲು ಮಾನ್ಯ ತಾಸಿಲ್ದಾರ್ ಶ್ರೀ ಮಂಜುನಾಥ್ ಅವರಿಗೆ ಸಾಮಾಜ ಸೇವೆ ಕಾರ್ಯಕರ್ತರ ವೇದಿಕೆಯಿಂದ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಾಮಾಜ ಸೇವೆ ಕಾರ್ಯಕರ್ತರ ವೇದಿಕೆ ವತಿಯಿಂದ ಕಂಪ್ಲಿ ತಾಲೂಕಿನ ಅಧ್ಯಕ್ಷ ಮರಿಯಪ್ಪ ಹೆಚ್ ಮಾತಾಡಿ, ನಮ್ಮ ವೇದಿಕೆಯಿಂದ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಿಂದ ಹಿಡಿದು ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮೇಲೆ ನಡೆಯುತ್ತಿರುವ ಲೈಂಗಿಕ ಕಿರುಕುಳ ತಡೆ ಕಾಯ್ಕೆ ಬಗ್ಗೆ, ಅರಿವು ಕಾರ್ಯಕ್ರಮ ಆಯೋಜಿಸಲು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಸಖಿ ಒನ್ ಸ್ಟಾನ್ ಸೆಂಟರ್ ಮತ್ತು ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಈ ಹಿಂದೆ ಮಡಿಕೇರಿ ಜಿಲ್ಲೆಯಲ್ಲಿ ಕಾರ್ಯಕ್ರಮವನ್ನು ಮಾಡಿದ್ದು ಅದೇ ರೀತಿ ಕಂಪ್ಲಿಯಲ್ಲಿ ಮಾಡಬೇಕೆಂದು ಮನವಿ ಮಾಡಿದ್ದೆವು. ಇದರಿಂದ ರಾಜ್ಯದ ಬೇರೆ–ಬೇರೆ ಜಿಲ್ಲೆ ಮತ್ತು ತಾಲೂಕುಗಳಲ್ಲಿ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜ ಅತ್ಯಾಚಾರ, ಯಸಿಡ್ ದಾಳಿ. ಮಾರಕಾಸ್ತ್ರಗಳಿಂದ ಹಲ್ಲೆ, ಕೊಲೆ, ಸುಲಿಗೆ, ಮಾಡುವ ಘಟನೆಗಳು ಕಂಪ್ಲಿಯಲ್ಲಿ ಆಗಬಾರದು ಎಂಬ ಉದ್ದೇಶದಿಂದ ನಮ್ಮ ವೇದಿಕೆಯಿಂದ ಮನವಿ ಸಲ್ಲಿಸಿದ್ದೆವು.

ಆದರೆ ಇದರ ಬಗ್ಗೆ ಯಾವುದೇ ರೀತಿಯ ಕ್ರಮ ಕೈಗೊಳ್ಳದೆ ಇರುವುದರಿಂದ ಕಂಪ್ಲಿ ತಾಲೂಕಿನಲ್ಲಿ ಸರ್ಕಾರಿ ಶಾಲೆಯಲ್ಲಿ ಒಂದು ಅಹಿತಕರ ಘಟನೆ ಸಂಭವಿಸಿದ್ದು ಇದು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಣೆಗೊಂಡಿದೆ. ನಂತರ ಕಂಪ್ಲಿಯ ಪೊಲೀಸರು ಆರೋಪಿಯನ್ನು ತಮ್ಮ ವಶಕ್ಕೆ ಪಡೆದು ಕಾನೂನಿಗೆ ಒಪ್ಪಿಸಿದ್ದಾರೆ. ಇದರ ಜೊತೆಗೆ ಪೋಸ್ ಕಾಯ್ದೆಯ ಪ್ರಕಾರ ಆರೋಪಿಗೆ ತಕ್ಕ ಕಾಯ್ದೆಗಳನ್ನು ಹಾಕಿ ಸಂತ್ರಸ್ತ ಬಾಲಕಿಗೆ ಹಾಗೂ ಕುಟುಂಬದವರಿಗೆ ನ್ಯಾಯ ಒದಗಿಸುತ್ತೀರಿ ಎಂದು ಮತ್ತು ಈ ಘಟನೆಯು ಬಳ್ಳಾರಿ ಜಿಲ್ಲೆಯಲ್ಲಿ ಹಾಗೂ ಇತರೆ ಜಿಲ್ಲೆಗಳಲ್ಲಿ ಮರುಕಳಿಸದಂತೆ ಪಾಠ ಕಲಿಸಬೇಕೆಂದು ಈ ಹಿಂದೆ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಮಾನ್ಯ ಘನ ನ್ಯಾಯಾಲಯವು ಅತ್ಯಾಚಾರ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ಕೊಟ್ಟು ಇತಿಹಾಸ ಸೃಷ್ಟಿಸಿದ ಹಾಗೆ ಕಂಪ್ಲಿಯಲ್ಲಿಯೂ ಸಹ ಕಠಿಣ ಕಾಯ್ದೆಗಳನ್ನು ಹಾಕಿ ಶಿಕ್ಷಿಸಬೇಕೆಂದು ಮನವಿ

ಹಾಗೆಯೇ ಪೋಕ್ಸು ಕಾಯ್ದೆಯ ಬಗ್ಗೆ ಮಕ್ಕಳಿಗೆ ವಿಚಾರಗಳ ಕುರಿತು ಮಾಹಿತಿ ಕೊಡಬೇಕು.

ಅಲ್ಲದೆ ಬೇರೆ ಮಕ್ಕಳನ್ನು ಲೈಂಗಿಕವಾಗಿ ಅಥವಾ ತಾವು ಯಾರನ್ನು ನಂಬುತ್ತಾರೋ ಮಾಹಿತಿ ದೂರು ಕೊಡಬೇಕು ಎಂದು ಕಾಯ್ದೆಯು ತಿಳಿಸಿರುತ್ತದೆ. ಇದು ಮಕ್ಕಳ ಹಕ್ಕು ಸಹ ಆಗಿರುತ್ತದೆ ಇದನ್ನು ತಿಳಿಸುವ ಪ್ರಯತ್ನ ತಮ್ಮ ಇಲಾಖೆ ಹಾಗೂ ಇತರ ಇಲಾಖೆಯ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಮಾಡಿ ತಿಳುವಳಿಕೆ ಮೂಡಿಸಿ, ಪ್ರತಿ ಶಾಲೆಯ ಮುಖ್ಯ ಗುರುಗಳಿಗೂ ಹಾಗೂ ಕಾಲೇಜು ಪ್ರಾಂಶುಪಾಲರಿಗೆ ಜವಾಬ್ದಾರಿಯನ್ನು ಮನವರಿಕೆ ಮಾಡಿಕೊಡಬೇಕು ಎಂದು ವೇದಿಕೆಯ ಮುಖಾಂತರ ಮನವಿ ಸಲ್ಲಿಸುತ್ತಿದೆವೆ ಎಂದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯಾಧ್ಯಕ್ಷರು ಸಮಾಜ ಸೇವಾ ಕಾರ್ಯಕರ್ತರ ವೇದಿಕೆ ಟಿ.ಹೆಚ್. ಎಂ. ರಾಜ್ ಕುಮಾರ್, ಪ್ರಧಾನ ಕಾರ್ಯದರ್ಶಿ ಗೋಪಾಲ್, ಕಾರ್ಯದರ್ಶಿ ರಿಯಾಜ್ ಅಹ್ಮದ್, ರಾಮಚಂದ್ರ

ಹಾವಿನಾಳ್ ತಮ್ಮಣ್ಣ ಗ್ಯಾಸ್ಸೆ ಶಿವು, ವಿನೋದ್ ಮಾಳಗಿ ಕಜ್ಜಿ ಮಹೇಶ್,

ರಸಿಕ ಮಾಳಗಿ, ಮೌಲಾ ಕಮಲಾಪುರ, ಸಿದ್ದ ಸಿಕ್ಲಿ, ಸರದಾರ, ಹುಲಿಯಪ್ಪ, ಪರಶುರಾಮ, ಜಗದೀಶ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಗ್ರಾಮ ಪಂ, ಅಭಿವೃದ್ಧಿ ಅಧಿಕಾರಿಯನ್ನು ವರ್ಗಾವಣೆ ಮಾಡಿ : ಮಲ್ಲಪ್ಪ ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ
ಮಸ್ಕಿ

ಮಾರಲದಿನ್ನಿ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ವರ್ಗಾವಣೆ ಮಾಡಬೇಕು ಎಂದು ಮಸ್ಕಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಲಿತ ಸಂಘರ್ಷ ಸಮಿತಿ (ಸಂಯೋಜಕ ಬಣ) ಜಿಲ್ಲಾ ಸಮಿತಿ ರಾಯಚೂರ ಸಂಘಟನೆ ವತಿಯಿಂದ ಮನವಿಯನ್ನು ಸಲ್ಲಿಸಲಾಯಿತು.

ತಾಲೂಕಿನ ಮಾರಲದಿನ್ನಿ ಗ್ರಾಮ ಪಂಚಾಯತಿಗೆ ವಿವಿಧ ಕೆಲಸ ಕಾರ್ಯಗಳಿಗೆ ಗ್ರಾಮ ಪಂಚಾಯತಿ ಕಾರ್ಯಾಲಯಕ್ಕೆ ಬರುವ ಸಾರ್ವಜನಿಕರಿಗೆ ಅಭಿವೃದ್ಧಿ ಅಧಿಕಾರಿಗಳು ಸರಿಯಾದ ಸ್ಪಂದನೆ ನೀಡುವುದಿಲ್ಲ. ಹಾಗೂ ಕಛೇರಿ ಸಮಯಕ್ಕೆ ಸರಿಯಾಗಿ ಹಾಜರಾಗದೇ ಯಾವಾಗಲೂ ಕಾಲಹರಣ ಮಾಡುತ್ತಾರೆ. ಸಾರ್ವಜನಿಕರು ಕಾರ್ಯಾಲಯದ ಮುಂದೆ ಕಾದು ಕುಳಿತು ಬೇಸತ್ತು ಹೋಗಿದ್ದಾರೆ. ಆದ್ದರಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ರಜ್ಞಾವಂತರು ಪಂಚಾಯತಿಗೆ ಹೋಗಿ ಹೋಗಿ ರೋಸಿ ಹೋಗಿದ್ದಾರೆ.

ಈಗಾಗಲೇ ಬೇಸಿಗೆ ಆರಂಭವಾಗಿದ್ದು, ಮಾರಲದಿನ್ನಿ ಪಂಚಾಯತಿ ವ್ಯಾಪ್ತಿಯ ವಿವಿಧ ಹಳ್ಳಿಗಳಲ್ಲಿ ಶುದ್ಧ ಕುಡಿಯುವ ನೀರಿಗಾಗಿ ಜನರು ಪರಿತಪಿಸುತ್ತಿದ್ದಾರೆ. ವಿವಿಧ ಹಳ್ಳಿಗಳಲ್ಲಿ ಬೇಜವಾಬ್ದಾರಿತನದಿಂದ ಆರ್ ಓ, ಪ್ಲಾಂಟ್ ಗಳು ಸಮರ್ಪಕ ನಿರ್ವಹಣೆ ಇಲ್ಲದೇ ಮೂಲೆ ಸೇರಿವೆ. ಇದಲ್ಲದೇ ಅಂಗವಿಕಲರಿಗೆ ಸಿಗಬೇಕಾದ ಸೌಲಭ್ಯವನ್ನು ಅಂದರೆ ಪಂಚಾಯತಿ ಅನುದಾನದಲ್ಲಿ ಅಂಗವಿಕಲರಿಗೆ ಶೇ3% ರಷ್ಟು ಅನುದಾನವನ್ನು ಸಮರ್ಪಕವಾಗಿ.

ನೀಡಿರುವುದಿಲ್ಲ. ಮತ್ತು ಎಸ್ಸಿ ಎಸ್ಟಿ ಶೇ25% ರಷ್ಟು ಅನುದಾನವನ್ನು ಸಂಪೂರ್ಣವಾಗಿ ದುರುಪಯೋಗ ಮಾಡಿ ಸರಕಾರದ ಖಜಾನೆಗೆ ನಷ್ಟ ಉಂಟುಮಾಡಿದ್ದು ಅಲ್ಲದೇ ಅಲ್ಲಿ ಓದಿರುವಂತಹ ಪ್ರಜ್ಞಾನವಂತರಿಗೂ ಕೂಡ ಇದನ್ನೆಲ್ಲ ಕೇಳುವುದಕ್ಕೆ ನೀವು ಯಾರು? ಎಂದು ಏರು ಧ್ವನಿಯಲ್ಲಿ ಧಮಕಿ ಹಾಕುತ್ತಾರೆ. ಸಾರ್ವಜನಿಕರು ಫೋನ್ ಕರೆ ಮಾಡಿದರೆ ಯಾವುದೇ ಕರೆಗಳನ್ನು ಸ್ವೀಕರಿಸುವುದಿಲ್ಲ. ಗ್ರಾಮ ಪಂಚಾಯತಿಯನ್ನು ಅಭಿವೃದ್ಧಿ ಮಾಡುವಂತಹ ಅಧಿಕಾರಿಯೇ ಈ ರೀತಿ ಬೇಜಾವಾಬ್ದಾರಿತನವನ್ನು ವಹಿಸಿದರೆ ಸಾಮಾನ್ಯ ಜನರ ಬದುಕು ಗುಳೇ ಹೋಗುವಂತಹ ಸ್ಥಿತಿ ನಿರ್ಮಾಣವಾಗುತ್ತದೆ.

ಹಾಗಾಗಿ ಇಂತಹ ಬೇಜಾವ್ದಾರಿತನದ ಅಧಿಕಾರಿಯನ್ನು ಕೂಡಲೇ ಇವರ ಮೇಲೆ ಕಾನೂನು ಕ್ರಮ ಜರುಗಿಸಿ ಗ್ರಾಮ ಪಂಚಾಯತಿಯಿಂದ ವರ್ಗಾವಣೆ ಮಾಡಿ ಅಮಾನತುಗೊಳಿಸಬೇಕು. ಒಂದು ವೇಳೆ ಇವರ ಮೇಲೆ ಎಂಟು ದಿನಗಳ ಒಳಗಾಗಿ ಯಾವುದೇ ರೀತಿ ಕ್ರಮ ಜರುಗಿಸದೇ ಇದ್ದಲ್ಲಿ ಸಂಬಂಧಪಟ್ಟ ತಾಲೂಕು ಪಂಚಾಯತಿ ಕಾರ್ಯಾಲಯದ ಮುಂದೆ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹವನ್ನು ಹಮ್ಮಿಕೊಳ್ಳುವುದು ಅನಿವಾರ್ಯವಾಗುತ್ತದೆ ಎಂದು ಈ ಮೂಲಕ ದಲಿತ ಸಂಘರ್ಷ ಸಮಿತಿ (ಸಂಯೋಜಕ ಬಣ) ಜಿಲ್ಲಾ ಸಮಿತಿ ರಾಯಚೂರು ಎಚ್ಚರಿಸುತ್ತಿದೆ ಎಂದುರು.

# ವಿವಿಧ ಜಯಂತಿ ಆಚರಣೆ ಪೂರ್ವಭಾವಿ ಸಭೆ



• ಮಲ್ಮನ ನುಡಿ ವಾರ್ತೆ ಮಸ್ಕಿ

ಅತ್ಯಂತ ಅಚ್ಚುಕಟ್ಟಾಗಿ ಮಹನೀಯರ ಜಯಂತಿಗಳನ್ನು ಆಚರಣೆ ಮಾಡಲಾಗುತ್ತದೆ ಎಂದು ತಹಶಿಲ್ದಾರಾದ ಮಂಜುನಾಥ ಭೋಗವತಿ ರವರು ಹೇಳಿದರು.


ಪಟ್ಟಣದ ತಹಶಿಲ್ದಾರರ ಕಚೇರಿ ಆವರಣದಲ್ಲಿ ಶ್ರೀ ರೇಣುಕಾ ಚಾರ್ಯ ಜಯಂತಿ, ಹಾಗೂ ಯೋಗಿನಾರೇಯಣ ಯತೀಂದ್ರರ ಜಯಂತಿ (ಕೈವಾರ ತಾತಯ್ಯ) ನವರ ಜಯಂತಿ ಪೂರ್ವ ಭಾವಿ ಸಭೆಯಲ್ಲಿ ಮಾತನಾಡಿದರು.

ಮುಂಬರುವ ಒಂದನೇ ತಾರೀಖ ದಿನದಂದು ಶ್ರೀ ರೇಣುಕಾ ಚಾರ್ಯರ ಜಯಂತಿ ಹಾಗೂ ದಿನಾಂಕ ಮೂರನೇ ತಾರೀಖ ಕೈವಾರ ತಾತಯ್ಯ ಅವರ ಜಯಂತಿಯನ್ನು ತಾಲ್ಲೂಕು ಆಡಳಿತ ವತಿಯಿಂದ ಹಾಗೂ ವಿವಿಧ ಇಲಾಖೆಯಲ್ಲಿ ಜಯಂತಿ ಆಚರಣೆ ಕಡ್ಡಾಯವಾಗಿ ಆಚರಣೆಗೆ ಆದೇಶ ನೀಡಿದ್ದು ಆದೇಶವನ್ನು ಪರಿಪಾಲನೆ ಮಾಡಬೇಕು ಇಲ್ಲವಾದರೆ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಈ ವೇಳೆ, ಮಸ್ಕಿ ಜಂಗಮ ಸಮಾಜದ ಅಧ್ಯಕ್ಷರು, ಪದಾಧಿಕಾರಿಗಳು, ಹಾಗೂ ಸಮಾಜದ ಪ್ರಮುಖ ಮುಖಂಡರು, ಯುವಕರು ಇದ್ದರೂ.

# ವಿದ್ಯಾರ್ಥಿಗಳ ಸಾಧನೆ





• ಮಲ್ಲಮ್ಮ ನುಡಿ ವಾರ್ತೆ
ಭಾಲ್ಕಿ

ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಪಿಯು ಕಾಲೇಜಿನ ವಿದ್ಯಾರ್ಥಿಗಳಾದ ಶ್ರವ ಶಿವಶಂಕರ 97.56, ನಿಶಾ ರಾಚಯ್ಯ ಮಠಪತಿ 93.8 ಪ್ರತಿಶತ ಅಂಕ ಪಡೆದು ಗಮನಾರ್ಹ ಸಾಧನೆ ಮಾಡಿದ್ದಾರೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

ಇನ್ನು ಐದು ಜನ ವಿದ್ಯಾರ್ಥಿಗಳು ಪ್ರತಿಶತ 90ಕ್ಕಿಂತ ಹೆಚ್ಚಿನ ಅಂಕ ಪಡೆದು ಐಐಟಿ ಮತ್ತು ಎನ್ ಐಟಿ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಅರ್ಹತೆ ಗಿಟ್ಟಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನರೆಡ್ಡಿ, ಉಪ ಪ್ರಾಚಾರ್ಯ ಸಿದ್ರಾಮ ಗೊಗ್ಗಾ ಸಂತಸ ವ್ಯಕ್ತಪಡಿಸಿದ್ದಾರೆ.

# ಮದ್ಯಪಾನ: ಸಭೆ

ರಾಯಚೂರು ಮದ್ಯ ಮತ್ತು ಮಾದಕವಸ್ತುಗಳ ಸೇವನೆಯಿಂದ ಕುಟುಂಬ ಹಾಗೂ ಸಮಾಜದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ಚರ್ಚಿಸಲು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷರಾದ ಶರಣಪ್ಪ ಸಲಾದಪುರ ಅವರ ಅಧ್ಯಕ್ಷತೆಯಲ್ಲಿ ಫೆ.26ರ ಬೆಳಿಗ್ಗೆ 11ಗಂಟೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇ–ರಿಯ ಸಭಾಂಗಣದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಸಭೆಗೆ ಅಗತ್ಯ ಮಾಹಿತಿಯೊಂದಿಗೆ ಹಾಜರಾಗುವಂತೆ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಸ್ ಸ್ಟ್ಯಾಂಡ್ ಮುಂಭಾಗದಲ್ಲಿ ಪ್ರತಿಭಟನೆ



**ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲೂಕಿನ ಮುದ್ದಾಪುರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿರುವ ಡಿಪ್ಲೋಮಾ ಪಾಲಿಟೆಕ್ನಿಕಲ್ ಕಾಲೇಜ್ ಮುಂಭಾಗದಲ್ಲಿ ಯಾವುದೇ ಬಸ್ಗಳು ನಿಲ್ಲಿಸುವುದಿಲ್ಲ ಆ ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳು ಸುಮಾರು ಬಹಳ ದೂರದಿಂದ ಬರುವ ವಿದ್ಯಾರ್ಥಿಗಳು ಕಂಪ್ಲಿಯಿಂದ ಹೋಗುವ ಹೊಸಪೇಟೆ ಮಾರ್ಗ ಕಡೆಗೆ ಹೊಸಪೇಟೆಯಿಂದ ಕಂಪ್ಲಿಗೆ ಬರುವ ಬಸ್ಸುಗಳು ಡಿಪ್ಲೋಮೋ ಕಾಲೇಜ್ ಮುಂಭಾಗದಲ್ಲಿ ನಿಲ್ಲಿಸಬೇಕೆಂದು ಕಂಪ್ಲಿ ನಗರದ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಬುಧವಾರ ಕಂಪ್ಲಿಯಲ್ಲಿ ಹೊಸ ಬಸ್ ನಿಲ್ದಾಣ ಮುಂಭಾಗದಲ್ಲಿ ಎಬಿಇಪಿ ಕಾರ್ಯಕರ್ತರು ಹಾಗೂ ಡಿಪ್ಲೋಮೋ ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು

ಡಿಪ್ಲೋಮೋ ಕಾಲೇಜ್ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡಿಪ್ಲೋಮಾ ಕಾಲೇಜ್ ವಿದ್ಯಾರ್ಥಿಗಳು ಡಿಪೋ ನಿಯಂತ್ರಣ ಅಧಿಕಾರಿಗೆ ಎಚ್ಚರಿಕೆ ನೀಡಿದರು . ಕೂಡಲೇ ಸರಿಪಡಿಸಲು ಸರ್ಕಾರಕ್ಕೆ ಆಗ್ರಹಿಸಿದರು.

ಕಂಪ್ಲಿ ಬಸ್ ಸ್ಟ್ಯಾಂಡ್ ನಿಯಂತ್ರಣ ಅಧಿಕಾರಿ ಆದಿಶೇಷ ಅವರಿಗೆ ಮನವಿ ಪತ್ರ ಸಲ್ಲಿಸಿದರು ಹೊಸಪೇಟೆಯಿಂದ ಬರುವ ಬಸ್ ಗಳು ಕಂಪ್ಲಿ ಹೊಸಪೇಟೆಗೆ ಹೋಗುವ ಬಸ್ ಗಳು ಡಿಪ್ಲೋಮಾ ಕಾಲೇಜ್ ಮುಂಭಾಗದಲ್ಲಿ ನಿಲ್ಲಿಸಬೇಕು ವಿದ್ಯಾರ್ಥಿಗಳಿಗೆ ಎಂದು ಎಬಿವಿಪಿ ರಾಜಕಾರಣಿ ಸದಸ್ಯ ಸಪ್ತಗಿರಿ ಮಂಚಿ ಕಂಠಿ ಅವರು ಮಾತನಾಡಿ ಸಾರಿಗೆ ಇಲಾಖೆ ಅಧಿಕಾರಿಗಳು ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು ಈ ಸಂದರ್ಭದಲ್ಲಿ ಪೊಲೀಸ ಇಲಾಖೆ ಅಧಿಕಾರಿಗಳು ಹಾಗೂ ಶಾಲೆಯ ಎಲ್ಲಾ ವಿದ್ಯಾರ್ಥಿಗಳು ಈ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು

# ಕಬಳಿಸಲು ಯತ್ನಿಸಿದ್ದ ಖಬರ್ಸ್ಥಾನ್ ಸ್ಥಳಕ್ಕೆ ನಾಸೀರ್ ಹುಸೇನ್ ಭೇಟಿ: ಪರಿಶೀಲನೆ

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :**

ಇತ್ತೀಚೆಗೆ ಎ.ಪ್ರಭಾವತಿ ಎಂಬುವವರು ನಕಲಿ ದಾಖಲೆಗಳ ಮೂಲಕ ಕೌಲ್ ಬಜಾರ್ ಪ್ರದೇಶದ ವಕ್ಫ್ ಮಂಡಳಿಗೆ ಸೇರಿದ 11.5 ಎಕರೆ ಖಬರ್ಸ್ಥಾನದ ಜಮೀನು ಕಬಳಿಸಲು ಮುಂದಾಗಿದ್ದರು. ಆ ಸ್ಥಳಕ್ಕೆ ನಿನ್ನೆ ರಾಜ್ಯಸಭಾ ಸದಸ್ಯ ಡಾ। ಸೈಯದ್ ನಾಸೀರ್ ಹುಸೇನ್ ಅವರು ವಕ್ಫ್ ಮಂಡಳಿಯ ಅಧಿಕಾರಿಗಳು ತಮ್ಮ ಬೆಂಬಲಿಗರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಶಾಮೀಲಾಗಿ ಪರಭಾರೆ ನಡೆಸಲು ಪ್ರಯತ್ನ ನಡೆಸಿದ್ದರು. ಇದನ್ನು ಜಿಲ್ಲಾ ವಕ್ಫ್ ಮಂಡಳಿ ಮಾಜಿ ಅಧ್ಯಕ್ಷ ಎನ್.ಹುಮಾಯೂನ್ ಖಾನ್ ಮೊದಲಾದವರೊಂದಿಗೆ ಮಾಹಿತಿ ಪಡೆದು ಇದು ಮುಸ್ಲಿಂ ಸಮಾಜಕ್ಕೆ ಸೇರುದ ಜಮೀನು ಯಾವುದೇ ಕಾರಣಕ್ಕೆ ಪರರು ಲಪಟಾಯಿಸಲು ಬಿಡಬಾರದು ಎಲ್ಲಾ ದಾಖಲೆಗಳಲ್ಲಿ ಇದು ವಕ್ಫ್ ಜಮೀನು ಎಂದಿದೆ ಎಂದರು.ನಂತರ



ನಂತರ ಅವರು ನಗರದ ಅಂದ್ರಾಳ್ ಬಳಿಯಲ್ಲಿನ, ಖಾಸಗೀ ವ್ಯಕ್ತಿಗಳು ಪರಭಾರೆಗೆ ಪ್ರಯತ್ನಿಸಿರುವ ಪ್ರದೇಶಕ್ಕೂ ಭೇಟಿ ನೀಡಿ ಪರಿಶೀಲಿಸಿ ಮಾಹಿತಿ ಪಡೆದುಕೊಂಡರು.ಪಾಲಿಕೆಯ ಸದಸ್ಯ ಇಬ್ರಾಹಿಂ ಬಾಬು ಮತ್ತಿತರರು ಉಪಸ್ಥಿತರಿದ್ದರು.

# ಅಭಿನಂದನಾ ಸಮಾರಂಭ

**ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ**

ಕರ್ನಾಟಕ ರಾಜ್ಯದ ಕಾರ್ಮಿಕ ಸಚಿವರಾದ ಸಂತೋಷ್ ಲಾಡ್ ಅವರ ಜನ್ಮದಿನವನ್ನು ರಾಜ್ಯದ್ಯಂತ ಆಪತ್ ರಕ್ಷಕರ ದಿನವಾಗಿ ಫೆಬ್ರವರಿ 27ರಂದು ಆಚರಿಸುತ್ತಿರುವ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಅಭಿನಂದನಾ ಸಮಾರಂಭದ ಬಳ್ಳಾರಿ ಜಿಲ್ಲೆಯ ಮೋತಿ ಸರ್ಕಲ್ ನ ಖಾದಿ ಬಂಡಾರ ಕಾಂಪ್ಲೆಕ್ಸ್ ನಲ್ಲಿ ಇರುವ ರಾಕ್ ವಿಲೇಜ್ ರೆಸಿಡೆನ್ಸಿಯ ಸಭಾಂಗಣದಲ್ಲಿ ಜಿಲ್ಲೆಯ 30 ಸಾಧಕರಿಗೆ ಅಭಿನಂದನಾ ಸಮಾರಂಭದ ಆಯೋಜಿಸಿದ್ದು ಎಮ್ಮಿಗನೂರು ಗ್ರಾಮದ ಸರಕಾರಿ ಶತಮಾನ ಶಾಲೆಯ ಗೌರವ ಶಿಕ್ಷಕ ನಿರೂಪಕ ಸಂಪನ್ಮೂಲ ವ್ಯಕ್ತಿ ಸಮಾಜ ಸೇವಕ ಎಸ್ ರಾಮಪ್ಪ ಅವರ ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದ ಸಾಧನೆಯನ್ನು ಪರಿಗಣಿಸಿ ಅಭಿನಂದನ ಸಮಾರಂಭದಲ್ಲಿ ಗೌರವಿಸಲಾಗುವುದು ಎಂದು ಜಿಲ್ಲೆಯ ಸಂಜೀವಿನಿ ಜೀವ ರಕ್ಷಕ ಟ್ರಸ್ಟಿನ ಅಧ್ಯಕ್ಷ ಡಿ ಜಿ ತಿರುಮಲ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ ನಂತರ ಪತ್ರಿಕಾ ಮಾಧ್ಯಮದೊಂದಿಗೆ ಗೌರವ ಶಿಕ್ಷಕ ಸಂಪನ್ಮೂಲ ವ್ಯಕ್ತಿ ಎಸ್ ರಾಮಪ್ಪ ಅವರು ಮಾತನಾಡಿ ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆನ ಗುರುತಿಸಿ ಅಭಿನಂದಿಸುತ್ತಿರುವುದು ಸಂತೋಷ್ ತಂದಿದೆ ಇನ್ನಷ್ಟು ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಲು ಸ್ಫೂರ್ತಿ ನೀಡಿದೆ ಎಂದು ಸಂತಸ ಹಂಚಿಕೊಂಡರು

# ಪಿಎಚ್‌ಡಿ. ಪಡೆದ ವಿರುಪಾಕ್ಷಗೆ ಸನ್ಮಾನ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :** ಹಂಪಿ ಕನ್ನಡ ವಿಶ್ವವಿದ್ಯಾಲಯದ 34ನೇ ನುಡಿ ಹಬ್ಬ (ಘಟಿಕೋತ್ಸವ)ದಲ್ಲಿ ಪ್ರಸ್ತುತ ಗಂಗಾವತಿ ತಾಲೂಕಿನ ಶ್ರೀರಾಮನಗರದ ಸಿಎನ್‌ಆರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿರುವ ಕಂಪ್ಲಿ ತಾಲೂಕು ಎಮ್ಮಿಗನೂರು ಗ್ರಾಮದ ವಿರುಪಾಕ್ಷ.ಕೆ ಇವರು ಆಹಾರ, ಹಸಿವು ಮತ್ತು ಬಡತನದ ಸಾಮಾಜಿಕ ಆಯಾಮಗಳು (ಬಳ್ಳಾರಿ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ವಿಷಯದ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್ ಡಿ ಪದವಿಯನ್ನು ಸ್ವೀಕರಿಸಿದರು ಈ ಹಿನ್ನೆಲೆಯಲ್ಲಿ ಗ್ರಾಮದ ಶಿಕ್ಷಣ ಪ್ರೇಮಿಗಳ ಬಳಗದ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು . ಈ ವೇಳೆ ಶಿಕ್ಷಣ ಪ್ರೇಮಿ ಗಾದಿಲಿಂಗಪ್ಪ ಮಾತನಾಡಿ ಶೋಷಿತ ಸಮುದಾಯದ ಯುವಕರು ಸಾಮಾಜಿಕ ಮುಖ್ಯ ವಾಹಿನಿಗೆ ಬರಬೇಕಾದರೆ ಶಿಕ್ಷಣ ಪ್ರಬಲ ಅಸ್ತ್ರ, ಯಶಸ್ಸು ಭಗವಂತನ ಕೊಡುಗೆಯಲ್ಲ, ಅದು ಪರಿಶ್ರಮ ಮತ್ತು ಶ್ರದ್ಧೆಯ ಫಲ. ಯುವಕರು ಡಿಜಿಟಲ್ ವ್ಯಸನದಿಂದ ಹೊರಬಂದು ವಿದ್ಯಾಭ್ಯಾಸದ ಕಡೆ ಗಮನ ಹರಿಸಿದರೆ ಯಶಸ್ಸು ದೊರೆಯುತ್ತದೆ ಎಂದರು. ಈ ಸಂದರ್ಭದಲ್ಲಿ ಪಕ್ಕೀರಪ್ಪ,ರಾಮಪ್ಪ, ನಿಂಗಪ್ಪ,ಶಾಂತಕುಮಾರ, ಬಸವರಾಜ, ಗಂಗಪ್ಪ, ಹನುಮಂತ, ಮಹೇಶ,ಮಲ್ಲಿಕಾ, ಮಹೇಶ, ಮಲ್ಲೇಶ ಹಾಗೂ ಕುಟುಂಬದವರು ಹಾಜರಿದ್ದರು.

# ಪೌರಾಣಿಕ ಸಂಭಾಷಣೆಗೆ ಮರುಳಾದ ಪ್ರೇಕ್ಷಕರು

**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :** ಶ್ರೀ ಕನಕ ದುರ್ಗಮ್ಮ ಸಿಡಿಬಂಡಿ ರಥೋತ್ಸವದ ಪ್ರಯುಕ್ತ ಕನ್ನಡ ಸಂಸ್ಕೃತಿ ಇಲಾಖೆ ಬಳ್ಳಾರಿ, ವತಿಯಿಂದ ನಡೆಸಿದ ರಕ್ತರಾತ್ರಿ ಪೌರಾಣಿಕ ನಾಟಕ ಸೇರಿದ್ದ ಸಾವಿರಾರು ಜನ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿತು, ಹಚ್ಚೋಳ್ಳಿ ಅಮರೇಶ್ ಮತ್ತು ತಂಡದಿಂದ ಪ್ರದರ್ಶಿತಗೊಂಡ ಪೌರಾಣಿಕ ನಾಟಕವನ್ನು ಸಿಡಿಬಂಡಿ ರಥೋತ್ಸವಕ್ಕೆ ಬಂದ ಸುತ್ತಮುತ್ತಲಿನ ಹಳ್ಳಿಯ ಜನರು ರಾತ್ರಿ ಇಡೀ ನಾಟಕ ನೋಡಿ ಸಂಭ್ರಮಿಸಿದರು, ರಾತ್ರಿ ಒಂದು ಗಂಟೆ ಸುಮಾರಿಗೆ ವೈದ್ಯರೊಬ್ಬರು ವೈದ್ಯಕೀಯ ಕರ್ತವ್ಯ ಮುಗಿಸಿ ಮನೆಗೆ ಹೋಗುತ್ತಿದ್ದ ದಾರಿಯಲ್ಲಿ ನಾಟಕದ ಸಂಭಾಷಣೆಯನ್ನು ಕೇಳಿ ಬಂದು ಸಂಪೂರ್ಣ ನಾಟಕವನ್ನು ನೋಡಿ ಕಲಾವಿದರನ್ನು ಅಭಿನಂದಿಸಿದರು . ಈ ನಾಟಕದಲ್ಲಿ ಕೃಷ್ಣನಾಗಿ ಜಗದೀಶ್ ಸ್ವಾಮಿ ಗೋಸಬಾಳ , ಅಶ್ವತ್ಥಾಮ ನಾಗಿ ತಿಮ್ಮನಗೌಡ ಎಂ ಗೆಣಿಕೆಹಾಳು, ದುರ್ಯೋಧನನಾಗಿ ಹಚ್ಚೋಳ್ಳಿ ಅಮರೇಶ್, ಧರ್ಮರಾಯನಾಗಿ ಬಸಯ್ಯಸ್ವಾಮಿ ಜವಳಗೇರಾ, ಭೀಮನ ಪಾತ್ರದಲ್ಲಿ ಚಿಲಾರ್ ಸಾಬ್ ಬಳ್ಳಾರಿ, ಶಕುನಿಯಾಗಿ ಸಿದ್ದಲಿಂಗಪ್ಪ ಯಾದವ್ ಹಚ್ಚೋಳ್ಳಿ, ಕರ್ಣ ಗಂಧರ್ವ ಪಾತ್ರದಲ್ಲಿ ಮಲ್ಲನಗೌಡ ಹಚ್ಚೋಳ್ಳಿ ಅರ್ಜುನನಾಗಿ ಜಡೆಪ್ಪ ಜಾನೆಕುಂಟೆ ಅಮೋಘವಾಗಿ ಅಭಿನಯಿಸಿದರು. ದ್ರೌಪದಿಯಾಗಿ ವೀಣಾ ಆದೋನಿ ಭಾನುಮತಿಯಾಗಿ ದುಶೀಲ ಕೂಡ್ಲಿಗಿ ಉತ್ತರೆ ಪಾತ್ರದಲ್ಲಿ ಸಾವಿತ್ರಿ ದಾವಣಗೆರೆ , ಮನೋಘ್ನವಾಗಿ ಅಭಿನಯಿಸಿದರು .ಹಾರ್ಮೋನಿಯಂ ತಿಪ್ಪೇಸ್ವಾಮಿ ಮುದ್ದಟನೂರು, ತಬಲಾ ಯೋಗೀಶ್, ವಸ್ತ್ರಲಂಕಾರ ಮುರುಳಿ ಚಳಿಕೆರೆ, ಕಾರ್ಯಕ್ರಮವನ್ನು ಕೊಟ್ರೇಶ್ ಮೋರ್ಗೇರಿ ಅವರು ನಿರ್ವಹಿಸಿ ನಿರೋಪಿಸಿದರು.



# ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಸಂಸ್ಕಾರ ಬೇಕು



**ಮಲ್ಲಮ್ಮ ನುಡಿ ವಾರ್ತೆಹುಮನಾಬಾದ್ :**

ಮಕ್ಕಳ ವ್ಯಕ್ತಿತ್ವ ವಿಕಾಸನ, ಅವರ ಭವಿಷ್ಯ ನಿರ್ಮಾಣಕ್ಕೆ ಗುಮಟ್ಟದ ಶಿಕ್ಷಣ ಹಾಗೂ ಉತ್ತಮ ಸಂಸ್ಕಾರ ಅವಶ್ಯಕವಾಗಿದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು.

ತಾಲೂಕಿನ ಹಳ್ಳಿಖೇಡ (ಬಿ) ಪಟ್ಟಣದ ಅಗಸ್ಟಿನ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಭಾನುವಾರ ನಡೆದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಕ್ಕಳಿಗೆ ಮನೆಯ ಮೊದಲ ಶಾಲೆ ತಾಯಿಯೇ ಮೊದಲ ಗುರು ಎನ್ನವ ಪರಂಪರೆಯಲ್ಲಿ ನಾವು ಬೆಳೆದಿದ್ದಿವೆ. ಹೀಗಾಗಿ ಮಕ್ಕಳು ತಪ್ಪು ಮಾಡಿದಾಗ ಅವರಿಗೆ ಪ್ರಾಥಮಿಕ ಹಂತದಲ್ಲಿಯೇ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ಮಾಡುವ ಮೂಲಕ ಅವರನ್ನು ಸರಿ ದಾರಿಗೆ ತರುವ ಪ್ರಾಮಾಣಿಕ ಪ್ರಯತ್ನ ಪಾಲಕ ಪೋಷಕರು ಮಾಡಬೇಕು ಎಂದರು.

ಹಳ್ಳಿಖೇಡ (ಬಿ) ಪಟ್ಟಣದ ಅಗಸ್ಟಿನ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶೈಕ್ಷಣಿಕ ಕ್ಷೇತ್ರದ ಪ್ರಗತಿಗೆ ಪೂರಕವಾದ ವಾತಾವರಣವಿದೆ. ಹೀಗಾಗಿ ಪ್ರಸ್ತುತ ಸಾಲಿನ 10ನೇ ತರಗತಿ ಪರೀಕ್ಷೆ ಫಲಿತಾಂಶ ಶೇ. 100ಕ್ಕೆ 100ರಷ್ಟು ಫಲಿತಾಂಶ ಬರಲಿ ಎಂದು ಶುಭ ಹಾರೈಸಿದರು.

ಈ ವೇಳೆ ಅಗಸ್ಟಿನ್ ಶಾಲೆಯ ಅಧ್ಯಕ್ಷ ಎನ್. ಭಾಷ್ಕರ್ ಹಾಗೂ ಪ್ರತಿಭಾವಂತ ಮಕ್ಕಳಿಗೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಸನ್ಮಾನಿಸಿ ಅಭಿನಂದಿಸಿದರು.

ಈ ಸಂದರ್ಭದಲ್ಲಿ ಪಾಸ್ಟರ್ ಆರ್. ಶಾಂತಕುಮಾರ, ಹಜರತ್ ಸೈಯದ್ ಮುಸ್ತಾಫ ಖಾದ್ರಿ ಸಾಹೇಬ್, ನಾಗರಾಜ ಹಿಬಾರೆ, ಮಾಂತಯ್ಯ ತೀರ್ಥಾ, ಯೂಸುಫ್ ಸೌದಾಗರ, ರಾಜು ಕಡಿಯಾಳ, ಮಲ್ಲಿಕಾರ್ಜುನ್ ಪ್ರಭಾ, ಭಾಷ್ಕರ್ ಬಾಬು, ಡಾ. ಚಂದ್ರಕಾಂತ ಗಂಗಶಟ್ಟಿ, ಮಲ್ಲಿಕಾರ್ಜುನ್ ಮಹೇಂದ್ರಕರ್, ಶಶಿಕಾಂತ ಶಿಲವಂತ, ಸುರೇಶ ಪಾಟೀಲ್, ವಿಜಯಕುಮಾರ ಶಹಾಪೂರಕರ್, ಸುಂದರ ಸಿಂದಬಂಧಗಿ, ಜಗದೀಶ ಪಾಟೀಲ್, ಮಲ್ಲಿಕ್ ಬೀದರ್, ಕನಿಷ್ಕ ಮದನಕರ್, ಅರುಣಕುಮಾರ ಬಾವಗಿ, ರವಿ ಹಾದಿಮನಿ ಸೇರಿ ಅನೇಕರಿದ್ದರು.

# ಹುಣಸಗಿ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಕೊರತೆ



**ಮಲ್ಲಮ್ಮ ನುಡಿ ಹುಣಸಗಿ**

ಹುಣಸಗಿ ಪಟ್ಟಣದ ಕೇಂದ್ರ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗಿದೆ. ದಿನನಿತ್ಯ ಸುಮಾರು 150ಕ್ಕೂ ಹೆಚ್ಚು ಬಸ್ಸುಗಳು ಓಡಾಡುವ ಈ ನಿಲ್ದಾಣದಲ್ಲಿ ಸಾವಿರಾರು ಪ್ರಯಾಣಿಕರು ಸಂಚರಿಸುತ್ತಿದ್ದು, ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಿಶೇಷವಾಗಿ ಬೇಸಿಗೆ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ತಂಪಾದ ಮತ್ತು ಶುದ್ಧ ಕುಡಿಯುವ ನೀರಿನ ಅಗತ್ಯ ಹೆಚ್ಚಾಗಿದೆ. ಆದರೆ ನಿಲ್ದಾಣದಲ್ಲಿ ಸಮರ್ಪಕ ನೀರಿನ ವ್ಯವಸ್ಥೆ ಇಲ್ಲದ ಕಾರಣ ಮಹಿಳೆಯರು, ವೃದ್ಧರು ಹಾಗೂ ಮಕ್ಕಳು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ.

ಪ್ರಯಾಣಿಕರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿ, “ಇಷ್ಟೊಂದು ಬಸ್ ಸಂಚಾರ ಇರುವ ನಿಲ್ದಾಣದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡದೇ ಅಧಿಕಾರಿಗಳು ಕಣ್ಣುಮುಚ್ಚಿ ಕುಳಿತಿದ್ದಾರೆ” ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರು ಸಂಬಂಧಿಸಿದ ಸಾರಿಗೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಶಾಶ್ವತ ನೀರಿನ ಸೌಲಭ್ಯ ಕಲ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

**ಸಾರ್ವಜನಿಕರ ಬೇಡಿಕೆ:**

ತಕ್ಷಣವೇ ಕುಡಿಯುವ ನೀರಿನ ಟ್ಯಾಂಕ್ ಹಾಗೂ ಶುದ್ಧೀಕರಣ ಘಟಕವನ್ನು ಅಳವಡಿಸಿ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಬೇಕು.

# ಹಗರಿಬೊಮ್ಮನಹಳ್ಳಿ ಪುರಸಭೆ: ಗದ್ದಲಕ್ಕೆ ಬಲಿಯಾದ ಬಜೆಟ್ ಪೂರ್ವಭಾವಿ ಸಭೆ




**ಮಲ್ಲಮ್ಮ ನುಡಿ ವಾರ್ತೆ ಹಗರಿಬೊಮ್ಮನಹಳ್ಳಿ :**

ಪುರಸಭೆಯಲ್ಲಿ ಅಭಿವೃದ್ಧಿ ಹಾಗೂ 26–27 ನೇ ಆಯವ್ಯಯ ಕುರಿತು ಆಗಬೇಕಿದ್ದ ಬುಧವಾರ ಸಭೆ ಗಲಾಟೆ, ಕೋಲಾಹಲ, ಉದ್ವಿಗ್ನ ವಾತಾವರಣ ನಿರ್ಮಾಣವಾಗಿ ಒಂದು ಹಂತದಲ್ಲಿ ಪರಸ್ಪರ ಕೈ ಕೈ ಮಿಲಾಯಿಸುವಷ್ಟರ ಮಟ್ಟಿಗೆ ವಿಕೋಪಕ್ಕೆ ಹೋಗಿ ನಂತರ ಸಭೆ ರದ್ದಾಗುವುದರ ಮೂಲಕ ಮುಂದ್ದಲ್ಪಟ್ಟತ್ತು.

ಅಧ್ಯಕ್ಷರು ಸಭಯ ಆರಂಭದಲ್ಲಿ 26–27ನೆಯ ಅಂದಾಜು ಆಯವ್ಯಯ ಓದಿ ಮುಗಿಸಿತ್ತು ಅಂತಯೇ, ಪುರಸಭೆಯ ಸದಸ್ಯರ ಲ್ಲೊಬ್ಬ ರ್ ದ ಗಣೇಶ್ ಏರು ಧ್ವನಿಯಲ್ಲಿ ಪ್ರತಿ ತಿಂಗಳು ಕರೆಯಬೇಕಾದ ಸಾಮಾನ್ಯ ಸಭೆ ಯನ್ನು ನಿಯಮಗಳ ಪ್ರಕಾರ ಕರೆಯದೆ ಈಗ ದಿಡೀರ್ ಆಯವ್ಯದ ಸಭೆ ಕರೆದು ಪುರಸಭೆಯ ನಿಯಮಾವಳಿಗಳನ್ನು ಗಾಳಿಗೆ ತೂರಿ ನಿಮ್ಮ ಮನೆಬಂದಂತೆ ಆಡಳಿತ ನಡೆಸುತ್ತಿದ್ದೀರಿ ಎಂದು ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡರು. ಅಲ್ಲದೆ ನಾವು ಆರಿಸಿ ಬಂದ ವಾರ್ಡ್ ನ ಜನತೆಗೆ ಏನು ಉತ್ತರಿಸಬೇಕು....? ಮೂಲಭೂತ ಸೌಕರ್ಯಗಳನ್ನು ಕೂಡ ವ್ಯವಸ್ತ ಮಾಡಿಲ್ಲ. ಮೊದಲು ಬಾಡಿ ಮೀಟಿಂಗ್ ಮಾಡುವುದನ್ನು ಬಿಟ್ಟು ಇಲ್ಲದ ನೆಪಗಳನ್ನು ಹೇಳುತ್ತೀರೆಂದು ಆಕ್ರೋಶ ವ್ಯಕ್ತಪಡಿಸಿದರು. ಅದಕ್ಕೆ ಉತ್ತರ ನೀಡದ ಅಧ್ಯಕ್ಷ ಎಂ ಮರಿ ರಾಮಪ್ಪ ಮಾತನಾಡಿ, ಜೋರು ಮಾಡಿ ಮಾತನಾಡಬೇಡಿ. ಇಲ್ಲಿ ಸಭೆ ಕರೆದಿರುವುದು ಆಯವ್ಯಯದ ಮೇಲಿನ ಚರ್ಚೆಗೆ, ಅದರ ಬಗ್ಗೆ ಮಾತ್ರ ಚರ್ಚಿಸಬೇಕು ಎಂದರು. ಅಲ್ಲದೆ ವಾರ್ಡುಗಳಿಗೆ ನಾವು ಸಮಾನವಾಗಿ ಕೆಲಸ ಮಾಡುತ್ತಾ ಬಂದಿದ್ದೀವ. ಎಲ್ಲವನ್ನು ತಿಳಿದುಕೊಳ್ಳಲು ತಾಳ್ಮೆ ಅಗತ್ಯ ಅಂದರು. ಆಡಳಿತ ಪಕ್ಷದ ಅಜೀಜುಲ್ಲ ಮಾತನಾಡಿ, ತುಂಬ ಸುಧೀರ್ಘ ಅವಧಿಗೆ ಸಭೆಯನ್ನು ಕರೆದು ನಿಮ್ಮ ಮನೆಬಂದಂತ ಮಾಡುತ್ತಿದ್ದೀರಿ. ಮೊದಲು ಸದಸ್ಯರ ಸಭೆ ಮಾಡಿ, ನಂತರ ಬೇರೆ ಯಾವುದೇ ಮೀಟಿಂಗ್ ಮಾಡಿಕೊಳ್ಳಿ ಎಂದು ಅಧ್ಯಕ್ಷರಿಗೆ ಸೂಚಿಸಿದರು. ಸಭೆಯಲ್ಲಿ ಪಾಲ್ಗೊಂಡಿದ್ದ 5ನೇ ವಾರ್ಡಿನ ಬಯಲು ಪತ್ತಾರ ಸಮುದಾಯ ದವರು ಅವರ ವಾರ್ಡ್ನಲ್ಲಿ ಯಾವುದೇ ರೀತಿಯ ಮೂಲಭೂತ ಸೌಕರ್ಯಗಳ ವ್ಯವಸ್ಥೆ ಇಲ್ಲ ಎಂದು ತೋಡಿಕೊಂಡಿದಾಗ, ಅಧ್ಯಕ್ಷರು ಅವರ ವಾರ್ಡು ಉಲ್ಲೇಖ ಮಾಡಿ ಕೊಂಡರು. ಸಭೆ ರದ್ದಾದ ನಂತರ, ಇನ್ನೊಂದು ಸಾಮಾನ್ಯ ಸಭೆಯನ್ನು ಮಾರ್ಚ್ 15ನೇ ತಾರೀಕು ನಂದು ಮಾಡೋನು ಎಂದಾಗ, ಸದಸ್ಯರೆಲ್ಲರೂ ಗಲಾಟೆ ಮಾಡಿ, ಸಭೆ ಮಾಡುವುದನ್ನು ಅಷ್ಟು ದೀರ್ಘ ಮುಂದಾಡುವಂತೆಲ್ಲ ಎಂದು ಗಲಾಟೆ ಮಾಡಿದಾಗ ಏಳು ಜನಗಳೊಳಗೆ ಸಾಮಾನ್ಯ ಸಭೆ, ನಂತರ ಬಜೆಟ್ ಮೇಲಿನ ಪೂರ್ವ ಭಾವಿ ಸಭೆಯನ್ನು ಮಾಡಲು ನಿರ್ಧರಿಸಿದರು. ಒಟ್ಟಾ–ರೆಯಾಗಿ ಸಾಮಾನ್ಯ ಸಭೆ ಗದ್ದಲಗಳ ಭರಾಟೆಯಲ್ಲಿಯೇ ಪರ್ಯಾವಸನ ಹೊಂದಿತು. ಸಭೆಯಲ್ಲಿ ಉಪಾಧ್ಯಕ್ಷ ಅಂಬಿಕಾ ದೇವೇಂದ್ರಪ್ಪ, ಸದಸ್ಯರಾದ ಸುರೇಶ್ ಬಣಕಾರ, ನವೀನ್ ಸಂಜ್ಯೋತ, ನಲ್ಲು ಇಸ್ಮಾಯಿಲ್, ಮಂಜುಳಾ ಕೃಷ್ಣ ನಾಯಕ್, ರೇಷ್ಮಾ ಸಿಕಂದರ್, ಕಮಲಮ್ಮ, ನಾಮ ನಿರ್ದೇಶಿತ ಸದಸ್ಯರಾದ ಬಾರಿಕಾರ ಮಂಜು ನಾಥ, ತ್ಯಾವಣಗೆಕೊಟ್ರೇಶ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಂಗನಕಲ್ಲು ಮ್ಯೂಸಿಯಂ ಅಭಿವೃದ್ಧಿಗೆ ಅಗತ್ಯ ಸಹಕಾರ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :** ನಗರದ ಸಾಂಸ್ಕೃತಿಕ ಸಮುಚ್ಚಯದಲ್ಲಿನ ರಾಬರ್ಟ್ ಬ್ರೂಸ್ ಫೂಟ್ ಪ್ರಾಕ್ತನ ವಸ್ತುಸಂಗ್ರಹಾಲಯದ ಅಭಿವೃದ್ಧಿಗೆ ಅಗತ್ಯ ಸಹಕಾರ ನೀಡಲಿದೆಂದು ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (ಎನ್ ಎಂ ಡಿ ಸಿ)ಯ ಜನರಲ್ ಮ್ಯಾನೇಜರ್(ಸಿಎಸ್ಆರ್) ಶುಭಾಶಿಸ್ ಚಟರ್ಜಿ ಹೇಳಿದ್ದಾರೆ.

ಅವರು ಇಂದು ಮ್ಯೂಸಿಯಂಗೆ ಭೇಟಿ ನೀಡಿ, ಮಾನವ ಅಭಿವೃದ್ಧಿ ಮತ್ತು ವಿಕಾಸದ ಕುರಿತು ಈ ವಿಶಿಷ್ಟ ಮ್ಯೂಸಿಯಂವನ್ನು ಸ್ಥಾಪಿಸಿದ ಪ್ರೊ.ರವಿ ಕೊರಿಶೆಟ್ಟರ್ ಅವರ ಪ್ರಯತ್ನಗಳನ್ನು ಪ್ರಶಂಸಿ. ಮ್ಯೂಸಿಯಂ ಅಭಿವೃದ್ಧಿಗೆ ಎನ್ ಎಂಡಿಸಿ ಈಗಾಗಲೇ 20 ಲಕ್ಷಗಳನ್ನು ನೀಡಿದ್ದು, ಭವಿಷ್ಯದಲ್ಲಿಯೂ ಎಲ್ಲಾ ರೀತಿಯ ಸಹಾಯವನ್ನು ಮುಂದುವರಿಸಲು ಬದ್ಧವಾಗಿರುವುದಾಗಿ ಹೇಳಿದ್ದಾರೆ. ಈವೇಳೆ ಮ್ಯೂಸಿಎಂ ಸದಸ್ಯ ಎಂ.ಅಹಿರಾಜ್ ಮೊದಲಾದವರು ಇದ್ದರು.

# ಸರ್ಕಾರಿ ಶಾಲೆಯಲ್ಲಿ ಅತಿಥಿ ಶಿಕ್ಷಕನೊಬ್ಬ 11 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ,ಪೊಲೀಸ್ ಪರಿಶೀಲನೆ

**ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ** ಜಿಲ್ಲೆ ಕಂಪ್ಲಿ ತಾಲೂಕಿನ ಗ್ರಾಮವೊಂದರ ಸರ್ಕಾರಿ ಶಾಲೆಯಲ್ಲಿ ಅತಿಥಿ ಶಿಕ್ಷಕನೊಬ್ಬ 11 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದಾನೆ ಎಂಬ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ ಚನ್ನಬಸಪ್ಪ ಪಾಟೀಲ್ ನೇತೃತ್ವದ ತಂಡ

ಶಾಲೆಗೆ ಭೇಟಿ ನೀಡಿ ಸಮಗ್ರ ಪರಿಶೀಲನೆ ನಡೆಸಿತು. ಪರಿಶೀಲನೆ ವೇಳೆ ಶಾಲೆಯ ಆಡಳಿತ ಹಾಗೂ ಮಕ್ಕಳ ಸುರಕ್ಷತಾ ವ್ಯವಸ್ಥೆಯಲ್ಲಿ ಹಲವು ಗಂಭೀರ ಲೋಪಗಳು ಕಂಡುಬಂದಿದ್ದು ಆತಂಕಕ್ಕೆ ಕಾರಣವಾಗಿದೆ.

ಪರಿಶೀಲನೆಯ ಬಳಿಕ ಮಾತನಾಡಿದ ಅಧಿಕಾರಿಗಳು, 2016ರ ಮಕ್ಕಳ ರಕ್ಷಣಾ ನೀತಿಯಂತೆ ಅತಿಥಿ ಶಿಕ್ಷಕರ ನೇಮಕಾತಿಗೆ ಕಡ್ಡಾಯವಾಗಿರುವ ಪೊಲೀಸ್ ಪರಿಶೀಲನೆ (ವೆರಿಫಿಕೇಷನ್) ಪ್ರಕ್ರಿಯೆ ಪಾಲಿಸಲಾಗಿಲ್ಲ ಎಂಬುದು ಬೆಳಕಿಗೆ ಬಂದಿದೆ. ಮಕ್ಕಳ ಸುರಕ್ಷತೆಗೆ ಸಂಬಂಧಿಸಿದ ಮೂಲಭೂತ ನಿಯಮಗಳನ್ನೇ ನಿರ್ಲಕ್ಷ್ಯ ಮಾಡಿರುವುದು ಅತ್ಯಂತ ಗಂಭೀರ ವಿಷಯವಾಗಿದೆ. ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ “ಉತ್ತಮ ಸ್ಪರ್ಶ–ಕೆಟ್ಟ ಸ್ಪರ್ಶ” ಕುರಿತು ಯಾವುದೇ ಜಾಗೃತಿ ಕಾರ್ಯಕ್ರಮ ನಡೆಸಲಾಗಿಲ್ಲ. ಮಕ್ಕಳಿಂದ ದೂರುಗಳನ್ನು ಸ್ವೀಕರಿಸಲು ಅಗತ್ಯವಾದ ಸಲಹಾ–ದೂರು ಪೆಟ್ಟಿಗೆಗಳನ್ನೂ



ಅಳವಡಿಸಲಾಗಿಲ್ಲ. ಮಕ್ಕಳ ಹಾಗೂ ಪೋಷಕರೊಂದಿಗೆ ಸಂವಹನ ಬೆಳೆಸುವ “ತೆರೆದ ಮನೆ” ಕಾರ್ಯಕ್ರಮಗಳು ಕೂಡ ಆಯೋಜನೆಯಾಗಿಲ್ಲ. ಪರಿಶೀಲನೆ ವೇಳೆ ವಿದ್ಯಾರ್ಥಿಗಳಲ್ಲಿ ಭಯದ ವಾತಾವರಣ ಕಂಡುಬಂದಿದ್ದು, ಶಾಲೆಯೊಳಗಿನ ಪರಿಸ್ಥಿತಿ ಕುರಿತು ಮಕ್ಕಳು ಮುಕ್ತವಾಗಿ ಮಾತನಾಡಲು ಹಿಂಜರಿದಿರುವುದು ಗಮನಕ್ಕೆ ಬಂದಿದೆ. ಅತ್ಯಾಚಾರ ಆರೋಪದ ಘಟನೆ ಮುಖ್ಯಶಿಕ್ಷಕರಿಗೆ ಸೇರಿದಂತೆ ಶಾಲೆಯ ಶಿಕ್ಷಕರಿಗೆ ತಿಳಿದಿದ್ದರೂ ಸೂಕ್ತ ಕ್ರಮ ಕೈಗೊಳ್ಳದೆ ಮೌನ ವಹಿಸಿರುವ ಆರೋಪವೂ ಕೇಳಿಬಂದಿದೆ.

ಇಬ್ಬರು ಶಿಕ್ಷಕರನ್ನು ಹೊರತುಪಡಿಸಿ ಉಳಿದ ಕೆಲವು ಶಿಕ್ಷಕರಿಂದ ಮಕ್ಕಳ ಮೇಲೆ ದೈಹಿಕ ಹಾಗೂ ಮಾನಸಿಕ ಹಿಂಸೆ ನಡೆದಿರುವುದಾಗಿ ವಿದ್ಯಾರ್ಥಿಗಳು ಹೇಳಿಕೊಂಡಿದ್ದಾರೆ. ಕೆಲ ಸಂದರ್ಭಗಳಲ್ಲಿ ಲೈಂಗಿಕ ಪ್ರಚೋದನೆಗೆ ಒಳಪಡಿಸಿರುವ ಆರೋಪಗಳೂ ಕೇಳಿ ಬಂದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಹಿಳಾ ಶಿಕ್ಷಕಿಯರಿಗೆ ಈ ವಿಷಯಗಳು ತಿಳಿದಿದ್ದರೂ ಮಕ್ಕಳ ಸಹಾಯವಾಣಿಗೆ ಮಾಹಿತಿ ನೀಡದಿರುವುದು ಮಕ್ಕಳ ರಕ್ಷಣಾ ವ್ಯವಸ್ಥೆಯ ವೈಫಲ್ಯವನ್ನು ತೋರಿಸುತ್ತದೆ.

ಶಾಲೆಯಲ್ಲಿ ವಿದ್ಯಾರ್ಥಿಗಳ ಸತತ ಗೈರುಹಾಜರಿಯನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗಿಲ್ಲ. ಶಾಲಾ ಅಭಿವೃದ್ಧಿ ಮತ್ತು ಮಕ್ಕಳ ಸುರಕ್ಷತೆ ಕುರಿತು ಚರ್ಚಿಸಲು ಅಗತ್ಯವಾದ ಎಸ್‌ಡಿಎಂಸಿ ಸಭೆಯನ್ನು 2025ರ ಆಗಸ್ಟ್‌ನಿಂದ ನಡೆಸದೇ ಇರುವುದೂ ಗಂಭೀರ ಲೋಪವಾಗಿದೆ. ಮಕ್ಕಳ ರಕ್ಷಣಾ ನೀತಿ ಕುರಿತು ಯಾವುದೇ ವಿಶೇಷ ಸಭೆ ಅಥವಾ ಮಾರ್ಗಸೂಚಿ ಜಾರಿಗೆ ತರಲಾಗಿಲ್ಲ ಎಂದು ತಿಳಿಸಿದರು.

ಅತಿಥಿ ಶಿಕ್ಷಕರ ಪೂರ್ವ ಇತಿಹಾಸ ಹಾಗೂ ನಡತೆ ಕುರಿತು ಮಾಹಿತಿ ಇದ್ದರೂ ಅವರನ್ನು ನೇಮಕ ಮಾಡಿರುವುದು ಪ್ರಶ್ನಾರ್ಥಕವಾಗಿದೆ. ಎಸ್‌ಡಿಎಂಸಿ ಸದಸ್ಯರ ಆರೋಪದಂತೆ ಮುಖ್ಯಶಿಕ್ಷಕರು ನಿಯಮಿತವಾಗಿ ಶಾಲೆಗೆ ಹಾಜರಾಗದೆ ನಿರ್ಲಕ್ಷ್ಯ ತೋರಿರುವುದರಿಂದ ಶಾಲೆಯ ಶೈಕ್ಷಣಿಕ ಹಾಗೂ ಶಿಸ್ತು ವಾತಾವರಣ ಹದಗೆಟ್ಟಿದೆ ಎಂದು ತಿಳಿಸಲಾಯಿತು. ಘಟನೆ ಕುರಿತು ಸಮಗ್ರ ವಿಚಾರಣೆ ನಡೆಸದೇ ಮುಖ್ಯಶಿಕ್ಷಕರನ್ನು ಬೇರೆ ಶಾಲೆಗೆ ವರ್ಗಾಯಿಸಿರುವ ಕ್ರಮಕ್ಕೂ ಆಕ್ಷೇಪ ವ್ಯಕ್ತವಾಯಿತು.

ಶಾಲೆಯ ಒಟ್ಟು 615 ವಿದ್ಯಾರ್ಥಿಗಳಲ್ಲಿ ಮಂಗಳವಾರ ಕೇವಲ 276 ಮಂದಿ ಮಾತ್ರ ಹಾಜರಾಗಿದ್ದು, ಘಟನೆ ಬಳಿಕ ಪೋಷಕರ ಆತಂಕದಿಂದ ಹಾಜರಾತಿ ಪ್ರಮಾಣ ಕುಸಿದಿರುವುದು ಗಮನಕ್ಕೆ ಬಂದಿದೆ. ಶಾಲೆಯಲ್ಲಿ ಏಳು ಮಹಿಳಾ ಅತಿಥಿ ಶಿಕ್ಷಕಿಯರು ಮಾತ್ರ ಕರ್ತವ್ಯಕ್ಕೆ ಹಾಜರಾಗಿದ್ದರು.

ಪರಿಶೀಲನೆ ವೇಳೆ ಸಂಗ್ರಹಿಸಿದ ಎಲ್ಲಾ ಮಾಹಿತಿಯನ್ನು ವಿವರವಾದ ವರದಿಯಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುವುದು. ಮಕ್ಕಳ ಸುರಕ್ಷತೆಗಾಗಿ ತಕ್ಷಣ ಕ್ರಮ ಕೈಗೊಳ್ಳುವಂತೆ ಶಿಫಾರಸ್ಸು ಮಾಡಲಾಗುತ್ತದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ತಿಳಿಸಿದ್ದಾರೆ.

ಪರಿಶೀಲನೆ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಆಪ್ತ ಸಮಾಲೋಚಕಿ ಸುಧಾ, ಮಕ್ಕಳ ಸಹಾಯವಾಣಿ ಸಂಯೋಜಕ ಕೆ.ಆನಂದ್, ಸಿಬ್ಬಂದಿ ರವಿಕುಮಾರ್, ಅಕ್ಕ ಪಡೆ ಸದಸ್ಯರಾದ ರಮ್ಯಾ, ಗಿರಿಜಾ, ಶರಾವತಿ, ಇಸಿಒಗಳಾದ ಎಂ. ರೇವಣ್ಣ, ಟಿ.ಎಂ. ಬಸವರಾಜ, ಎಸ್‌ಡಿಎಂಸಿ ಸದಸ್ಯರು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಭಾಗ್ಯನಗರ ಬಂದ್ ಸಂಪೂರ್ಣ ಯಶಸ್ವಿ



ಕೊಪ್ಪಳ- ಭಾಗ್ಯನಗರ ಬಂದ್ ಹಿನ್ನೆಲೆ ಕೊಪ್ಪಳ ಕೇಂದ್ರಿಯ ಬಸ್ ನಿಲ್ದಾಣ ಬಿಕೋ ಎನ್ನುತ್ತಿರುವುದು.





ಅಲ್ಟ್ರಾಟೆಕ್ ಕಾರ್ಖಾನೆ ಸ್ಥಾಪನೆ ವೇಳೆ ನಾನು ಶಾಸಕನಾಗಿದ್ದೆ. ಆಗ ನನ್ನ ಜೊತೆ ಯಾರೂ ಬರಲಿಲ್ಲ. ಏಕಾಂಗಿಯಾಗಿ ಹೋರಾಟ ಮಾಡಿದ್ದೇನೆ. ಅವೆಲ್ಲ ಮತ್ತೇ ನೆನಪು ಮಾಡುವುದು ಬೇಡ. ಕಾರ್ಖಾನೆ ಬೇಡ ಎಂದು ಮತ್ತೊಮ್ಮೆ ಸಿಎಂ ಭೇಟಿ ಮಾಡೋಣ. ಕಾರ್ಖಾನೆ ವಿರೋ' ಹೋರಾಟ ಮುಂದುವರೆಸೋಣ

– ಸಂಗಣ್ಣ ಕರಡಿ, ಮಾಜಿ ಸಂಸದ

• ವೀರಯ್ಯ ವಿ ಹಿರೇಮಠ, ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಸಾಣೆಹಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ,ಗದಗ ತೋಂಟದ ಸಿದ್ಧರಾಮೇಶ್ವರ ಸ್ವಾಮೀಜಿ, ಜೇವರಗಿ ಮಠದ ಸಿದ್ಧಬಸವ ಕಬೀರ ಮಹಾಸ್ವಾಮೀಜಿ ಸಾನ್ನಿಧ್ಯವಹಿಸಿ ಮಾತನಾಡಿದರು. ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಶಿಕ್ಷಣ ಉಳಿಸಿ ಸಮಿತಿಯ ವಿ.ಎನ್.ರಾಜಶೇಖರ, ಹೋರಾಟಗಾರ ಎ.ಟಿ.ರಾಮಸ್ವಾಮಿ, ರೈತ ಸಂಘಟನೆ ಮುಖಂಡ ಚಾಮರಸ ಮಾಲೀ ಪಾಟೀಲ್, ಸಂಸದ ರಾಜಶೇಖರ ಹಿಟ್ನಾಳ, ಶಾಸಕ ರಾಘವೇಂದ್ರ ಹಿಟ್ನಾಳ, ಮಾಜಿ ಸಂಸದ ಸಂಗಣ್ಣ ಕರಡಿ, ಎಂಎಲ್ಸಿ ಹೇಮಲತಾ ನಾಯಕ, ಜೆಡಿಎಸ್ ಮುಖಂಡ ಸಿ.ವಿ.ಚಂದ್ರಶೇಖರ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷರಾದ ಜ್ಯೋತಿ ಎಂ. ಗೊಂಡಬಾಳ, ಮಾತನಾಡಿದರು. ಹೋರಾಟ ಕ್ರಿಯಾ ಸಮಿತಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರ, ಡಿ.ಎಚ್.ಪೂಜಾರ, ರಮೇಶ ತುಪ್ಪದ, ಶರಣು ಗಡ್ಡಿ, ಶರಣು ಪಾಟೀಲ್, ಶರಣು ಶೆಟ್ಟರ್ ಇದ್ದರು. ಗಾಯಕ ಸದಾಶಿವ ಪಾಟೀಲ್, ಸಾವಿತ್ರಿ ಮುಜುಮದಾರ ವಿರಚಿತ ಕೊಪ್ಪಳ ಪರಿಸ್ಥಿತಿಯ ಕವಿತೆ ಹಾಡಿದರು. ಕೆ.ಬಿ.ಗೋನಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟಕ ಮಂಜುನಾಥ ಜಿ. ಗೊಂಡಬಾಳ ನಿರೂಪಿಸಿದರು.

ರಾಜ್ಯ– ಕೇಂದ್ರ ಸರಕಾರಗಳು ರೈತರ ಕೂಗು– ನೋವು ಅರ್ಥ ಮಾಡಿಕೊಳ್ಳಬೇಕು. ನಾನು ಬಾಧಿತ ಗ್ರಾಮಗಳಿಗೆ ಸ್ವತಃ 'ಟಿ ನೀಡಿದ್ದೇನೆ. ಅಲ್ಲಿನ ಜನರಿಗೆ ಯಾವೊಬ್ಬ ಜನಪ್ರತಿನಿಧಿಗಳು ನಮ್ಮ ನೋವು ಕೇಳುತ್ತಿಲ್ಲ ಎಂಬ ನೋವಿದೆ. ಕೊಪ್ಪಳ ನಗರದ ಎಲ್ಲ ಅಂಗಡಿ ಬಂದ್ ಇವೆ. ಇದನ್ನು ಸರಕಾರ ಮತ್ತು ಜನಪ್ರತಿನಿಧಿಗಳು ಅರ್ಥ ಮಾಡಿಕೊಳ್ಳಬೇಕು. ಮುಂದಿನ ಚುನಾವಣೆಯಲ್ಲಿ ಕೊಪ್ಪಳ ಜನರು ಕಾರ್ಖಾನೆ ಪರ ಇರುವ ಜನ ಪ್ರತಿನಿಧಿಗಳಿಗೆ ಬಹಿಷ್ಕಾರ ಹಾಕಬೇಕು. ನಮ್ಮದೇ ಪ್ರತಿನಿಧಿಗೆ ಮತ ನೀಡುವ ಮೂಲಕ ನಮ್ಮ ಹೋರಾಟ ಮುಂದುವರೆಸಬೇಕು. ತಾರ್ಕಿಕ ಅಂತ್ಯದ ವರೆಗೆ ಹೋರಾಟ ಮುಂದುವರೆಯಲಿದೆ.

– ಸಾಣೇಯಳ್ಳಿಯ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಕೈಗಾರಿಕೆಯಿಂದ ಬರುವ ಹಾರು ಬೂದಿ, ಬೆಳೆ ಮೇಲೆ ಬಿದ್ದು ಶೇ.30 ರಷ್ಟು ಇಳುವರಿ ಕಡಿಮೆ ಆಗುತ್ತಿದೆ. ಇಂಥ ಮೇವು ತಿನ್ನುವ ಜಾನುವಾರು ಮೃತಪಡುತ್ತಿವೆ. ಬಸಾಪೂರ ಕೆರೆ ಯನ್ನು ಸರಕಾರಗಳು ಬಂಡವಾಳಶಾಹಿಗಳಿಗೆ ಗುತ್ತಿಗೆ ನೀಡಿವೆ. ಕೆರೆ ಎಂದರೆ ನಮ್ಮ ತಾಯಿ. ನಮ್ಮ ತಾಯಿಯನ್ನು ಗುತ್ತಿಗೆ ನೀಡಲು ಸಾ'ದ್ಯವೆ? ಕೈಗಾರಿಕೆ ಸಚಿವರು, ಮುಖ್ಯಮಂತ್ರಿ ಇಲ್ಲಿನ ಜನರ ಸ್ಥಿತಿ ಬಂದು ನೋಡಬೇಕು. ಶಾಸಕ ರಾಘವೇಂದ್ರ ಹಿಟ್ನಾಳ ಇಷ್ಟೊಂದು ತಾಳ್ಮೆಯಿಂದ ಇರಬಾರದು. ಅನೇಕ ಜನಪ್ರತಿನಿಧಿಗಳು ಎಂಜಲು ಕಾಸಿಗೆ, ಜೇಬು ತುಂಬಿಸಿಕೊಳ್ಳಲು ಬಂಡವಾಳ ಹೂಡುವವರ ಮುಂದೆ ಕೈಕಟ್ಟಿ ಕುಳಿತಿದ್ದಾರೆ. ಜನ ಶಕ್ತಿ ಮುಂದೆ ಯಾವ ಶಕ್ತಿಯೂ ಉಳಿಯಲ್ಲ. ಜನ ದಂಗೆ ಎದ್ದೇಳುವ ಸಂದ'ರ್ ಬರುವಂತೆ ಆಗದಿರಲಿ.

– ಎ.ಟಿ.ರಾಮಸ್ವಾಮಿ, ಹೋರಾಟಗಾರ

ಸ್ವಾಮೀಜಿಗಳು ಮತ್ತು ಜನಪ್ರತಿನಿಧಿಗಳು ದುಡ್ಡು, ಕಾಣಿಕೆ ನೋಡಿ ಹಣವಂತರ ಜೊತೆಗೆ ನಿಲ್ಲಬಾರದು. ಜನ ಹಾಕುವ ಭಿಕ್ಷೆಯಲ್ಲಿ ಸ್ವಾಮೀಜಿಗಳು ಬದುಕುತ್ತಾರೆ. ಜನರು ಹಾಕುವ ಮತ ಭಿಕ್ಷೆಯಿಂದ ರಾಜಕಾರಣಿಗಳು ಬದುಕುತ್ತಿದ್ದಾರೆ. ಜನರ ಕಷ್ಟ ಅರ್ಥ ಮಾಡಿಕೊಳ್ಳದ ಜನ ಪ್ರತಿನಿಧಿಗಳು ಯಾರಿಗೆ ಬೇಕು? ಇಲ್ಲಿ ಶಾಸಕರು ಸು'ರಿಸಿಕೊಳ್ಳದಿದ್ದರೆ ಪರಿಣಾಮ ನೆಟ್ಟಗೆ ಇರುವುದಿಲ್ಲ. ನಮ್ಮ ಹೆಣದ ಮೇಲೆ ರಾಜಕಾರಣ ಮಾಡಲಿ. ಇವತ್ತು ಹಾಲಿ, ಮಾಜಿ ಶಾಸಕ– ಸಂಸದರು ವೇದಿಕೆಗೆ ಸುಮ್ಮನೇ ಬಂದಿಲ್ಲ. ರೈತರು, ಜನರ ಸಂಘಟನೆ ನೋಡಿ ಬಂದಿದ್ದಾರೆ. ರಾಜ್ಯ–ಕೇಂದ್ರ ಸರಕಾರಗಳು ಕೂಡಲೇ ಎಚ್ಚೆತ್ತುಕೊಳ್ಳಬೇಕು. ಇಲ್ಲವಾದರೆ ನಮ್ಮ ಕೆಲಸ ನಾವು ಮಾಡುತ್ತೇವೆ.

- ಸಿದ್ಧಬಸವ ಕಬೀರ ಮಹಾಸ್ವಾಮೀಜಿ, ಜೇವರಗಿ ಮಠ

ಹೋರಾಟ ಆರಂ'ವಾಗಿ 117 ದಿನ ಆಗಿದ್ದರೂ ರಾಜ್ಯದ ಯಾವೊಬ್ಬ ಜನಪ್ರತಿನಿಧಿ ನಿಮ್ಮ ನೋವು ಕೇಳಿಲ್ಲ. ಇದು ಇಡೀ ಪ್ರಜಾತಂತ್ರ ವ್ಯವಸ್ಥೆ ನಾಚಿಕೆ ಪಡುವ ವಿಷಯ. ಎಲ್ಲ ಸರಕಾರಗಳು ಕ್ರೂರಿಗಳಾಗಿದ್ದಾರೆ. ಎಲ್ಲ 224 ಶಾಸಕರು, ಲೋಕಸಭೆ ಸದಸ್ಯರಿಗೆ ಜನರ ಬಗ್ಗೆ ಕಾಳಜಿ ಇಲ್ಲ. ಸರಕಾರಗಳು ಪ್ರಜೆಗಳ ಪ್ರತಿನಿಧಿಗಳಾಗಿಲ್ಲ. ಬಂಡವಾಳಶಾಹಿಗಳ ಕೈಗೊಂಬೆ ಆಗಿದ್ದಾರೆ. ಜನರ ಹೆಣದ ಮೇಲೆ ಮಹಲ್ ಕಟ್ಟುತ್ತಾರೆ. ಎಲ್ಲ ಶಾಸಕರು ಹೃದಯ ಹೀನರಾಗಿದ್ದಾರೆ. ಜನರು ಒಂದಾದರೆ ಎಂಥವರನ್ನೂ ಬಗ್ಗಿಸಬಹುದು. ಪ್ರತಿಯೊಂದು ಹಳ್ಳಿಯಲ್ಲಿ ಹೋರಾಟ ರೂಪುಗೊಳ್ಳಬೇಕಿದೆ. ಉಸಿರಾಡಲು ಗಾಳಿ- ನೀರಿಗೆ ಹೋರಾಟ ಮಾಡುವಂತಾಗಿದೆ. ಇದನ್ನೇ ಕ್ರೂರ ಬಂಡವಾಳಶಾಹಿ ಎನ್ನಲಾಗುತ್ತದೆ.

- ವಿ.ಎನ್.ರಾಜಶೇಖರ, ಶಿಕ್ಷಣ ಉಳಿಸಿ ಸಮಿತಿ

ಕಾರ್ಖಾನೆ ವಿರೋಧಿ ಹೋರಾಟ ಜನಾಂದೋಲನ ಆಗಿ ರೂಪುಗೊಳ್ಳಬೇಕು. ಇಡೀ ರಾಜ್ಯದ ಜನರು ಕೊಪ್ಪಳ ಜನರಿಗೆ ಬೆಂಬಲ ನೀಡುವಂತೆ ಆಗಬೇಕು. ಆಗ ಹೋರಾಟ ಯಶಸ್ವಿಯಾಗಲಿದೆ. ನ್ಯಾಯಾ ಸಿಗುವವರೆಗೆ ಹೋರಾಟ ಮುಂದುವರೆಯಬೇಕು. ಬಂಡವಾಳ ಹೂಡುವವರಿಗೆ ಹೋರಾಟ ಬಗ್ಗು ಬಡಿಯುವ ಎಲ್ಲ ತಂತ್ರ ಗೊತ್ತಿರುತ್ತದೆ. ಯಾರಾದರೂ ಬಂದು ಏನಾದರೂ ಆಶ್ವಾಸನೆ ಕೊಟ್ಟರೆ ಮರುಳಾಗಬಾರದು. ಬಂಡವಾಳಶಾಹಿಗಳ ತಂತ್ರಗಾರಿಕೆಗೆ ಜನರು ಜಗ್ಗಬಾರದು.

-ಶ್ರೀ ಸಿದ್ದರಾಮ ತೋಂಟದಾರ್ಯ ಸ್ವಾಮಿಗಳು, ಗದಗ

ಕೊಪ್ಪಳ ಜಿಲ್ಲೆಯ ಎಲ್ಲ ಪಕ್ಷಗಳ ಮುಖಂಡರು ಸೇರಿ ಸಿಎಂ ಸಿದ್ದರಾಮಯ್ಯ ಅವರಿಗೆ ಭೇಟಿ ಮಾಡಿದ್ದೆವು. ಎಲ್ಲ ಪರಿಸರ ಹಾನಿಕಾರಕ ಕಾರ್ಖಾನೆ ಬಂದ್ ಮಾಡುವಂತೆ ಮನವಿ ಮಾಡಿದ್ದೆವು. ಸಿಎಂ ಕೂಡಲೇ ಎಲ್ಲ ಕೆಲಸ ಬಂದ್ ಅಮಾಡುವಂತೆ ಹೇಳಿದ್ದರು. ಕೊಪ್ಪಳದ ಪ್ರತಿಯೊಬ್ಬ ಜನರು ಪಕ್ಷಾತೀತವಾಗಿ ಹೋರಾಟದಲ್ಲಿ ಭಾಗಿ ಆಗಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿರುದ್ಧ ಹೋರಾಟ ಮುಂದುವರೆಸುತ್ತೇವೆ.

ಕೆ. ರಾಜಶೇಕರ ಹಿಟ್ನಾಳ, ಸಂಸದ

ಕೊಪ್ಪಳ ಸುತ್ತಮುತ್ತ ಕಳೆದ 1990ಕ್ಕಿಂತ ಮುಂಚೆ ಕಾರ್ಖಾನೆಗಳು ರೈತರಿಂದ ಭೂಮಿ ಖರೀದಿ ಮಾಡಿವೆ. ಆಗ ಯಾರಿಗೂ ಪರಿಸರ ಹಾನಿ ಆಗುತ್ತದೆ ಎಂಬ ಕಲ್ಪನೆ ಇರಲಿಲ್ಲ. ಸ್ಪಾಂಜ್ ಐರನ್ ಕಂಪನಿ ಬಂದ ನಂತರ ತೊಂದರೆ ಹೆಚ್ಚಾಗಿದೆ. ಈ ಎಲ್ಲ ಕಂಪನಿಗೆ ಸಾಕಷ್ಟು ಹಿಂದೆಯೇ ಗಣಿಗಾರಿಕೆ ಪರವಾನಗಿ ಸಿಕ್ಕಿದೆ. ನಾಲ್ಕು ಜನ ಕೂಗಾಡಿ ಭಾಷಣ ನಿಲ್ಲಿಸಿದರೆ ಹೋರಾಟ ಸಕ್ಸಸ್ ಆಯ್ತು ಅಂತಾ ಅಲ್ಲ. ದೇಶ ಸ್ವಾತಂತ್ರ್ಯ ಹೋರಾಟದಿಂದ ಸಿಗಲಿಲ್ಲ. ಅಹಿಂಸೆಯಿಂದ ಸ್ವಾತಂತ್ರ್ಯ ಪಡೆದಿದ್ದೇವೆ.

– ಕೆ. ರಾಘವೇಂದ್ರ ಹಿಟ್ನಾಳ, ಶಾಸಕ

## ಬಾಗಲಕೋಟೆ ಉಪಚುನಾವಣೆಗೆ ಶಿವಸೇನಾ ಸ್ಪರ್ಧೆ



ಮಲ್ಲಮ್ಮನುಡಿವಾರ್ತೆಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪಚುನಾವಣೆಯಲ್ಲಿ ಶಿವಸೇನಾ ಸ್ಪರ್ಧಿಸುವುದು ಖಚಿತ ಎಂದು ಶಿವಸೇನಾ ರಾಜ್ಯಾಧ್ಯಕ್ಷ ಸಿದ್ದಲಿಂಗ ಸ್ವಾಮೀಜಿ ಹೇಳಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬರುವ ಉಪಚುನಾವಣೆಯಲ್ಲಿ ಬಾಗಲಕೋಟೆ ಹಾಗೂ ದಾವಣಗೆರೆಯಲ್ಲಿ ನಮ್ಮ ಅಭ್ಯರ್ಥಿಗಳು ಕಣಕ್ಕೆ ಇಳಿಯಲಿದ್ದಾರೆ. ಜಿಲ್ಲಾ ಪಂಚಾಯತ, ತಾಲೂಕಾ ಪಂಚಾಯತ, ಗ್ರಾಮ ಪಂಚಾಯತ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪಕ್ಷದಿಂದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲು ನಿರ್ಧರಿಸಲಾಗಿದೆ ಎಂದರು.

ಹಿಂದುತ್ವ ಮತ್ತು ಅಭಿವೃದ್ಧಿ ನಮ್ಮ ಪಕ್ಷದ ಅಜೆಂಡ ಆಗಿದ್ದು, ಹಿಂದುತ್ವಕ್ಕಾಗಿ ಜೈಲಿಗೆ ಹೋದ ಹಿಂದೂ ಕಾರ್ಯಕರ್ತರಿಗೆ, ಯುವಕರು, ಮಹಿಳೆಯರು, ರೈತರು ಹಾಗೂ ಕಾರ್ಮಿಕರಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದ ಸಿದ್ದಲಿಂಗ ಸ್ವಾಮೀಜಿ, ಜಾತಿ ಹಾಗೂ ಹಣದ ರಾಜಕಾರಣ ಮಾಡುವವರಿಗೆ ಅವಕಾಶವಿಲ್ಲ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟುಹೋಗಿದ್ದು, ಕಾಂಗ್ರೆಸ್ ಸರ್ಕಾರದ ಬಗ್ಗೆ ಜನರು ರೋಷಿ ಹೋಗಿದ್ದಾರೆ. ರಾಜ್ಯದ ಜನತೆ ಬದಲಾವಣೆಯನ್ನು ಬಯಸುತ್ತಿದ್ದಾರೆ ಎಂದು ಹೇಳಿದರು.

ಕಾಂಗ್ರೆಸ್ ಸರಕಾರ ದಲಿತರ ಹಣವನ್ನು ನುಂಗಿದ ಭ್ರಷ್ಟ ಸರ್ಕಾರ ಎಂದು ಟೀಕಿಸಿದ ಅವರು, ಮುಸ್ಲಿಂರ ಓಲೈಕೆ ಮಾಡುತ್ತಿದ್ದು ಇಂತಹ ಕೆಟ್ಟ ಸರ್ಕಾರವನ್ನು ಕಿತ್ತೊಗೆಯುವುದು ಹಿಂದೂ ಕಾರ್ಯಕರ್ತರ ಉದ್ದೇಶವಾಗಿದೆ ಎಂದರು. ಬಾಗಲಕೋಟೆಯಲ್ಲಿ ಈಚೆಗೆ ನಡೆದ ಶಿವಾಜಿ ಜಯಂತಿ ಮೆರವಣಿಗೆಯ ಮೇಲೆ ಕಲ್ಲು ಎಸೆದ ಘಟನೆಯನ್ನು ತೀವ್ರವಾಗಿ ಖಂಡಿಸಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ. ಪರಮೇಶ್ವರ ಒಬ್ಬ ಅಸಮರ್ಥ ಗೃಹಸಚಿವ ಎಂದು ಟೀಕಿಸಿ ರಾಜ್ಯ ಸರ್ಕಾರದ ವೈಫಲ್ಯಗಳ ವಿರುದ್ಧ ರಾಜ್ಯಪಾಲರಿಗೆ ದೂರನ್ನು ಸಲ್ಲಿಸಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ ಕುಲಕರ್ಣಿ, ಉಪಾಧ್ಯಕ್ಷ ಆನಂದ ಶೆಟ್ಟಿ, ಸಂಘಟನಾ ಕಾರ್ಯದರ್ಶಿ ಮಹಾಲಿಂಗಣ್ಣ ಗುಂಜಿಗಾವಿ, ಅಮರನಾಥ ಬೆಂಗಳೂರು, ಎಂ.ಎಸ್.ಹರೀಶ, ಜಿಲ್ಲಾಧ್ಯಕ್ಷ ನಾಗರಾಜ್ ಭಜಂತ್ರಿ ಉಪಸ್ಥಿತರಿದ್ದರು.

## ಜಾನಪದ ಸಾಮಾಜಿಕ ವ್ಯವಸ್ಥೆಯ ಮೂಲ: ಸಿದ್ದಪ್ಪ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,25–ಜಾನಪದ ಸಾಂಸ್ಕೃತಿಕ, ಸಾಮಾಜಿಕ ವ್ಯವಸ್ಥೆಯ ಮೂಲ. ಜಾನಪದ ಮತ್ತು ಜನರ ಬದುಕಿಗೆ ಅವಿನಾಭಾವ ಸಂಬಂಧವಿದೆ. ಆದರೆ ಆಧುನಿಕ ಕಾಲಘಟ್ಟದಲ್ಲಿ ಜಾನಪದ ಸಂಸ್ಕೃತಿ ಕಣ್ಮರೆಯಾಗುತ್ತಿರುವುದು ನೋವಿನ ಸಂಗತಿ ಎಂದು ಜಾನಪದ ಆಶುಕವಿ ಸಿದ್ದಪ್ಪ ಬಿದರಿ ಹೇಳಿದರು.



ಜಿಲ್ಲೆಯ ಬೀಳಗಿ ತಾಲೂಕಿನ ಅರಕೇರಿ ಗ್ರಾಮದ ಬೊಮ್ಮಲಿಂಗೇಶ್ವರ ಆಶ್ರಮದಲ್ಲಿ ಕನ್ನಡ ಜಾನಪದ ಪರಿಷತ್ ತಾಲೂಕು ಘಟಕ ಬೀಳಗಿ ಹಾಗೂ ತಾಲೂಕು ಮಹಿಳಾ ಘಟಕ ಮತ್ತು ವಲಯ ಘಟಕ ಕುಂದರಗಿ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಶಿವರಾತ್ರಿ ಜಾನಪದ ವೈಭವ–2026 ಹಾಗೂ ಕೃತಿ ಬಿಡುಗಡೆ ಸಮಾರಂಭವನ್ನು ದಮ್ಮಡಿ ನುಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ, ಸಾಹಿತಿ ಮೇಲಪ್ಪ ಕೆಂಪಲಿಂಗಣ್ಣವರ ರಚಿತ 'ಅಣ್ಣನ ಗುಣ ತಂಗಿಯ ಋಣ' ನಾಟಕ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿ, ಆಧುನಿಕತೆಯ ಭರಾಟೆ ಮತ್ತು ಸ್ಮಾರ್ಟ್‌ಪೋನ್ ಹಾವಳಿಯಿಂದ ಹವ್ಯಾಸಿ ನಾಟಕ ಪ್ರದರ್ಶನಗಳು ಕಡಿಮೆಯಾಗಿದ್ದು, ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕೆಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ತಾಲೂಕಾಧ್ಯಕ್ಷ ಬಸವರಾಜ ನಾಯ್ಕ ಮಾತನಾಡಿ, ಜಾನಪದಕ್ಕೆ ಈ ಹಿಂದೆ ರಾಜಾಶ್ರಯವಿತ್ತು. ಕಲಾ ಪೋಷಕರನ್ನು ಪ್ರೋತ್ಸಾಹಿಸುತ್ತಿದ್ದರು. ನಮ್ಮ ಸಂಘಟನೆ ಜಾನಪದ ಕಲೆ, ಸಾಹಿತ್ಯ, ಸಂಸ್ಕೃತಿ ತಿಳಿಸುವ ಕಾರ್ಯ ಮಾಡುವುದರ ಜೊತೆಗೆ ಕಲಾವಿದರಿಗೆ ಸೂಕ್ತ ವೇದಿಕೆ ಕಲ್ಪಿಸುವ ಮೂಲಕ ಜಾನಪದ ಕಲೆ, ಕಲಾವಿದರನ್ನು ಉಳಿಸಿ ಬೆಳೆಸುವ ಕಾರ್ಯ ಮಾಡುತ್ತಿದೆ ಎಂದು ಹೇಳಿದರು.

ಶಿವರಾತ್ರಿ ಜಾನಪದ ವೈಭವದಲ್ಲಿ ವಿವಿಧ ಗ್ರಾಮಗಳಿಂದ ಆಗಮಿಸಿದ 37 ವಿವಿಧ ಜಾನಪದ ಕಲಾತಂಡಗಳು ಕಲಾ ಪ್ರದರ್ಶನ ಮಾಡುವ ಮೂಲಕ ನೆರೆದ ಜನರನ್ನು ರಂಜಿಸಿದರು.

ಬೊಮ್ಮಲಿಂಗೇಶ್ವರ ಆಶ್ರಮದ ಬ್ರಹ್ಮಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕನ್ನಡ ಜಾನಪದ ಪರಿಷತ್ ಮಹಿಳಾ ಘಟಕದ ಅಧ್ಯಕ್ಷೆ ಎಚ್.ಬಿ.ಮಾಳಗೊಂಡ, ಸಂಘಟನಾ ಕಾರ್ಯದರ್ಶಿ ರೇಣುಕಾ ಸುಣದಾಳ,

ಕುಂದರಗಿ ವಲಯ ಘಟಕದ ಅಧ್ಯಕ್ಷ ಪಾಂಡು ಕನಸಗೇರಿ, ಲೇಖಕ ಮೇಲಪ್ಪ ಕೆಂಪಲಿಂಗಣ್ಣವರ, ಡಿ.ಎಸ್.ಪಾಟೀಲ, ಎಚ್.ಬಿ.ಗುರಣ್ಣವರ, ಆರ್.ವಿ.ಪಾಟೀಲ, ಮಲ್ಲಪ್ಪ ಮಾಚಪ್ಪನವರ, ತಿಮ್ಮನಗೌಡ ಪಾಟೀಲ, ಸದಾಶಿವ ಆಗೋಜಿ, ರಮೇಶ ಸಾವಕಾರ ಇದ್ದರು. ಮುತ್ತಣ್ಣ ಅಂಟೀನ ನಿರೂಪಿಸಿದರು. ಬಸವರಾಜ ಮಾಳಗೊಂಡ ವಂದಿಸಿದರು.

## ಈರುಳ್ಳಿ ಬೆಳೆಗೆ ವೈಜ್ಞಾನಿಕ ಸ್ಪರ್ಶ ಅವಶ್ಯ: ವಿಷ್ಣುವರ್ಧನ್




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ:

ಜಿಲ್ಲೆಯ ಪ್ರಮುಖ ಬೆಳೆಗಳಲ್ಲೊಂದಾದ ಈರುಳ್ಳಿ ಬೆಳೆಗೆ ವೈಜ್ಞಾನಿಕ ಹಾಗೂ ತಾಂತ್ರಿಕತೆ ಅಳವಡಿಸಿಕೊಂಡಾಗ ಮಾತ್ರ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ ಎಂದು ತೋಟಗಾರಿಕಾ ವಿಶ್ವವಿದ್ಯಾನಿಲಯದ ಕುಲಪತಿ ಡಾ. ವಿಷ್ಣುವರ್ಧನ ಹೇಳಿದರು.

ಮಂಗಳವಾರ ತೋಟಗಾರಿಕಾ ವಿಜ್ಞಾನಿಗಳ ವಿಶ್ವವಿದ್ಯಾಲಯದಲ್ಲಿ ಜರುಗಿದ ಈರುಳ್ಳಿ ಬೆಳೆ ಕ್ಷೇತ್ರೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಬೆಳೆಯಲಾಗುತ್ತಿರುವ ಬೆಳೆಗಳಲ್ಲಿ ಈರುಳ್ಳಿ ಕೂಡ ಪ್ರಮುಖವಾಗಿದ್ದು ಈರುಳ್ಳಿ ಬೀಜ ತಳಿಗಳನ್ನು ಬದಲಾಯಿಸಿ ಕೃಷಿ ಮಾಡಿದಲ್ಲಿ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯವಾಗುತ್ತದೆ ಎಂದರು. ರೈತರಿಗೆ ಸಂಶೋಧನೆಗೊಳಗಾದ ಬೀಜ ದೊರಕದೇ ಇರುವುದರಿಂದ ಇಳುವರಿಯಲ್ಲಿ ಕುಂಠಿತವಾಗುವುದು. ಇದನ್ನು ತಡೆಗಟ್ಟಲು ಉತ್ತಮ ಗುಣಮಟ್ಟದ ಹಾಗೂ ಉತ್ತಮ ತಳಿಯ ಬೀಜಗಳನ್ನೇ ಬಳಸಿಕೊಳ್ಳಬೇಕು. ಹೊಲದಲ್ಲಿ ಸಾಕಷ್ಟು ಪೋಷಕಾಂಶಗಳನ್ನು ಹಾಕಿ ಸರಿಯಾಗಿ ನಿರ್ವಹಣೆ ಮಾಡಿದರೂ ಸಹ ನಿರೀಕ್ಷೆ ಮಾಡಿದಷ್ಟು ಬೆಳೆ ಬರಲು ಸಾಧ್ಯವಾಗದಿರುವುದಕ್ಕೆ ಕಳಪೆ ಬೀಜಗಳೆ ಕಾರಣ ಮತ್ತು ಅಂತ ಬೀಜಗಳಿಂದ ಹಲವಾರು ರೋಗಗಳನ್ನು ಕೂಡ ನಾವು ಕಾಣಬಹುದಾಗಿದೆ ಎಂದರು.

ಜಿಲ್ಲೆಯಲ್ಲಿ ಅನೇಕ ರೈತರು ಉತ್ತಮ ಗುಣಮಟ್ಟದ ಬೀಜ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸಿದ್ದು, ಆ ಎಲ್ಲಾ ರೈತರಿಗೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದರ ಬಗ್ಗೆ ಮಾಹಿತಿ ಕೊಟ್ಟು ಬೀಜೋತ್ಪಾದನೆ ಮಾಡುವ ರೈತರಿಗೆ ಇನ್ನೂ ಹೆಚ್ಚಿನ ಗುಣಮಟ್ಟದ ಬೀಜ ತಯಾರಿಸಲು ಸಲಹೆ ಸೂಚನೆ ನೀಡಲು ತೋಟಗಾರಿಕಾ ವಿಶ್ವವಿದ್ಯಾನಿಲಯ ಸದಾ ಸಿದ್ಧವಿದೆ ಎಂದು ಡಾ.ವಿಷ್ಣುವರ್ಧನ ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ಕೇವಲ ರಾಸಾಯನಿಕ ಗೊಬ್ಬರಗಳನ್ನೇ ಬಳಸಿಕೊಳ್ಳುತ್ತಿರುವುದರಿಂದ ಇಳುವರಿ ಕುಂಠಿತಗೊಳ್ಳುತ್ತದೆ ಮತ್ತು ಭೂಮಿಯೂ ಹಾಳಾಗುತ್ತದೆ. ಕಾರಣ ರೈತರು ರಾಸಾಯನಿಕ ಗೊಬ್ಬರಗಳ ಕಡೆ ಹೆಚ್ಚು ಗಮನ ನೀಡದೆ ಸಾವಯುವ ಕೃಷಿಯತ್ತ ಮುಖ ಮಾಡಬೇಕು ಎಂದು ಅವರು ತಿಳಿಸಿದರು.

ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾತಿ ಮಾತನಾಡಿ, ಕಳೆದ ಮೂರು ವರ್ಷಗಳಿಂದ ಕಳಪೆ ಬೀಜ, ಹವಾಮಾನ ಏರಿಳಿತ ಅಥವಾ ದರದಲ್ಲಾಗಲಿ ರೈತರು ಒಂದಿಲ್ಲ ಒಂದು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಯಾವುದೇ ಬೆಳೆ ಬೆಳೆಯಲು ಬೀಜ ಗುಣಮಟ್ಟದ್ದು ಆಗಿರಬೇಕು, ಉತ್ತಮವಾಗಿರಬೇಕು ಮತ್ತು ಸೂಕ್ತ ಸಮಯದಲ್ಲಿ ಅವಶ್ಯ ಇರುವಷ್ಟು ಪೋಷಕಾಂಶಗಳನ್ನು ಕೊಡಬೇಕು ಎಂದರು.

ತೋಟಗಾರಿಕಾ ವಿಶ್ವವಿದ್ಯಾನಿಲಯ ಭೀಮ ಬ್ರಾಂಡಿನ ಬೀಜವನ್ನು ತಯಾರಿಸುತ್ತಿದ್ದು ಮುಂಬರುವ ದಿನಗಳಲ್ಲಿ ಆ ಬೀಜ ತಯಾರಿ–ಕೆ ನಿರ್ವಹಣೆಯನ್ನು ರೈತರ ಜಮೀನಿನಲ್ಲಿ ಹಾಗೂ ಎಲ್ಲಾ ರೈತರಿಗೂ ಎಟುಕುವ ನಿಟ್ಟಿನಲ್ಲಿ ಬೀಜಗಳನ್ನು ತಯಾರಿಸಿ ತೋಟಗಾರಿಕೆ ವಿವಿಯಿಂದ ವಿತರಿಸಬೇಕು ಎಂದರು. ಕ್ಷೇತ್ರೋತ್ಸವದಲ್ಲಿ ವಿಜಾಪುರ ಜಿಲ್ಲೆಯ ಇಂಡಿ, ಬಾಗಲಕೋಟ ಜಿಲ್ಲೆಯ ಬೆನ್ನೂರು, ಬೆನಕಟ್ಟಿ, ಹೊಸಕೋಟಿ, ಗಂದಗಲ್ಲ, ಎಳ್ಳಿಗುತ್ತಿ, ಭಗವತಿ, ಬಾವಲತ್ತಿ, ಕಲಾದಗಿ, ಉದಗಟ್ಟಿ ಸೇರಿದಂತೆ ವಿವಿಧ ಗ್ರಾಮಗಳ ರೈತರು ಭಾಗವಹಿಸಿದ್ದರು.

ತೋಟಗಾರಿಕೆ ವಿವಿ ವಿಸ್ತರಣಾ ನಿರ್ದೇಶಕ ಡಾ.ವೆಂಕಟೇಶಲು, ಸಂಶೋಧನಾ ನಿರ್ದೇಶಕ ಡಾ.ಫಕ್ರುದ್ದೀನ್, ತೋಟಗಾರಿಕಾ ಮಹಾವಿದ್ಯಾಲಯದ ಡಾ.ಶಾಂತಪ್ಪ ತಿರಕಣ್ಣವರ, ವಿಶೇಷ ಅಧಿಕಾರಿ ಡಾ.ರವೀಂದ್ರ ಜಾವಡಗಿ, ಸಹ ಪ್ರಾಧ್ಯಾಪಕರಾದ ಪಲ್ಲವಿ ಎಚ್ ಎಂ., ಸಹಾಯಕ ಪ್ರಾಧ್ಯಾಪಕ ಹಾದಿಮನಿ, ವಾಸಿಂ ಎಂ.ಎಂ, ಡಾ.ರಮೇಶ್ ಸೇರಿದಂತೆ ಇತರರು ಇದ್ದರು

## ಮಹಾತ್ಮರ ಜಯಂತಿ ಆಚರಣೆ ಹಿನ್ನಲೆ ಪೂರ್ವಭಾವಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್



ಗುರುಮಠಕಲ್: ಮಾರ್ಚ್ ತಿಂಗಳಲ್ಲಿ ಆಚರಿಸಲಾಗುವ ವಿವಿಧ ಮಹಾತ್ಮರ ಜಯಂತಿ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಬುಧವಾರ ತಹಸೀಲ್ದಾರ್ ಕಾರ್ಯಾಲಯದಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಸಭೆಯಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ, ಯೋಗಿ ನಾರಾಯಣ ಯತೀಂದ್ರ ಜಯಂತಿ, ದೇವರ ದಾಸಿಮಯ್ಯ ಜಯಂತಿ, ಅಗ್ನಿ ಬನ್ನಿರಾಯ ಜಯಂತಿ ಹಾಗೂ ಭಗವಾನ್ ಮಹಾವೀರ ಜಯಂತಿ ಆಚರಣೆ ಕುರಿತು ಚರ್ಚೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಗ್ರೇಡ್ 2 ತಹಸೀಲ್ದಾರ್ ನರಸಿಂಹ ಸ್ವಾಮಿ ಮಹಾಪುರುಷರ ಜಯಂತಿಗಳನ್ನು ಸರ್ಕಾರದ ಆದೇಶದಂತೆ ಎಲ್ಲಾ ಸರಕಾರಿ ಹಾಗೂ ಖಾಸಗಿ ಕಚೇರಿಗಳಲ್ಲಿ ಕಡ್ಡಾಯವಾಗಿ ಆಚರಿಸಲು ಎಂದು ಸೂಚಿಸಲಾಗುತ್ತದೆ, ನಿಯಮ ಉಲ್ಲಂಘನೆ ಮಾಡಿದಲ್ಲಿ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಜಯಂತಿಗಳ ಕುರಿತಾದ ಮಾಹಿತಿ ನೀಡಿ, ಶೋಭಾಯಾತ್ರೆ ಕೈಗೊಳ್ಳುವದಾದರೆ ಅನುಮತಿ ಪಡೆದು ಸೂಚಿಸಿದ ನಿಯಮಗಳ ಪ್ರಕಾರ ಆಚರಣೆ ಮಾಡಲು ಆಯಾ ಸಮುದಾಯದ ಮುಖಂಡರಿಗೆ ಸಲಹೆ ನೀಡಿದರು.

ಸಭೆಯಲ್ಲಿ ಮುಖ್ಯಾಧಿಕಾರಿ ಶರಣಪ್ಪ ಎಮ್, ತಾಲೂಕು ಪಂಚಾಯತ್ ಯೋಜನಾಧೀಕಾರಿ ಭಾರತೀ ಸಜ್ಜನ್, ಶಿಕ್ಷಣ ಇಲಾಖೆ ರವೀಂದ್ರ ಚೌಹಾಣ್, ಉಪ್ ವಲಯ ಅರಣ್ಯಾಧಿಕಾರಿ ಸಂಗಮೇಶ್ ಪಾಟೀಲ್, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವಾನಂದ ಬೂದಿ, ಉಪಾಧ್ಯಕ್ಷ ರವಿಕುಮಾರ್ ವಾರದ, ಆನಂದ್ ಶೇಖರ್ ಹಿರೇಮಠ್, ಮಲ್ಲಿಕಾರ್ಜುನ ಹಿರೇಮಠ, ಅಶೋಕ್ ಮುತ್ತಗಿ, ವಿವಿಧ ಸಮಾಜಗಳ ಮುಖಂಡರು ಹಾಗೂ ಸಂಘಟನೆಗಳ ಪ್ರತಿನಿಧಿಗಳು, ತಹಸೀಲ್ ಪುರಸಭೆ ಕಾರ್ಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

## ಚುನಾವಣೆಗೆ ಹಿಂದುತ್ವದ ಬಣ್ಣ: ಸಿದ್ಧಲಿಂಗಸ್ವಾಮಿ ಟೀಕೆ

ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಮಾಜಿ ಶಾಸಕ ವೀರಣ್ಣ ಚರಂತಿಮಠ ಚುನಾವಣೆ ದೃಷ್ಟಿಯಿಟ್ಟುಕೊಂಡು ಹಿಂದುತ್ವದ ಬಣ್ಣ ಹಚ್ಚಿಕೊಂಡು ಕೆಲಸ ಮಾಡುತ್ತಿದ್ದಾರೆ ಎಂದು ಶಿವಸೇನಾ ರಾಜ್ಯಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಟೀಕಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಗಲಕೋಟೆ ನಗರದಲ್ಲಿ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಘಟನೆ ಬಳಿಕ ಮಾಜಿ ಶಾಸಕ ವೀರಣ್ಣ ಚರಂತಿಮಠ ಸ್ಥಳಕ್ಕೆ ಭೇಟಿ ನೀಡಿ ರಸ್ತೆ ಬಂದ್ ಮಾಡಿರುವ ಬಗ್ಗೆ ಪೊಲೀಸರೊಂದಿಗೆ ವಾದ ಮಾಡಿ ತಮ್ಮ ರಾಜಕೀಯ ಬೆಳೆಯನ್ನು ಬೇಯಿಸಿಕೊಂಡಿದ್ದಾರೆ. ತಾವು ಶಾಸಕರಿದ್ದಾಗ ಯಾವ ಹಿಂದೂ ಕಾರ್ಯಕರ್ತರನ್ನು ಇವರು ಕಾಪಾಡಿದ್ದಾರೆ ಎಂದು ಪ್ರಶ್ನಿಸಿದರು.

ಈಗ ಮತ್ತೆ ಅಧಿಕಾರ ಗಿಟ್ಟಿಸಿಕೊಳ್ಳಲು ಹಿಂದುತ್ವದ ಬಣ್ಣ ಹಚ್ಚಿಕೊಂಡು ಮಾತನಾಡುತ್ತಿದ್ದಾರೆ. ಬಿಜೆಪಿ ಅಧಿಕಾರದ ಅವಧಿಯಲ್ಲಿ ಇವರೇ ನಮ್ಮ ದೇಶದ ಮುಸ್ಲಿಂರು ಶಾಂತಿಪ್ರೀಯರು ಎಂದು ಭಾಷಣ ಮಾಡಿದ್ದಾರೆ ನೋಡಿ ಎಂದು ವಿಡಿಯೋ ತುಣಕು ಪ್ರದರ್ಶಿಸಿದರು.

ಇಂತಹ ಇಬ್ಬಗೆ ನೀತಿಯನ್ನು ಅನುಸರಿಸುತ್ತಿರುವವರಿಗೆ ಹಿಂದು ಕಾರ್ಯಕರ್ತರೇ ತಕ್ಕ ಪಾಠವನ್ನು ಕಲಿಸುತ್ತಾರೆ. ಬಾಗಲಕೋಟೆ ನಗರದ ಛತ್ರಪತಿ ಶಿವಾಜಿ ಮಹಾರಾಜರ ಹಾಗೂ ವಿಶ್ವಗುರು ಬಸವಣ್ಣವರ ಮೂರ್ತಿ ಸ್ಥಾಪನೆ ಮಾಡಲು ತಮ್ಮ ಅವಧಿಯಲ್ಲಿ ಆಗಲಿಲ್ಲ. ಈಗ ನಾಟಕೀಯ ಹೋರಾಟ ಮಾಡುತ್ತಿದ್ದಾರೆ. ತಮ್ಮ ಅಧಿಕಾರದ ಅವಧಿಯಲ್ಲಿ ಈ ಕೆಲಸ ಏಕೆ ಮಾಡಿಲಿಲ್ಲ ಎಂದು ಪ್ರಶ್ನಿಸಿದ ಸ್ವಾಮೀಜಿ, ಬಾಗಲಕೋಟೆ ಜಿಲ್ಲೆಯಲ್ಲಿ ಇಂತಹ ಅಸಮರ್ಥ ಬಿಜೆಪಿ ನಾಯಕರು ಇದ್ದಾರೆಂದು ದೂರಿದರು.

# ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರು ಚಲೊ




**ಸಿಂಧನೂರು:** ಅಂಗನವಾಡಿ ಕಾರ್ಯಕರ್ತೆಯರು ಕಳೆದ ನಾಲ್ಕು ದಶಕಗಳಿಂದ ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಮಾಡುತ್ತಾ ಬಂದಿದ್ದಾರೆ. ಆದರೆ ಸರ್ಕಾರ ಇಲ್ಲಿವರೆಗೂ ವೇತನ.ಭದ್ರತೆ ಪೆನ್ಷನ್ ಹಾಗೂ ಗ್ರಾಜುವೇಟ್ ಸೇರಿದಂತೆ ಇತರ ಸೌಲಭ್ಯಗಳನ್ನು ನೀಡದಿರುವುದು ಅಂಗನವಾಡಿ ಕೇಂದ್ರಗಳಗೆ ಸರ್ಕಾರ ಅನ್ಯಾಯ ಮಾಡುತ್ತಾ ಬಂದಿದೆ ಎಂದು ಅಂಗನವಾಡಿ ಕಾರ್ಯಕರ್ತೆಯರ ಸಂಘದ ತಾಲೂಕು ಅಧ್ಯಕ್ಷರಾದ ಗಿರಿಜಮ್ಮ ಧಡಿಸೂಗರ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಅಂಗನವಾಡಿ ಕೇಂದ್ರದ ಅಗತ್ಯ ವಸ್ತುಗಳ ಬೆಲೆ ಏರಿಕೆ ಗಗನಕ್ಕೆ ತಲುಪಿದ್ದು. ಈ ಹಿನ್ನೆಲೆಯಲ್ಲಿ ತಾವೇ ಬೆಳಗಾವಿ ಅಧಿವೇಶನದಲ್ಲಿ ಆರ್ ನೇ ಗ್ಯಾರಂಟಿ ಮೂಲಕ ಅಂಗನವಾಡಿ ಕಾರ್ಯಕರ್ತೆಯರಿಗೆ ಇತತರ ಸೌಲಭ್ಯ ಜೊತೆಗೆ ವೇತನ ಹೆಚ್ಚಳ ಮಾಡುತ್ತೇವೆ ಎಂದು ಸಚಿವ ಪ್ರಿಯಾಂಕಾ ಖರ್ಗೆ ಅವರು ಏನು ಭರವಸೆ ನೀಡಿದ್ದರು. ಮಾತಿನಂತೆ ಸರ್ಕಾರ ಸೌಲಭ್ಯಗಳನ್ನು ಅಂಗನವಾಡಿ ಕಾರ್ಯಕತೆ-ರ್ಯಯರಿಗೆ ನೀಡಬೇಕು ಎಂದು ಆಗ್ರಹಿಸಿದರು. ನಂತರ ಮಾತನಾಡಿದ ಸಂಗಯ್ಯ ಸ್ವಾಮಿ ಚಿಂಚರಕಿ ಅವರು ಮಾರ್ಚ್ 2-3 ರಂದು ಬೆಂಗಳೂರು ಫ್ರೀಡಮ್ ಪಾರ್ಕಿನಲ್ಲಿ ರಾಯಚೂರು ಜಿಲ್ಲೆಯಿಂದ ಸುಮಾರು ಅಂಗನವಾಡಿ ಕಾರ್ಯಕರ್ತೆಯರ ಕೇಂದ್ರಗಳನ್ನು ಬಂದ್ ಮಾಡಿ. ನಮಗೆ ಅನ್ಯಾಯದ ಆಗುತ್ತಿರುವುದು ವಿರುದ್ಧಹೋರಾಟಕ್ಕೆ ಮುಷ್ಕರದಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ. ಡಿ. ಎಚ ಕಂಬಳಿ ತಿಪ್ಪೆಯ್ಯ ಸ್ವಾಮಿ ಚಂದ್ರಶೇಖರ ಜಿಲ್ಲಾ ಕಾರ್ಯದರ್ಶಿ. ರತ್ನಮ್ಮ ತುರುವಿಹಾಳ ಭಾಗ್ಯಲಕ್ಷ್ಮಿ. ಯಮನಮ್ಮ. ಮತ್ತುಮ್ಮ. ಲಿಂಗರಾಜ ಕೊಪ್ಪಳ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

# ಅಕ್ರಮ ಮರಳು ಸಾಗಣೆ: ಕಡಿವಾಣ ಹಾಕಲು ನಮ್ಮ ಕರ್ನಾಟಕ ಸೇನೆ ಮನವಿ

**ಯಾದಗಿರಿ:** ಜಿಲ್ಲೆಯ ವಡಗೇರಾ ತಾಲೂಕಿನಲ್ಲಿ ಅಕ್ರಮ ಮರಳುಗಾರಿಕೆ



ಎಗ್ಗಿಲ್ಲದೇ ನಡೆಯುತ್ತಿದ್ದು ಕೂಡಲೇ ಅಕ್ರಮದಂದೆ ಕೋರರ ಮೇಲೆ ಕಾನೂನ ಕ್ರಮ ಜರುಗಿಸುವಂತೆ ನಮ್ಮ ಕರ್ನಾಟಕ ಸೇನೆ ಜಿಲ್ಲಾ ಘಟಕ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಆಗ್ರಹಿಸಿದೆ.

ಈ ಕುರಿತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದ ನಕಸೇ ಜಿಲ್ಲಾಧ್ಯಕ್ಷ ವಿಶ್ವಾರಾಧ್ಯ ದಿಮ್ಮೆ, ವಡಗೇರಾ ತಾಲೂಕಿನ ಗಡ್ಡೆಸೂಗುರು, ಬೆಂಡಗೊಂಬಳಿ ಮತ್ತು ಹಯ್ಯಾಳ ಗ್ರಾಮಗಳಲ್ಲಿ ನಿರಂತರವಾಗಿ ಭೀಮಾ ನದಿ ಹಾಗೂ ಕೃಷ್ಣ ನದಿಯಿಂದ ಅಲ್ಲಿನ ಗ್ರಾಮಸ್ಥರು ಹಾಗೂ ಕೆಲವು ರಾಜಕಾರಣಿಗಳು ಎಗಿಲ್ಲದೆ ಮರಳು ಲೂಟಿ ಮಾಡುತ್ತಿದ್ದು ನಮ್ಮ ನಾಡಿನ ಪ್ರಾಕೃತಿಕ ಸಂಪತ್ತನ್ನು ನಾಶ ಮಾಡುವುದಲ್ಲದೆ 50-60 ಟನ್‌ಗಳ ಭಾರವಾದ ಟಿಪ್ಪರ್‌ಗಳ ಸಂಚಾರದಿಂದ ಗ್ರಾಮೀಣ ಭಾಗದ ರಸ್ತೆಗಳು ಚಿಕ್ಕ ಚಿಕ್ಕ ಹಳ್ಳದ ಸೇತುವೆಗಳು ಸಂಪೂರ್ಣವಾಗಿ ಹಾಳಾಗಿದ್ದು ಜನರ ಸಂಚಾರಕ್ಕೆ ತೊಂದರೆಯುಂಟಾಗಿದೆ.

ಈ ಗ್ರಾಮಗಳಲ್ಲಿ ಸುಮಾರು ಟ್ರಾಕ್ಟರುಗಳಿಂದ ನದಿಗಳ ದಡದಲ್ಲಿ ಅಕ್ರಮವಾಗಿ ಮರಳು ಶೇಕರಣೆ ಮಾಡಿ ಒಂದು ದಿನಕ್ಕೆ ರಾತ್ರಿಹೊತ್ತು 15 ರಿಂದ 20 ಅತೀ ಭಾರದ (50-60 ಟನ್) ಟಿಪ್ಪರ್‌ಗಳು ಯಾದಗಿರಿ ನಗರದ ಮುಖಾಂತರ ಕಲಬುರಗಿ ಜಿಲ್ಲೆಗೆ ಸಾಗಾಟ ಎಗ್ಗಿಲ್ಲದೆ ನಡೆಯುತ್ತಿದೆ. ಅಕ್ರಮ ಸಾಗಣೆ ನಡೆಯುತ್ತಿದೆ ಎನ್ನಲು ನಗರದ ಸಂಚಾರಿ ಪೋಲಿಸ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮರಾಗಳೆ ಸಾಕ್ಷಿಯಾಗಿರುತ್ತವೆ ಎಂದು ಅವರು ವಿವರಿಸಿದರು.

ಈ ಒಂದು ಮರಳು ದಂಧೆಯಿಂದ ಸರಕಾರಕ್ಕೆ ಯಾವುದೇ ರೀತಿಯ ರಾಜಧನ (ರಾಯಲ್ಟಿ) ಹೊಂದಿರುವುದಿಲ್ಲಾ ನಿಯಮ ಪ್ರಕಾರ ಟೆಂಡರ್ ಮೂಲಕ ಮರಳುಗಾರಿಕೆ ನಡೆಸದೆ ಅಕ್ರಮವಾಗಿ ದಂಧೆ ಮಾಡುತ್ತಿರುವುದು ಲೂಟಿ, ಕಳ್ಳತನ, ವಂಚನೆ, ಸರಕಾರದ ಬೊಕ್ಕಸಕ್ಕೆ ನಷ್ಟ ಹಾಗೂ ಸಾರ್ವಜನಿಕ ಆಸ್ತಿಯನ್ನು ಲೂಟಿ ಖಂಡನೀಯವಾಗಿದೆ ಎಂದು ಅವರು ದೂರಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಮುಖಂಡರಾದ ಅಮರದೀಪ ನಾಯಕ್, ಭೀಮು ಪೂಜಾರಿ, ಚನ್ನಬಸವ ಕನಕ, ಅಬ್ದುಲ್ ರೆಹಮಾನ್ ಸೌಕಾರ್, ನರೇಂದ್ರ ಸೂರ್ಯವಂಶಿ, ವಿಶ್ವಜಿತ್ ಕಟ್ಟಿ ಇನ್ನಿತರರು ಇದ್ದರು.

# ಐಟಿಸಿ ಕಪಿಮುಷ್ಠಿಯಲ್ಲಿ ತಂಬಾಕು ಮಂಡಳಿ ಮಾಜಿ ಶಾಸಕ ಮಂಜುನಾಥ್ ಆಕ್ರೋಶ

**ಹುಣಸೂರು:** ತಂಬಾಕು ಖರೀದಿ ದಿಗ್ಗಜ ಐ.ಟಿ.ಸಿ ಕಂಪನಿ ದರ



ನಿಗದಿ ಕುತಂತ್ರದಿಂದ ಇಂದು ರೈತರು ಬೀದಿಗೆ ಬೀಳುವ ಪರಿಸ್ಥಿತಿ ನಿರ್ಮಾಣವಾಗಿದೆ ಹಾಗೂ ರೈತರ ಹಿತ ಕಾಯಬೇಕಿದ್ದ ತಂಬಾಕು ಮಂಡಳಿ ಕೂಡ ಐಟಿಸಿ ಕಪಿಮುಷ್ಟಿಗೆ ಸಿಲುಕಿರುವುದು ಆತಂಕಕಾರಿ ಬೆಳವಣಿಗೆ ಎಂದು ಮಾಜಿ ಶಾಸಕ ಎಚ್.ಪಿ.ಮಂಜುನಾಥ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸತತ ಒಂದು ವಾರದಿಂದ ಐ.ಟಿ.ಸಿ ಹಾಗೂ ಇನ್ನಿತರೆ ತಂಬಾಕು ಖರೀದಿ ಕಂಪನಿ ಹಾಗೂ ತಂಬಾಕು ಮಂಡಳಿಯವರಿಂದ ತಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದ ಮಂಜುನಾಥ್, ಈ ಹಿಂದಿನಿಂದಲೂ ಕೂಡ ತಂಬಾಕು ಬೆಳೆಗಾರರಿಗೆ ಅನ್ಯಾಯವಾಗುತ್ತಿದ್ದು, ಖರೀದಿದಾರ ಕಂಪನಿಗಳು ಸರಿಯಾದ ದರ ನಿಗದಿ ಮಾಡದೆ ಅವರನ್ನು ಸಂಕಷ್ಟಕ್ಕೆ ದೂಡುತ್ತಿದೆ. ಇಡೀ ಪ್ರಪಂಚದಲ್ಲೇ ನಮ್ಮ ಕರ್ನಾಟಕ ಭಾಗದಲ್ಲಿ ಬೆಳೆಯುವ ತಂಬಾಕಿಗೆ ಸೂಕ್ತ ಮಾರುಕಟ್ಟೆ ಹಾಗೂ ಬೇಡಿಕೆ ಇದ್ದರೂ, ಬೆಲೆ ನಿಗದಿ ಮಾಡುವಲ್ಲಿ ಖರೀದಿದಾರ ಕಂಪನಿಗಳು ಪಾರುಪತ್ಯ ಮಾಡುತ್ತ ಬಂದಿವೆ, ಪಕ್ಕದ ರಾಜ್ಯಗಳಲ್ಲಿ ಒಂದು ರೀತಿ ದರ, ನಮ್ಮಲ್ಲಿ ಒಂದು ರೀತಿ ದರ ನಿಗದಿ ಮಾಡಿ ನಮ್ಮ ರೈತರಿಗೆ ಅನ್ಯಾಯ ವೆಸಗುತ್ತಿದ್ದಾರೆ ಎಂದರು.

ಇಷ್ಟೆಲ್ಲಾ ಆಗುತ್ತಿದ್ದರು ನ್ಯಾಯ ಕೊಡಿಸಬೇಕಿರುವ ತಂಬಾಕು ಮಂಡಳಿ ಮಾತ್ರ ನೆಪ ಮಾತ್ರಕ್ಕೆ ಕಾರ್ಯನಿರ್ವಹಿಸುತ್ತಿರುವುದು ನೋಡಿದರೆ ಖರೀದಿದಾರ ಕಂಪನಿಗಳ ಜೊತೆ ಕೈಜೋಡಿಸಿರುವ ಅನುಮಾನ ಮೂಡುತ್ತದೆ ಎಂದು ದೂರಿದರು.

ಮುಂದಿನ ದಿನಗಳಲ್ಲಿ ಖರೀದಿದಾರರು ಹಾಗೂ ಮಂಡಳಿಯವರು ಸೂಕ್ತ ರೀತಿಯಲ್ಲಿ ರೈತರನ್ನು ನಡೆಸಿಕೊಳ್ಳದೆ ಹೋದರೆ ಉಗ್ರ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದೆಂದು ಮಂಜುನಾಥ್ ಎಚ್ಚರಿಸಿದ್ದಾರೆ.


# ಕಬ್ಬು ಬೆಳೆಗಾರರಿಗೆ 300 ಕೋಟಿ ರೂ. ಬಿಡುಗಡೆ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ರಾಜ್ಯ ಸರ್ಕಾರ ಘೋಷಣೆ ಮಾಡಿದಂತೆ 2025-26ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ 50 ರೂ.ಗಳ ಆರ್ಥಿಕ ನೆರವಿನ ಮೊತ್ತ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಮುಖ್ಯಮಂತ್ರಿಗಳು ವಿಧಾನಸೌಧದಲ್ಲಿ ಕಳೆದ ನವಂಬರ್ 8ರಂದು ಕರೆದಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ ನೂರು ರೂ. ಆರ್ಥಿಕ ನೆರವು ನೀಡುವ ನಿರ್ಧಾರ ಪ್ರಕಟಿಸಿದ್ದರು. 100 ರೂ. ಆರ್ಥಿಕ ನೆರವಿನಲ್ಲಿ ರಾಜ್ಯ ಸರ್ಕಾರ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳು 50 ರೂ. ನೀಡಬೇಕು ಎಂಬ ತೀರ್ಮಾನ ಕೈಗೊಳ್ಳಲಾಗಿತ್ತು. ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ 300 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ.

ರಾಜ್ಯದ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆ ಆಧರಿಸಿ ಕಬ್ಬು ಅಭಿವೃದ್ಧಿ ಆಯುಕ್ತರು ಜಿಲ್ಲಾಧಿಕಾರಿಗಳಿಗೆ



ಹಣ ಬಿಡುಗಡೆ ಮಾಡಲಿದ್ದಾರೆ. ರಾಜ್ಯದ ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆ ಮಾಡಿದ ಕಬ್ಬಿನ ಪ್ರಮಾಣ ಆಧರಿಸಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರತಿ ಟನ್‌ಗೆ 50 ರೂ.ಗಳಂತೆ ಜಮಾ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.

ಅದೇ ರೀತಿ ಕಬ್ಬು ಪೂರೈಕೆ ಮಾಡಿದ ರೈತರಿಗೆ ಸಕ್ಕರೆ ಕಾರ್ಖಾನೆಗಳ ಆಡಳಿತ ಮಂಡಳಿಗಳು

> ರಾಜ್ಯ ಸರ್ಕಾರ ಕಬ್ಬು ಬೆಳೆಗಾರರಿಗೆ ಕೊಟ್ಟ ಮಾತಿನಂತೆ ಪ್ರತಿ ಟನ್ ಕಬ್ಬಿಗೆ 50 ರೂ ಆರ್ಥಿಕ ನೆರವಿನಂತೆ ಒಟ್ಟು 300 ಕೋಟಿ ರೂ. ನೆರವು ಬಿಡುಗಡೆ ಮಾಡಿದೆ. ಸಕಾಲದಲ್ಲಿ ನೆರವು ಬಿಡುಗಡೆ ಮಾಡಿದ ಮಾನ್ಯ ಮುಖ್ಯಮಂತ್ರಿಗಳಿಗೆ ರೈತರ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ.
> –ಶಿವಾನಂದ ಪಾಟೀಲ, ಕಬ್ಬು ಅಭಿವೃದ್ಧಿ, ಸಕ್ಕರೆ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಪ್ರತಿ ಟನ್ ಕಬ್ಬಿಗೆ 50 ರೂ. ಆರ್ಥಿಕ ನೆರವು ನೀಡಲು ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸಿದ್ದು, 29 ಕಾರ್ಖಾನೆಗಳಲ್ಲಿ ಕಬ್ಬು ನುರಿಸುವಿಕೆ ಮುಕ್ತಾಯವಾಗಿದೆ. ಇದುವರೆಗೆ 521 ಲಕ್ಷ ಮೆಟ್ರಿಕ್ ಕಬ್ಬು ನುರಿಸಲಾಗಿದ್ದು, ಈ ಹಂಗಾಮಿನಲ್ಲಿ ಸುಮಾರು 600 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ನಿರೀಕ್ಷೆ ಇದೆ ಎಂದು ಸಚಿವರು ವಿವರಿಸಿದ್ದಾರೆ.

ಮಾರ್ಚ್ ಮೊದಲ ವಾರದ ವೇಳೆಗೆ ಪ್ರಸಕ್ತ ಹಂಗಾಮಿನ ಕಬ್ಬು ನುರಿಸುವಿಕೆ ಅಂತ್ಯವಾಗಲಿದೆ. 600 ಲಕ್ಷ ಮೆಟ್ರಿಕ್ ಟನ್ ನುರಿಸುವ ಅಂದಾಜು ಆಧರಿಸಿ 300 ಕೋಟಿ ರೂ. ಆರ್ಥಿಕ ನೆರವು ಬಿಡುಗಡೆ ಮಾಡಲಾಗಿದೆ.

**ಏನಿದು ನೆರವು?:** ಕೇಂದ್ರ ಸರ್ಕಾರ ನಿಗದಿಪಡಿಸಿರುವ ಎಫ್‌ಆರ್‌ಪಿ ದರ ಕಡಿಮೆಯಾಗಿದ್ದು, ಹೆಚ್ಚಳ ಮಾಡಬೇಕು ಎಂದು ಕಬ್ಬು ಬೆಳೆಗಾರರು ಹಂಗಾಮು ಆರಂಭದ ಪೂರ್ವದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಧರಣಿ ಆರಂಭಿಸಿದ್ದರು.

ಈ ಹಿನ್ನೆಲೆಯಲ್ಲಿ ಸಮಸ್ಯೆ ಪರಿಹಾರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರು ವಿಧಾನಸೌಧದಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆ ಕರೆದಿದ್ದರು.

ರೈತರ ಅಭಿಪ್ರಾಯ ಆಲಿಸಿದ ಮುಖ್ಯಮಂತ್ರಿಗಳು ಪ್ರತಿ ಟನ್ ಕಬ್ಬಿಗೆ ಹೆಚ್ಚುವರಿಯಾಗಿ ನೂರು ರೂ. ಕೊಡಿ ಎಂದು ಸಕ್ಕರೆ ಕಾರ್ಖಾನೆಗಳ ಮಾಲೀಕರಿಗೆ ಮನವಿ ಮಾಡಿದ್ದರು. ಆದರೆ ಕಾರ್ಖಾನೆಗಳ ಮಾಲೀಕರು, ನಷ್ಟದ ಕಾರಣ ಹೆಚ್ಚುವರಿ ನೂರು ರೂ. ಕೊಡಲು ಸಾಧ್ಯವಿಲ್ಲ ಎಂದು ಹೇಳಿದ್ದರು.

ಆಗ ಮುಖ್ಯಮಂತ್ರಿಗಳು ಸರ್ಕಾರ 50 ರೂ. ಕೊಡಲಿದೆ. ಕಾರ್ಖಾನೆಗಳ ಮಾಲೀಕರು 50 ರೂ. ಕೊಡಬೇಕು ಎಂದು ನಿರ್ಧಾರ ಪ್ರಕಟಿಸಿದ್ದರು.

# ಜೋಳ ಖರೀದಿ: ಅಧಿಕಾರಿಗಳು ಎಚ್ಚರ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಮುಂದಿನ ಮಾರ್ಚ್ ತಿಂಗಳ ಮೊದಲನೇ ವಾರದಲ್ಲಿ ದಿನಾಂಕದೊಳಗೆ ಜೋಳ ಖರೀದಿಗೆ ಸಕಾಲ ಕುರಿತು ಎಲ್ಲ ಸಿದ್ಧತೆಯನ್ನು ಮಾಡಿಸಿಕೊಳ್ಳಬೇಕು ಮತ್ತು ಗುಣಮಟ್ಟದ ಖರೀದಿ ಮಾಡಬೇಕೆಂದು ಲಿಂಗಸುಗೂರು ಸಹಾಯಕ ಬಸವಣ್ಣೆಪ್ಪ ಕಲ್ ಶೆಟ್ಟಿ ಅವರು ನೇತೃತ್ವದಲ್ಲಿ ಅಧಿಕಾರಿಗಳ ಸಭೆಯನ್ನು ನಡೆಸಲಾಯಿತು.

ಮೊದಲ ನೋಂದಣಿಯಾಗಿರವ ಮೊದಲ ರೈತರು ಜೋಳವನ್ನು ಖರೀದಿಸಲು ಅಧಿಕಾರಿಗಳು ಯಾವುದೇ ಗೊಂದಲ ಸೃಷ್ಟಿ ಮಾಡಿಕೊಳ್ಳದೆ ಗುಣಮಟ್ಟದ ಖರೀದಿ ಮಾಡಬೇಕೆಂದರು. ಸಮಯಕ್ಕೆ ಸರಿಯಾಗಿ ಗೋಣಿ ಚೀಲ ನೀಡಬೇಕು. ಯಾವುದೇ ಕಾರಣಕ್ಕೂ ಹಮಾಲರ ಸಮಸ್ಯೆಗಳು ಮುಂಚಿತವಾಗಿ ಬಗೆಹರಿಸಿ ತೂಕದಲ್ಲಿ ವ್ಯತ್ಯಾಸಗಳು ಲೋಪ ದೋಷಗಳನ್ನು ಕಂಡು ಬರದಂತೆ ಅಧಿಕಾರಿಗಳು ಎಚ್ಚರ ವಹಿಸಿ ಜೋಳವನ್ನು ಖರೀದಿಸಲು ಮುಂದಾಗಬೇಕು. ಸರಿಯಾಗಿ ಕಾರ್ಯ ನಿಭಾಯಿಸಲು ಮೇಲ್ವಿಚಾರಕ



ನೋಡಲು ಅಧಿಕಾರಿಗಳು ತಂಡವನ್ನು ರಚಿಸಲಾಗಿದೆ ಎಂದು ಹೇಳಿದರು. ಕಳೆದ ವರ್ಷದಲ್ಲಿ ಜೋಳವನ್ನು ಖರೀದಿಸುವುದರಲ್ಲಿ ಅಧಿಕಾರಿಗಳಿಂದ ಕೆಲ ಸಮಸ್ಯೆಗಳು ಉಂಟಾಗಿದ್ದು. ಈ ಬಾರಿ ಮರುಕಳಿಸದಂತೆ ಎಚ್ಚರವಹಿಸಿ ಎಲ್ಲಾ ರೀತಿಯ ಸಕಲ ಸಿದ್ಧತೆ ಮಾಡಿಕೊಂಡು ಖರೀದಿಗೆ ಮುಂದಾಗಬೇಕೆಂದರು. ಒಂದು ವೇಳೆ ಜೋಳ ಖರೀದಿ ವಿಚಾರದಲ್ಲಿ ಯಾವುದೇ ಲೋಪ ದೋಷಗಳನ್ನು ಕಂಡು ಬಂದರೆ ಬಹಿರಂಗವಾಗಿ ಹೇಳಿಕೆ ನೀಡಿ ಅಂತವರು ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಲಿಂಗಸುಗೂರು ಸಹಾಯಕ ಬಸವಣ್ಣೆಪ್ಪ ಕಲ್ ಶೆಟ್ಟಿ ಎಚ್ಚರಿಕೆ ನೀಡಿದರು.

# ಹಡಪದ ಸಮಾಜಕ್ಕೆ ಅನ್ಯಾಯವಾಗದಂತೆ ಸರಕಾರ ಕ್ರಮ ಕೈಗೊಳ್ಳಬೇಕು: ಭಾಲ್ಕಿ ಶ್ರೀ

• ಪರಶುರಾಮ ಕರಣಂ, ಭಾಲ್ಕಿ

ವಿಶ್ವಗುರು ಬಸವಣ್ಣನವರ ಹಾಗೂ ಹಡಪದ ಅಪ್ಪಣ್ಣನವರ ಆಪ್ತಸಂಬಂಧವನ್ನು ಶರಣ ಚರಿತ್ರೆಯ ಇತಿಹಾಸದಲ್ಲಿ ಎಲ್ಲಾ ಕಡೆ ನಾವು ನೋಡುತ್ತೇವೆ. ವಿಶ್ವಗುರು ಬಸವಣ್ಣನವರು ಅಪ್ಪಣ್ಣನವರನ್ನು ಆಪ್ತಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡಿರುವುದು ಚರಿತ್ರೆಕಾರರು ಹೇಳುತ್ತಾರೆ. ಶರಣರ ಅನೇಕ ಪ್ರಸಂಗಗಳಲ್ಲಿ ಹಡಪದ ಅಪ್ಪಣ್ಣನವರ ಪಾತ್ರ ಎದ್ದು ಕಾಣುತ್ತದೆ. ವಿಶೇಷವಾಗಿ ಅಲ್ಲಮಪ್ರಭುಗಳು ಸೊನ್ನಲಿಗೆ ಸಿದ್ಧರಾಮನನ್ನು ಕರೆದುಕೊಂಡು ಕಲ್ಯಾಣದ ಮಹಾಮನೆಗೆ ಆಗಮಿಸಿದಾಗ ಹಡಪದ ಅಪ್ಪಣ್ಣನವರು ನಿರ್ವಹಿಸಿದ ಪಾತ್ರ ಶೂನ್ಯ ಸಂಪಾದನೆಯಲ್ಲಿ ಚಿತ್ರಿಸಲಾಗಿದೆ. ಹಾಗೆಯೇ ಬಸವಣ್ಣನವರು ಕಲ್ಯಾಣವನ್ನು ಬಿಟ್ಟು ಕೂಡಲಸಂಗಮಕ್ಕೆ ಹೋಗುವಾಗ ಅವರ ಜೊತೆ ಇದ್ದಿರುವ ಏಕೈಕ ವ್ಯಕ್ತಿ ಎಂದರೆ ಹಡಪದ ಅಪ್ಪಣ್ಣನವರು. ತಾತ್ಪರ್ಯವೆಂದರೆ, ಎಲ್ಲಿ ಬಸವಣ್ಣನವರು ಇರುತ್ತಿದ್ದ-ರೊ ಅಲ್ಲಿ ಹಡಪದ ಅಪ್ಪಣ್ಣನವರು ಇರುತ್ತಿದ್ದರು.



ಕಲ್ಯಾಣದಲ್ಲಿ ಅರಿವಿನ ಮನೆ ಬಸವಣ್ಣನವರ ಧ್ಯಾನ, ಪೂಜೆ, ತಪಸ್ಸು ಮಾಡಿದ ಸಾಧನಾಗೃಹ ಎಂಬುದು ಸರ್ವವಿದಿತವಾಗಿದೆ. ಅದರ ಪಕ್ಕದಲ್ಲಿರುವ ಗವಿಯನ್ನು ಹಡಪದ ಅಪ್ಪಣ್ಣನವರ ಗವಿಯೆಂದೇ ಗುರುತಿಸಲಾಗುತ್ತಿತ್ತು. ಆದ-ರೆ ಇತ್ತೀಚೆಗೆ ಅದನ್ನು ಬದಲಾಯಿಸಿ, ಹಡಪದ ಸಮಾಜದ ಮೇಲೆ ಅನ್ಯಾಯ ಮಾಡಲಾಗಿದೆ. ಅದಕ್ಕಾಗಿ ಸರಕಾರ ಬಸವಣ್ಣನವರ ಅರಿವಿನ ಮನೆಯ ಪಕ್ಕದಲ್ಲಿ ಇರುವ ಹಡಪದ ಅಪ್ಪಣ್ಣನವರ ಗವಿಗೆ ರಕ್ಷಣೆ ಹಾಗೂ ಸಂವರ್ಧನೆ ಮಾಡುವ ಮೂಲಕ ಸರಕಾರ ಹಡಪದ ಸಮಾಜಕ್ಕೆ ನ್ಯಾಯ ಒದಗಿಸಬೇಕೆಂದು ಅನುಭವಮಂಟಪದ ಅಧ್ಯಕ್ಷರಾದ ನಾಡೋಜ ಶ್ರೀ ಡಾ.ಬಸವಲಿಂಗ ಪಟ್ಟದ್ದೇವರು ಪ್ರಕಟಣೆಯ ಮೂಲಕ ಒತ್ತಾಯಿಸಿದ್ದಾರೆ.

# ಭ್ರಷ್ಟಾಚಾರದ ಮಾಹಿತಿಯನ್ನು ಬಹಿರಂಗ ಪಡಿಸಿದ ಭಕ್ತರು

• ಶರಣಬಸಪ್ಪ ದಾನಕೈ, ಯಲಬುರ್ಗಾ

ಶ್ರೀ ಸಿದ್ದರಾಮೇಶ್ವರ ಸಂಸ್ಥಾನ ಹಿರೇಮಠದ ಯಲಬುರ್ಗಾದ ಪೀಠಾಧಿಪತಿಗಳು ಹಾಗೂ ಭಕ್ತರ ಮಧ್ಯೆ ಎರಡು ವರ್ಷದಿಂದ ವಾದ ವಿವಾದಗಳಿಂದ ನಿರಂತರವಾಗಿ ಬೂದಿ ಮುಚ್ಚಿದ ಕೆಂಡದಂತೆ ವಾತವರಣ ನಿರ್ಮಾಣವಾಗಿದೆ. ಕೆಲವು ಭಕ್ತರು ಪೂಜ್ಯರ ಪರವಾಗಿ , ಇದರಲ್ಲಿ ಇನ್ನೂ ಕೆಲವು ಭಕ್ತರು ಪೂಜ್ಯರ ವಿರುದ್ಧವಾಗಿ ಈ ಭಕ್ತರು ಧಾರ್ಮಿಕ ಕಾರ್ಯಕ್ರಮವನ್ನು ಮಾಡುತ್ತಾ ಬಂದಿರುತ್ತಾರೆ. ವಾದ ವಿವಾದ ಜರುಗುವುದಕ್ಕೆ ಹಿನ್ನೆಲೆ ಎನು ? ಶ್ರೀಮಠದಲ್ಲಿ ರೇವಣಸಿದ್ದಯ್ಯ ಎಂಬ ವ್ಯಕ್ತಿ ಮಠದಲ್ಲಿ ಸೇರಿಕೊಂಡು ಪೂಜಾ ಕಾರ್ಯದಲ್ಲಿ ನಿರತನಾದ, ಶ್ರೀಗಳು ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಆತನಿಗೆ ಕೆಲಸ ಕೊಟ್ಟಿದ್ದರು, ಆದರೆ ಒಂದು ದಿನ ಶ್ರೀ ರೇವಣಸಿದ್ದಯ್ಯನನ್ನು ಪೀಠಾಧಿಪತಿಯವರ ಸಹೋದರ ಪ್ರಸನ್ನ ಅವರು ರೇವಣಸಿದ್ದಯ್ಯ ವ್ಯಕ್ತಿಗೆ ಕಪಾಳ ಮೋಕ್ಷ ಮಾಡಿದ್ದಾರೆ.

ಈ ವಿಷಯವನ್ನು ಹಿರಿಯರಾದ ಮುದಕಪ್ಪ




ಮಾಸ್ತಾರ ನೇರೆಗಲ್ಲ್ ಹಾಗು ಫಕಿರಪ್ಪ ಬೇದವಟ್ಟಿ ಹಾಗು ಹಿರಿಯರಿಗೆ ತಿಳಿಸಿದಾಗ , ಹಿರಿಯರ ಸಮ್ಮುಖದಲ್ಲಿ ವೀರನಗೌಡ ಬನ್ನಪ್ಪಗೌಡ್ರ ಶ್ರೀಗಳನ್ನು ಪ್ರಶ್ನಿಸಿದಾಗ ಶ್ರೀಗಳು ನೀನು ಮಠಕ್ಕೆ ಸಂಬಂದವಿಲ್ಲ ಎಂದಿದ್ದಾರೆ. ಆಗ ಪ್ರಾರಂಭವಾದ ಕಿಡಿ ಇಂದು ಜ್ವಾಲೆಯಾಗಿ ಹೊತ್ತಿ ಉರಿಯುತ್ತಿದೆ. ಶ್ರೀಗಳವರ 26 ನೇ ಪಟ್ಟಾಧಿಕಾರ ಅಂಗವಾಗಿ ಕೆಲವು ಭಕ್ರರು ಸೇರಿ ಶ್ರೀಗಳವರಿಗೆ ಸನ್ಮಾನ ಗೌರವ ಅರ್ಪಿಸಿ ಮಾತನಾಡಿ ಒಂದು ಗೂಡಿ ಹೋಗೋಣ ಎಂದರು.

ನಂತರ ಶ್ರೀಗಳು ಮಾತನಾಡಿ ನನ್ನ ಅವದಿಯಲ್ಲಿ



ಮಠ ಸಾಕಷ್ಟು ಅಭಿವೃದ್ಧಿಯಾಗಿದೆ ಕೆಲವರು ತಮ್ಮ ಸ್ವಾರ್ಥಕ್ಕಾಗಿ ಮಾತನಾಡುತ್ತಾರೆ ಎಂದಿದ್ದರು, ಇದನ್ನ ಗಮನಿಸಿದ ಶ್ರೀಗಳವರ ವಿರುದ್ದ ವಿರುವ ಭಕ್ತರು ಪ್ರತಿ ವಾರ್ಡಗಳಲ್ಲಿ ಸಭೆ ನಡೆಸಿ ,ಶ್ರೀ ಮಠದ ಪೂಜ್ಯರ ತಂದೆಯವರು ಹಾಗು ಈಗಿನ ಪೀಠಾಧಿಪತಿಗಳ ಸಹೋದರರು ಶ್ರೀ ಮಠದ ಆಸ್ತಿಯನ್ನು ನುಂಗಿ ನೀರು ಕುಡಿದ್ದಾರೆ. ನಾವು ಸುಮ್ಮನೆ ಕುಳಿತರೆ ಮುಂದಿನ ದಿನಮಾನದಲ್ಲಿ ನಮ್ಮನ್ನು ಮತ್ತು ಮಠವನ್ನು ಗುಳುಂ, ಗುಳುಂ ಅಂತ ನುಗ್ಗಿ ಬಿಡುತ್ತಾರೆ.

ಆದ್ದರಿಂದ್ಲ ಭಕ್ತರು ಸೇರಿ ಕೊಂಡು ಹೋರಾಟ ಮಾಡಿದಾಗ ಜಯ ಸಾದಿಸಬಹುದು, ಮಠದ ಆಸ್ತಿ 450 ಎಕರೆಗಿಂತ ಅಧಿಕವಾಗಿದೆ, ಮಹಾರಾಜರ ಆಳ್ವಿಕೆಯಲ್ಲಿ ಮಠಕ್ಕೆ ಜಮೀನು ಕೊಟ್ಟಿದ್ದರು. ನಂತರ ಉಳ್ಳುವವನೇ ಭೂಮಿಯ ಒಡೆಯ ಎಂಬ ಯೋಜನೆ ಬಂದಾಗ 150 ಎಕರೆ ಜಮೀನು ಉಳುಮೆ ಮಾಡುತ್ತಿದ್ದ ರೈತರಿಗೆ ಹೋಗಿದೆ. ಇದರಲ್ಲಿ ಡಾ. ಶರಣಪ್ಪ ಕೊಪ್ಪಳ ಇವರಿಗೆ 51 ಎಕರೆ ಜಮೀನು ಕೊಟ್ಟಿದ್ದರು. ನಂತರ ಇವರಿಗೆ ಇದ್ದ ಜಮೀನು ಮಾರಿ ಅದರ ಹಣವನ್ನು ಈಗಿನ ಪೀಠಾಧಿಕಾರಿ ಇವರ ತಂದೆಯವರು ಪಡೆದುಕೊಂಡರು ಹೀಗೆ ಮಠದ ಆಸ್ತಿ ಹಂಚಿ ಹರಿದು ಹೋಗಿದೆ ಎಂದು ಶ್ರೀ ಸಿದ್ದರಾಮೇಶ್ವರ ಟ್ರಸ್ಟ್ ಕಮೀಟಿಯವರು ಪೂಜ್ಯರ ಕಾರ್ಯ ವೈಕರಿಯ ಬಗ್ಗೆ ಯಲಬುರ್ಗಾ ನಗರದ ಪ್ರತಿಯೊಂದು ವಾರ್ಡಗಳಲ್ಲಿ ಭಕ್ತರ ಜಾಗೃತಿ ಸಭೆ ನಡೆಸಿ, ಮಠದ ಸ್ವಾಮೀಜಿ ಅವರು ಸುಳ್ಳು ದಾಖಲೆ ಸೃಷ್ಟಿಸಿ ಮಠದ ಆಸ್ತಿಯನ್ನು ನುಂಗಿದ್ದಾರೆ. ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಸರಿದಾರಿಯಲ್ಲಿ ಹೋದರೆ ಎಲ್ಲರಿಗೂ ಸಂತಸವಾಗುತ್ತದೆ ಎನ್ನುವದು ಭಕ್ತರ ಆಶಯವಾಗಿದೆ.

# ಹುಸಿನಗು: ಮುಖವಾಡದ ಹಿಂದಿನ ಮಹಾನಾಯಕ



ಭೋಗ-ಐಭೋಗ

• ವೀರಣ್ಣ ಕಲಕೇರಿ

ಕೆಂಭಾವಿ

ತನ್ನ ಅದ್ಭುತ ನಟನೆಗೆ ಶಿಳ್ಳೆ-ಚಪ್ಪಾಳೆಗಳ ಹಂಗಿಗೊಳಗಾದೆ ಸಂಭಾವನೆಯ ನಿರೀಕ್ಷೆಯೂ ಇಲ್ಲದೆ. ಜಗದ ರಂಗಭೂಮಿಯ ಮೇಲೆ ಪ್ರತಿಕ್ಷಣವೂ ನಟಿಸುತ್ತಾ, ತನ್ನೆಲ್ಲಾ ನೋವುಗಳನ್ನು ನಗುವಿನ ಮುಖವಾಡದ ಹಿಂದೆ ಮರೆಮಾಡಿಕೊಂಡಿರುವ ಒಬ್ಬ ವಿಶಿಷ್ಟ ಕಲಾವಿದನಿದ್ದಾನೆ. ಆತ ಧರಿಸಿರುವ ಆ ಮುಖವಾಡ ಕೇವಲ ವೃತ್ತಿಯ ಭಾಗವಲ್ಲ; ಅದು ಆತನ ಬದುಕಿನ ಅನಿವಾರ್ಯತೆ ಕೂಡ ಹೌದು. ಯಾರು ಈ ನಾಯಕ? ಯಾವ ಸಂಕಟಗಳನ್ನು ನುಂಗಿ ನಗುತ್ತಿದ್ದಾನೆ? ಹೊರಜಗತ್ತಿಗೆ ಕಾಣುವ ಈ ಸುಂದರ ನಗುವಿನ ಹಿಂದೆ ಅದೆಂತಹ ಕಾಣದ ವೇದನೆ ಅಡಗಿದೆ? ತನ್ನ ಅಸ್ತಿತ್ವವನ್ನೇ ಕರಗಿಸಿಕೊಂಡು ಮಗದೊಬ್ಬರ ಬಾಳಿಗೆ ಬೆಳಕಾಗುವ ಈ 'ಮುಖವಾಡದ ನಾಯಕನ' ಪರಿಚಯ ತಮಗೂ ಇಲ್ಲದಿಲ್ಲ.

ನಿಜಕ್ಕೂ ಈ ಬದುಕಿನ ರಂಗಮಂಟಪದ ಮೇಲೆ ಮುಖವಾಡ ಧರಿಸಿ ಬದುಕುವವನಿಗೆ ಜಗತ್ತಿನ ಯಾವ ಮಹಾನ್ ಕಲಾವಿದನೂ ಸಾಟಿಯಾಗಲಾರ. ಕಲಾವಿದನಿಗೆ ನಟನೆ ಎಂಬುವುದು ಕಲೆಯಾದರೆ, ಇವನಿಗೆ ಅದು ಬದುಕಿನ ಅನಿವಾರ್ಯತೆ. ಈ ಮುಖವಾಡವೇ ಆತನ ಅಸ್ತಿತ್ವ; ಅದು ಕಳಚಿಬಿದ್ದರೆ ತನ್ನವರ ನಂಬಿಕೆ ಮತ್ತು ಧೈರ್ಯ ಕುಸಿದುಬೀಳಬಹುದು ಎಂಬ ಆತಂಕ ಅವನದ್ದು.

ಈತ ನಗುತ್ತಾನೆ ಆದರೆ ಆ ನಗುವಿನಲ್ಲಿ ಖುಷಿಯ ಹನಿಗಳಿಲ್ಲ, ಬದಲಾಗಿ ಸಾವಿರಾರು ನೋವುಗಳನ್ನು ಮರೆಮಾಚಿದ ಅದೃಶ್ಯ ವೇದನೆ ಇದೆ. ತನ್ನ ಆಸೆ, ಆತಂಕ ಮತ್ತು ಕಣ್ಣೀರನ್ನು ಮರೆಮಾಚಲು ಈ ನಗೆಯ ಮುಖವಾಡವನ್ನು ಆತ ಒಂದು ಕವಚವನ್ನಾಗಿ ಬಳಸುತ್ತಾನೆ. ಒಳಗೆ ಮನಸ್ಸು ಯಾವುದೋ ಅಧೈರ್ಯವೆಂಬ ಗರಗಸದಿಂದ ಕೊರೆಯುತ್ತಿದ್ದರೂ, ಮನೆಗೆ ಬರುವಾಗ ಆ ಮುಖದ ಮೇಲೆ ಒಂದು ಹುಸಿ ನಗು ಇರಲೇಬೇಕು. ಯಾಕೆಂದರೆ, ತನ್ನ ಮುಖ ಬಾಡಿದರೆ ಇಡೀ ಮನೆಯ ಭರವಸೆ ಕುಸಿದುಬೀಳುತ್ತದೆ ಎಂಬ ಅರಿವು ಆತನಿಗಿರುತ್ತದೆ. ಬದುಕು ಕಟ್ಟಿಕೊಡುವ, ಇತರರಲ್ಲಿ ವಿಶ್ವಾಸ ಬಿತ್ತುವ ಮತ್ತು ಬಡತನದ ನಡುವೆಯೂ ಬಾಗದ ಸ್ವಭಿಮಾನಿ ನಾಯಕ.

ಈ ನಟ ಈಗಾಗಲೇ ನಿಮಗೆ ಪರಿಚಯವಾಗಿರಲೇಬೇಕು, ಏಕೆಂದರೆ ಆತ ನಿಮ್ಮ ಮನೆಯಲ್ಲಿಯೇ ಇದ್ದಾನೆ. ನಿಮಗಾಗಿ ತನ್ನೆಲ್ಲವನ್ನೂ ತ್ಯಾಗ ಮಾಡುತ್ತಿರುವ ಈತ ನಿಮಗೆ ತಂದೆಯಾಗಿ, ಅಣ್ಣನಾಗಿ, ಪತಿಯಾಗಿ ಅಥವಾ ಮಗನಾಗಿ... ಹೀಗೆ ಯಾವುದೋ ಒಂದು ಸಂಬಂಧದಲ್ಲಿ ಬೆನ್ನೆಲುಬಾಗಿ ನಿಂತಿದ್ದಾನೆ. ತೆ-ೞರಿಕೆಯ ಮಧ್ಯಮ ವರ್ಗದ ಬದುಕಿನಲ್ಲೂ ಬಡತನದ ಬೇಗೆಯನ್ನು ಅರಿತವನು. ಸ್ವಾಭಿಮಾನದ ಸಾಹುಕಾರನೆಂದು ಕರೆಸಿಕೊಂಡರೂ, ತನ್ನೊಳಗಿನ



ಕೊರತೆಗಳ ಬೆಂಕಿಯಲ್ಲಿ ನಿತ್ಯವೂ ಬೇಯುವವನು. ಮನೆ, ಮಕ್ಕಳು, ವೃದ್ಧ ತಂದೆ ತಾಯಿ, ಪತ್ನಿ ಹೀಗೆ ಮನೆಯವರ ಎಲ್ಲಾ ಬೇಕುಗಳಿಗೆ ಆಧಾರವಾಗಿ ಮನೆಯವರ ಸಂತೋಷಕ್ಕಾಗಿ ತನ್ನ ನೋವನ್ನು ನುಂಗಿ, ನಗುವನ್ನೇ ಬಲಿಕೊಡುತ್ತಾ ಬಂದವನಲ್ಲವೆ? ಈ ಮಹಾದಾನಿ. ತನ್ನ ವೇದನೆಯನ್ನು ಯಾರ ಮುಂದೂ ಹಂಚಿಕೊಳ್ಳದೆ ಒಳಗೆಯೇ ಬಚ್ಚಿಟ್ಟುಕೊಳ್ಳುವ ಮೌನಿ ಎಂದರೂ ತಪ್ಪಾಗಲಾರದು ಎನಿಸುತ್ತದೆ.

ಹೆಗಲ ಮೇಲೆ ಜವಾಬ್ದಾರಿಗಳ ದೊಡ್ಡ ಹೊರೆಯಿದ್ದರೂ, ಆ ಭಾರದ ಅರಿವಾಗದಂತೆ ಪ್ರಬುದ್ಧತೆಯಿಂದ ನಿಭಾಯಿಸುವ ಸಾಹಸಿ. "ನನ್ನ ವೈಯಕ್ತಿಕ ನೋವು ಮಗದೊಬ್ಬರಿಗೆ ಹೊರೆಯಾಗಬಾರದು" ಎಂಬ ಸೂಕ್ಷ್ಮತೆಯೊಂದಿಗೆ, ಮನೆಯವರ ಭಾವನೆಗಳಿಗೆ ಸದಾ ಸ್ಪಂದಿಸುತ್ತಾ ಎಲ್ಲವನ್ನೂ ತಾನೊಬ್ಬನೇ ನಿಭಾಯಿಸಬೇಕು ಎಂಬ ಒತ್ತಡವೆ ತನ್ನ ಶತ್ರುವಾಗಿಸಿಕೊಂಡವನು. ತನ್ನ ನೋವನ್ನು ಹಂಚಿಕೊಂಡರೆ ಎಲ್ಲಿ ತನ್ನ ಸ್ಥಾನಕ್ಕೆ ಧಕ್ಕೆ ಬರಬಹುದು ಅಥವಾ ಮನೆಯವರು ಆತಂಕಕ್ಕೊಳಗಾಗಬಹುದು ಎಂಬ ಕಾಳಜಿಯಿಂದ ಅಂತರಮುಖಿಯಾಗಿ ತನ್ನ ಭಾವನೆಗಳನ್ನು ಹತ್ತಿಕ್ಕಿ, ಕುಟುಂಬದ ಗೌರವವನ್ನು ಎತ್ತಿ ಹಿಡಿದು, ಕರುಣೆ, ಪ್ರೀತಿ, ಕಾಳಜಿಗಳ ಸಾರವನ್ನೇ ತುಂಬಿಕೊಂಡು ಹೃದಯ ಭಾರ ಮಾಡಿಕೊಂಡವನು.

ಸಂತೆಯಂತಿರುವ ಈ ಪ್ರಪಂಚದಲ್ಲಿ ತನ್ನವರಿಗಾಗಿ ಭರವಸೆಯ ಬುತ್ತಿಯಾಗಿ, ಒಂಟಿ ಸಲಗದಂತೆ ಹೋರಾಡುವ, ಮೌನವಾಗಿ ಎಲ್ಲವನ್ನು ನುಂಗಿಕೊಂಡ ಈ ಹೋರಾಟಗಾರನಿಗೆ ನಿಮ್ಮ (ಮನೆಯವರ) ಅತೀವ ಸಾಂತ್ವನದ ಮಾತೂ ಬೇಕಿಲ್ಲ, ಬದಲಾಗಿ, "ನಿನ್ನ ಜೊತೆ ನಾವಿದ್ದೇವೆ" ಎಂಬ ಒಂದು ಸಣ್ಣ ಭರವಸೆ ನೀಡಿ ಸಾಕು, ಅದೇ ಅತನಲ್ಲಿ ಮತ್ತೆ ಬಲ ತುಂಬಿಕೊಳ್ಳುತ್ತೆ ಎಂದು ಹೇಳುತ್ತಾ ಮುಖವಾಡದ ಹಿಂದಿನ ನಾಯಕನಿಗೆ ಇಲ್ಲಿಗೆ ಅಲ್ಪವಿರಾಮ ನೀಡುತ್ತೇನೆ, ಏಕೆಂದರೆ ಅವನ ಹೋರಾಟ ಎಂದಿಗೂ ನಿರಂತರ. ಪ್ರಶಂಸೆ ಇಲ್ಲದಿದ್ದರೂ ಬರವಸೆಯ ಮಾತು ನಿಮ್ಮದಾಗಿರಲಿ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)